● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಸಿಹಿ-ಹುಳಿ-ಉಪ್ಪು-ಕಹಿ-
ಖಾರ-ಒಗರು ಆರು ರುಚಿಗಳ
ಷಡ್ರಸಭೋಜನ, ಸುಖ-ದುಃಖಗಳ
ಸಮತೋಲನ – ಹೀಗೆ ಎಲ್ಲವನ್ನೂ
ಸ್ವೀಕರಿಸುವ, ಒಪ್ಪಿಕೊಳ್ಳುವ
ಮನೋಭಾವ ಬೇಕು...

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,925 ▲	16,661 ▲	₹52,720 (ಬೆಂಗಳೂರು)	₹64,200 (ಬೆಂಗಳೂರು)	77.54 ▲

ಕುವೆಂಪುಗೆ ಅವಮಾನ: ವಿರೋಧದ ಅಲೆ

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ವಜಾಕ್ಕೆ ಹೆಚ್ಚಿದ ಒತ್ತಡ: ರೋಹಿತ್ ಚಕ್ರತೀರ್ಥ ಬೆಂಬಲಕ್ಕೆ ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಗೀತೆ ಹಾಗೂ ಕವಿ ಕುವೆಂಪು ಅವರಿಗೆ ಅವಮಾನ ಮಾಡಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವ ರೋಹಿತ್ ಚಕ್ರತೀರ್ಥ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಮತ್ತು ಅವರ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯನ್ನು ವಜಾ ಮಾಡಬೇಕು ಎಂಬ ಆಗ್ರಹ ಬಲಗೊಳ್ಳುತ್ತಿದೆ. ಈ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಪ್ರತಿರೋಧದ ಅಲೆಯೂ ಬಿರುಸುಗೊಳ್ಳುತ್ತಿದೆ.


‘ಸಮಿತಿ ವಜಾಗೊಳಿಸುವ ಜತೆಗೆ ರೋಹಿತ್ ಬೆಂಬಲಕ್ಕೆ ನಿಂತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿ ರಾಜ್ಯದ ವಿವಿಧೆಡೆ ಪ್ರಗತಿಪರ ಮತ್ತು ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಿವೆ.

‘ನಾಡಗೀತೆಯನ್ನು ತಿರುಚಿದವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಪತ್ರ ಬರೆದಿದ್ದ ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಸರ್ಕಾರ ಸ್ಥಾಪಿಸಿರುವ ‘ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ’ದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅದರ ಬೆನ್ನಲ್ಲೇ, ‘ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ’ದ ಅಧ್ಯಕ್ಷ ಸ್ಥಾನಕ್ಕೆ ಎಸ್.ಜಿ. ಸಿದ್ಧರಾಮಯ್ಯ ರಾಜೀನಾಮೆ ಕೊಟ್ಟಿದ್ದಾರೆ. ಸರ್ಕಾರಕ್ಕೆ ಪತ್ರ ಬರೆದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ, ‘ನಾಡಗೀತೆ ತಿರುಚಿರುವ ವ್ಯಕ್ತಿ ವಿರುದ್ಧ ತಡಮಾಡದೇ ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಈ ಬೆಳವಣಿಗೆಗಳ ಮಧ್ಯೆಯೇ, ಬೆಂಗಳೂರಿನ ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಠದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿಯಾದ ಸಚಿವ ನಾಗೇಶ್, ಪಠ್ಯಪುಸ್ತಕದ ಬಗ್ಗೆ ವಿವರ ನೀಡಿ, ಮನವೊಲಿಸುವ ಯತ್ನ ಮಾಡಿದ್ದಾರೆ.

8ನೇ ಪುಟ ನೋಡಿ

ಪ್ರತಿಷ್ಠಾನಕ್ಕೆ ಹಂಪನಾ ರಾಜೀನಾಮೆ



‘ಕುವೆಂಪು ಅವರನ್ನೂ ಹಾಗೂ ನಮ್ಮ ನಾಡಗೀತೆಯನ್ನು ಅಪಮಾನಿಸಿರುವ ವ್ಯಕ್ತಿಯ ವಿರುದ್ಧ ಕ್ರಮಕೈಗೊಳ್ಳುವ ಮೊದಲು ಜವಾಬ್ದಾರಿಯ ಸ್ಥಾನವನ್ನು ಅವರಿಗೆ ನೀಡಿದೆ. ಇದು ಅಪಾಯಕಾರಿ ಬೆಳವಣಿಗೆ. ಇದನ್ನು ನೋಡಿಕೊಂಡು ತೆಪ್ಪಗಿರುವುದು ಕಷ್ಟವಾಗಿದೆ’ ಎಂದು ಪ್ರತಿಪಾದಿಸಿರುವ ಸಾಹಿತಿ ಹಂ.ಪ. ನಾಗರಾಜಯ್ಯ ಅವರು, ಸರ್ಕಾರ ಸ್ಥಾಪಿಸಿರುವ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, ‘ಭಾರತೀಯ ಸಾಹಿತ್ಯದಲ್ಲಿ ಕನ್ನಡಕ್ಕೂ ಕರ್ನಾಟಕಕ್ಕೂ ಗೌರವ ತಂದಿರುವ ಕುವೆಂಪು ಅವರು ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದ ಮೊದಲಿಗರು. ಸರ್ಕಾರ ಅವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿತಲ್ಲದೇ ‘ಕರ್ನಾಟಕ ರತ್ನ’ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. ಕುವೆಂಪು ಮಾತ್ರವಲ್ಲದೇ, ಅವರು ಹುಟ್ಟಿದ ಜನಾಂಗವನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ ನಾಡಗೀತೆಯನ್ನೂ ಲೇವಡಿ ಮಾಡಿದ ವ್ಯಕ್ತಿಗೆ ಸರ್ಕಾರ ಜವಾಬ್ದಾರಿಯ ಸ್ಥಾನ ನೀಡಿದೆ. ಇದರಿಂದ ‘ಪುಣ್ಯಶ್ಲೋಕರ ಮೇಲೆ ಕೆಟ್ಟ ಮಾತುಗಳ ಮಳೆ ಸುರಿಸಿದರೆ ಅಂಥವರಿಗೆ ಸರ್ಕಾರದ ಸಮಿತಿಗಳಲ್ಲಿ ಸದಸ್ಯರಾಗುವ ಸದವಕಾಶಗಳಿವೆ’ ಎಂಬ ತಪ್ಪು ಸಂದೇಶ ರವಾನೆಯಾಗಿದೆ. ವ್ಯಕ್ತಿಗಳ ತೇಜೋವಧೆಯನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂಬ ನಂಬಿಕೆ ಹುಸಿಯಾಗಿದೆ. ಹೀಗಾಗಿ, ರಾಜೀನಾಮೆ ಕೊಡುತ್ತಿದ್ದೇನೆ’ ಎಂದು ತಿಳಿಸಿದ್ದಾರೆ.

ಜಿಎಸ್ಸೆಸ್ ಪ್ರತಿಷ್ಠಾನಕ್ಕೂ ರಾಜೀನಾಮೆ

ಸರ್ಕಾರ ಸ್ಥಾಪಿಸಿರುವ ‘ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ’ದ ಅಧ್ಯಕ್ಷರಾದ ಎಸ್.ಜಿ. ಸಿದ್ಧರಾಮಯ್ಯ, ಸದಸ್ಯರಾದ ಎಚ್.ಎಸ್. ರಾಘವೇಂದ್ರರಾವ್, ಚಂದ್ರಶೇಖರ ನಂಗಲಿ, ನಟರಾಜ ಬೂದಾಳು ಅವರೂ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರೆಲ್ಲ, ‘ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಸಂಸ್ಕೃತಿ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳ ಮೇಲೆ ನಡೆಯುತ್ತಿರುವ ಅಸಾಂವಿಧಾನಿಕ ದಬ್ಬಾಳಿಕೆಗಳನ್ನು ಕಂಡು ಆತಂಕ ಉಂಟಾಗಿದೆ. ಕೋಮುದ್ವೇಷವನ್ನು ರಾಜಾರೋಷವಾಗಿ ಮಾತನಾಡುತ್ತಾ ಅಟಾಟೋಪ ಮೆರೆಯುತ್ತಾ ಪ್ರಜಾಪ್ರಭುತ್ವದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಸರ್ಕಾರ ಮೌನ ವಹಿಸಿರುವುದು ಭಯವನ್ನೂ ಹುಟ್ಟಿಸಿದೆ. ಈ ಬೆಳವಣಿಗೆಗಳಿಂದ ಬೇಸತ್ತು ರಾಜೀನಾಮೆ ಸಲ್ಲಿಸುತ್ತಿದ್ದೇವೆ’ ಎಂದು ಹೇಳಿದ್ದಾರೆ.

ಕವಿತೆ ವಾಪಸ್ ಪಡೆದ ಎಸ್‌ಜಿಎಸ್

ಪಠ್ಯ ಪುಸ್ತಕದಲ್ಲಿ ಬೋಧಿಸಲು ನೀಡಿದ್ದ ಅನುಮತಿಯನ್ನು ಕವಿ ಎಸ್.ಜಿ. ಸಿದ್ಧರಾಮಯ್ಯ ಅವರೂ ವಾಪಸ್ ಪಡೆದಿದ್ದಾರೆ.

ಜಿ.ರಾಮಕೃಷ್ಣ ಹಾಗೂ ದೇವನೂರ ಮಹದೇವ ಅವರೂ ತಾವು ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿದ್ದರು. ಈ ಸಾಲಿಗೆ ಸೇರಿರುವ ಸಿದ್ದರಾಮಯ್ಯ ಅವರು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

‘ಮನೆಗೆಲಸದ ಹೆಣ್ಣುಮಗಳು’ ಎಂಬ ನನ್ನ ಕವಿತೆ 9ನೇ ತರಗತಿಯ ದ್ವಿತೀಯ ಭಾಷಾ ಪಠ್ಯವಾಗಿ ಸೇರಿದೆ. ಅದನ್ನು ಬೋಧಿಸಲು ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದೇನೆ’ ಎಂದು ತಿಳಿಸಿದ್ದಾರೆ.

ಭಾರತ ರಕ್ಷಣಾ ವೇದಿಕೆ ಕಾರ್ಯಕರ್ತರ ಕೃತ್ಯ

ಟಿಕಾಯತ್‌ಗೆ ಏಟು: ‘ಮೋದಿಗೆ ಜೈ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತ ವಿರೋಧಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಬೃಹತ್ ಹೋರಾಟ ಸಂಘಟಿಸಿ ಕೇಂದ್ರ ಸರ್ಕಾರವನ್ನೇ ಮಣಿಸಿದ್ದ ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ (55) ಮೇಲೆ ನಗರದಲ್ಲಿ ಸೋಮವಾರ ಹಲ್ಲೆ ನಡೆದಿದ್ದು, ಕೈಗೆ ತೀವ್ರ ಪೆಟ್ಟಾಗಿದೆ. ಹಲ್ಲೆ ಬಳಿಕ ಮುಖಕ್ಕೆ ಮಸಿ ಎರಚಿದ ಭಾರತೀಯ ರಕ್ಷಣಾ ವೇದಿಕೆಯ ಕಾರ್ಯಕರ್ತರು, ‘ಮೋದಿ... ಮೋದಿ...’ ಎಂದು ಘೋಷಣೆ ಕೂಗಿದ್ದಾರೆ.

ಈ ಕೃತ್ಯ ಎಸಗಿದ ಆರೋಪದಡಿ ಭಾರತೀಯ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಭರತ್ ಶೆಟ್ಟಿ ಸೇರಿ ಮೂವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲ್ಲೆಯಿಂದಾಗಿ ರಾಕೇಶ್ ಅವರ ಎಡಗೈಗೆ ಗಾಯವಾಗಿದ್ದು, ಮಸಿ ಎರಚಿರುವುದರಿಂದ ಕಣ್ಣಿಗೂ ಹಾನಿಯಾಗಿದೆ. ರಾಕೇಶ್ ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ರಾಕೇಶ್ ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘ಹಲ್ಲೆ ಮಾಡಿ, ಮಸಿ ಎರಚುವ ಉದ್ದೇಶದಿಂದಲೇ ಆರೋಪಿಗಳು ಸಭೆಗೆ ಬಂದಿದ್ದರು. ನಾಲ್ಕು ದಿಕ್ಕುಗಳಲ್ಲಿ ಕುಳಿತಿದ್ದರು. ಪತ್ರಿಕಾಗೋಷ್ಠಿ ನಡೆಯುವಾಗ ಏಕಾಏಕಿ ದಾಳಿ ಮಾಡಿ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ವೇದಿಕೆ ಅಧ್ಯಕ್ಷ ಭರತ್ ಶೆಟ್ಟಿ, ಕಾರ್ಯಕರ್ತರಾದ ಶಿವಕುಮಾರ್ ಹಾಗೂ ದಿಲೀಪ್ ಎಂಬುವರನ್ನು ಬಂಧಿಸಲಾಗಿದೆ. ಇಬ್ಬರು ಮಹಿಳೆಯರು ಸೇರಿ ನಾಲ್ವರು ಪರಾರಿಯಾಗಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕನ್ನಡ ಭಾಷೆ ನೆಪದಲ್ಲಿ ಹಲ್ಲೆ: ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಕೇಳಿಬಂದಿರುವ ಭ್ರಷ್ಟಾಚಾರ ಆರೋಪ ಚರ್ಚಿಸಲೆಂದು ‘ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ’ ನೇತೃತ್ವದಲ್ಲಿ ರೈತ ಮುಖಂಡರು ‘ಆತ್ಮಾವಲೋಕನ ಹಾಗೂ ಸ್ಪಷ್ಟೀಕರಣ ಸಭೆ’ ಹಮ್ಮಿಕೊಂಡಿದ್ದರು.

ರಾಕೇಶ್ ಟಿಕಾಯತ್, ಯುದ್ಧವೀರ್ ಸಿಂಗ್, ಕವಿತಾ ಕುರುಗಂಟಿ, ಚುಕ್ಕಿ ನಂಜುಂಡಸ್ವಾಮಿ, ಸುರೇಶ್ ಬಾಬು ಪಾಟೀಲ ಗಜಪತಿ, ಕೆ.ಟಿ. ಗಂಗಾಧರ್, ವಕೀಲ ರವಿವರ್ಮಕುಮಾರ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಸೋಮವಾರ ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೂ ಸಭೆ ನಡೆದಿತ್ತು. ಇದಾದ ನಂತರ, ಪತ್ರಿಕಾಗೋಷ್ಠಿ ಆರಂಭವಾಗಿತ್ತು.

ಯುದ್ಧವೀರ್ ಸಿಂಗ್ ಅವರು ಇಂಗ್ಲಿಷ್‌ನಲ್ಲಿ ಮಾತನಾಡಲಾರಂಭಿಸಿದ್ದರು. ಪತ್ರಕರ್ತರು ಕನ್ನಡದಲ್ಲಿ ಕೇಳುತ್ತಿದ್ದ ಪ್ರಶ್ನೆಗಳನ್ನು ಕವಿತಾ ಅವರು ಹಿಂದಿ ಭಾಷೆಗೆ ಅನುವಾದಿಸಿ ಯುದ್ಧವೀರ್ ಅವರಿಗೆ ತಿಳಿಸುತ್ತಿದ್ದರು.

8ನೇ ಪುಟ ನೋಡಿ



ಬೆಂಗಳೂರಿನ ಗಾಂಧಿಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಕೇಶ್ ಟಿಕಾಯತ್ ಅವರ ಮೇಲೆ ಮಸಿ ಎರಚಲಾಯಿತು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

‘ನನ್ನನ್ನೇ ಗುರಿಯಾಗಿಸಿ ದಾಳಿ’

ನನ್ನನ್ನೇ ಗುರಿಯಾಗಿಸಿಕೊಂಡು ದಾಳಿ ಮಾಡಿದ್ದಾರೆ. ನಾನು ಕೈ ಅಡ್ಡ ತರದಿದ್ದರೆ, ತಲೆಯೇ ಹೋಗುತ್ತಿತ್ತು. ಇದು ವ್ಯವಸ್ಥಿತ ಸಂಚು. ಕೃತ್ಯ ಎಸಗಿರುವ ಆರೋಪಿಗಳು ಹಾಗೂ ಇದರ ಹಿಂದಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

ರಾಕೇಶ್ ಟಿಕಾಯತ್, ಬಿಕೆಯು ಮುಖಂಡ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರಳಿ

ಪ್ರಕಾಶ್ ಶೆಟ್ಟಿ



2021ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆ ಫಲಿತಾಂಶ

ರಾಜ್ಯದ 26 ಅಭ್ಯರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2021ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆ ಫಲಿತಾಂಶ ಸೋಮವಾರ ಪ್ರಕಟಗೊಂಡಿದ್ದು, ರಾಜ್ಯದ 26 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ವಿ. ಅವಿನಾಶ್ 31ನೇ ರ್‍ಯಾಂಕ್ ಪಡೆದು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಕಾನೂನು ಪದವಿ ಓದಿದವರು ಈ ಬಾರಿ ಹೆಚ್ಚು ಆಯ್ಕೆಯಾಗಿದ್ದಾರೆ. ಆಯ್ಕೆಯಾದವರಲ್ಲಿ ಉತ್ತರ ಕರ್ನಾಟಕದ ಭಾಗದ ಅಭ್ಯರ್ಥಿಗಳು ಮತ್ತು ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಬಂದವರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವುದು ಗಮನಾರ್ಹವಾಗಿದೆ. ಕಳೆದ ವರ್ಷ ರಾಜ್ಯದ 28 ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಆಯ್ಕೆಯಾದವರಲ್ಲಿ ಬಹುತೇಕರು ವಿವಿಧ ಸಂಸ್ಥೆಗಳಲ್ಲಿ ತರಬೇತಿ ಪಡೆದಿದ್ದಾರೆ.

ಚಿತ್ರದುರ್ಗದ ಬೆನಕ ಪ್ರಸಾದ್ ಎನ್.ಜೆ. ಅವರು 92ನೇ ರ್‍ಯಾಂಕ್ ಮತ್ತು ವಿಜಯಪುರದ ನಿಖಿಲ್ ಬಸವರಾಜ್ ಪಾಟೀಲ್ 139ನೇ ರ್‍ಯಾಂಕ್ ಪಡೆದಿದ್ದಾರೆ. ಶೇ 90ರಷ್ಟು ಅಂಧತ್ವ ಇರುವ ಪಿರಿಯಾಪಟ್ಟಣ ತಾಲ್ಲೂಕು ಕುಡಕೂರಿನ ಕೆ.ಟಿ. ಮೇಘನಾ ಅವರು 425ನೇ ರ್‍ಯಾಂಕ್ ಪಡೆದಿದ್ದಾರೆ.

ಉತ್ತರ ಪ್ರದೇಶದ ಶ್ರುತಿ ಶರ್ಮಾ ಪ್ರಥಮ

ನವದೆಹಲಿ: ಯುಪಿಎಸ್‌ಸಿ ನಡೆಸಿದ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಮೊದಲ ಮೂರು ರ್‍ಯಾಂಕ್‌ಗಳು ಮಹಿಳೆಯರ ಪಾಲಾಗಿವೆ.

ಯುಪಿಎಸ್‌ಸಿ ಪ್ರಕಾರ, 177 ಮಹಿಳೆಯರು ಸೇರಿ ಒಟ್ಟು 685 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಶ್ರುತಿ ಶರ್ಮಾ, ಅಂಕಿತಾ ಅಗರವಾಲ್ ಮತ್ತು ಗಾಮಿನಿ ಸಿಂಗ್ಲಾ ಅವರು ಕ್ರಮವಾಗಿ ಮೊದಲ ಮೂರು ರ್‍ಯಾಂಕ್ ಪಡೆದಿದ್ದಾರೆ.

ಮೊದಲ ರ್‍ಯಾಂಕ್ ಪಡೆದಿರುವ ಶ್ರುತಿ, ಉತ್ತರ ಪ್ರದೇಶದ ಬಿಜ್ನೂರಿನವರು. ಅವರು ಇತಿಹಾಸ ಪದವೀಧರೆ(ಆನರ್ಸ್), ಅಂಕಿತಾ ಅವರು ಅರ್ಥಶಾಸ್ತ್ರ ಪದವೀಧರೆ (ಆನರ್ಸ್). ಇಬ್ಬರೂ ದೆಹಲಿ ವಿ.ವಿಯ ವಿದ್ಯಾರ್ಥಿಗಳು. 3ನೇ ರ್‍ಯಾಂಕ್ ವಿಜೇತೆ ಗಾಮಿನಿ ಬಿ.ಟೆಕ್ ಪದವೀಧರೆ (ಕಂಪ್ಯೂಟರ್‌ಎಂಜಿನಿಯರ್).

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಶ್ರುತಿ ಐಚ್ಛಿಕ ವಿಷಯವಾಗಿ ಇತಿಹಾಸವನ್ನು ಆಯ್ಕೆ ಮಾಡಿಕೊಂಡಿದ್ದರೆ, ಅಂಕಿತಾ ಅವರು ರಾಜ್ಯಶಾಸ್ತ್ರ ಮತ್ತು ಅಂತರ ರಾಷ್ಟ್ರೀಯ ಸಂಬಂಧಗಳು, ಗಾಮಿನಿ ಅವರು ಸಮಾಜಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರು.

4ನೇ ಪುಟ ನೋಡಿ

ಮೊದಲ ಯತ್ನದಲ್ಲೇ ಅವಿನಾಶ್‌ಗೆ 31ನೇ ರ್‍ಯಾಂಕ್



ದಾವಣಗೆರೆ: ಯುಪಿಎಸ್‌ಸಿ ಪರೀಕ್ಷೆಯಲ್ಲಿ ದಾವಣಗೆರೆಯ ಅವಿನಾಶ್ ವಿ. ಅವರು ಮೊದಲ ಪ್ರಯತ್ನದಲ್ಲೇ 31ನೇ ರ್‍ಯಾಂಕ್ ಗಳಿಸಿದ್ದು, ರಾಜ್ಯದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಅವರು ಬೆಂಗಳೂರಿನ ‘ಇನ್‌ಸೈಟ್ ಐಎಎಸ್’ ಕೋಚಿಂಗ್ ಸೆಂಟರ್‌ನಲ್ಲಿ ಒಂದು ವರ್ಷ ತರಬೇತಿ ಪಡೆದಿದ್ದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ದೆಹಲಿ ಸಚಿವ ಸತ್ಯೇಂದ್ರ ಜೈನ್ ಬಂಧನ



ಸತ್ಯೇಂದ್ರ ಜೈನ್

ನವದೆಹಲಿ (ಪಿಟಿಐ): ದೆಹಲಿಯ ಸಚಿವ ಸತ್ಯೇಂದ್ರ ಜೈನ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ.) ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೋಮವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

3ನೇ ಪುಟ ನೋಡಿ

ಬಿಬಿಎಂಪಿ: ಮೀಸಲು ನಿಗದಿ ಕಾಯ್ದೆಗೆ ತಿದ್ದುಪಡಿ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಬಿಬಿಎಂಪಿಗೆ ಆದಷ್ಟು ಬೇಗ ಚುನಾವಣೆ ನಡೆಸಲು ಮೀಸಲಾತಿ ಪ್ರಮಾಣವನ್ನು ಶೇ 50 ಮೀರದಂತೆ ನಿಗದಿಪಡಿಸಲು ಬಿಬಿಎಂಪಿ ಕಾಯ್ದೆಗೆ ತಿದ್ದುಪಡಿ ಮಾಡಲು ಸೋಮವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಕಾಯ್ದೆಗೆ ತಿದ್ದುಪಡಿ ಮಾಡಿದ ಬಳಿಕ ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲೂ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈಗ ಬಿಬಿಎಂಪಿಯಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಕ್ಕೆ ಒಟ್ಟು ಶೇ 33 ರಷ್ಟು ಮೀಸಲಾತಿ ಇದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಅನ್ವಯ ಮೀಸಲಾತಿ ನಿಗದಿ ಮಾಡುವುದು ಸೂಕ್ತವೆಂದು ಸಭೆಯಲ್ಲಿ ಅಭಿಪ್ರಾಯ ಬಂತೆಂದು ಮೂಲಗಳು ಹೇಳಿವೆ.

8 ವಾರಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿ, ಹಿಂದುಳಿದವರ ಮೀಸಲಾತಿಯನ್ನೂ ನಿಗದಿ ಮಾಡಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ತಿಳಿಸಿತ್ತು.

3ನೇ ಪುಟ ನೋಡಿ

ಪ್ರಶ್ನೆಪತ್ರಿಕೆ ಸೋರಿಕೆ ಜಾಮೀನುರಹಿತ ಅಪರಾಧ ವ್ಯಾಪ್ತಿಗೆ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಶ್ನೆಪತ್ರಿಕೆ ಸೋರಿಕೆ ಮಾಡುವುದನ್ನು ಜಾಮೀನುರಹಿತ ಅಪರಾಧದ ವ್ಯಾಪ್ತಿಗೆ ತರಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಬೆಂಗಳೂರು ಉತ್ತರ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯಗಳ ಪದವಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿರುವ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ‘ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆಯೂ ಆಗುತ್ತಿತ್ತು. ಈಗಲೂ ಆಗಿದೆ. ಇಂತಹ ಕೃತ್ಯಗಳು ನಡೆಯದಂತೆ ತಡೆಯಲು ಕಾನೂನಿಗೆ ತಿದ್ದುಪಡಿ ತಂದು, ಇದನ್ನು ಜಾಮೀನು ರಹಿತ ಅಪರಾಧದ ವ್ಯಾಪ್ತಿಗೆ ಸೇರಿಸಲಾಗುವುದು’ ಎಂದರು.

ವಿಶ್ವವಿದ್ಯಾಲಯಗಳು ಸ್ವಾಯತ್ತ ಸ್ಥಾನಮಾನ ಹೊಂದಿದ್ದು, ಅಲ್ಲಿಯೇ ಎಲ್ಲ ಪ್ರಕ್ರಿಯೆ ನಡೆಯುತ್ತದೆ. ಪರೀಕ್ಷಾ ಪ್ರಕ್ರಿಯೆಯಯಲ್ಲಿ ಗೋಪ್ಯತೆ ಕಾಪಾಡಲು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಆರೋಪದ ಕುರಿತ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾಯಿಸಲಾಗಿದೆ. ಯಾವುದೇ ವ್ಯಕ್ತಿಗಳು ಅಕ್ರಮದಲ್ಲಿ ಭಾಗಿಯಾಗಿದ್ದರೂ ಕ್ರಮ ಕೈಗೊಳ್ಳುವುದು ನಿಶ್ಚಿತ ಎಂದರು.

‘ಮಂಡ್ಯದಲ್ಲಿ ಕಾಲೇಜು ಅಧ್ಯಾಪಕರನ್ನು ಭೇಟಿಮಾಡಿ ವಿಧಾನ ಪರಿಷತ್ ಚುನಾವಣೆಯ ಮತ ಯಾಚಿಸಿರುವುದು ನೀತಿಸಂಹಿತೆ ಉಲ್ಲಂಘನೆ ವ್ಯಾಪ್ತಿಗೆ ಬರುವುದಿಲ್ಲ. ನಾನು ಮೊದಲು ಮಾಹಿತಿ ನೀಡಿ, ಖಾಸಗಿ ವಾಹನದಲ್ಲೇ ಮತ ಯಾಚನೆಗೆ ಹೋಗಿದ್ದೆ. ನ್ಯಾಯಾಲಯದಲ್ಲಿ ಸೂಕ್ತ ಉತ್ತರ ನೀಡುತ್ತೇನೆ’ ಎಂದು ತಮ್ಮ ವಿರುದ್ಧ ಪ್ರಕರಣ ದಾಖಲಿಸಿರುವ ಕುರಿತು ಪ್ರತಿಕ್ರಿಯಿಸಿದರು.

‘ಬೆಂ. ವಿ.ವಿ ಕುಲಪತಿ ತಪ್ಪು ಮಾಡಿಲ್ಲ’

‘ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಅನುಮೋದನೆ ಪಡೆದ ಬಳಿಕವೇ ಅಲ್ಲಿನ ಕುಲಪತಿ ₹ 29 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

‘ವಿಶ್ವವಿದ್ಯಾಲಯದ ವ್ಯಾಪ್ತಿಯ ಯೂನಿವರ್ಸಿಟಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿಗೆ (ಯುವಿಸಿಇ) ಈ ಅನುದಾನ ಒದಗಿಸಿದ್ದು, ಕುಲಪತಿಯಿಂದ ಯಾವುದೇ ತಪ್ಪು ನಡೆದಿಲ್ಲ. ಸರಿಯಾದ ಮಾಹಿತಿ ಇಲ್ಲದೇ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಕಲಿ ನೋಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ದೇಶದಲ್ಲಿ ಒಟ್ಟು 2.30 ಲಕ್ಷ ನಕಲಿ ನೋಟುಗಳು ಪತ್ತೆಯಾಗಿವೆ. ಹಿಂದಿನ ಹಣಕಾಸು ವರ್ಷದಲ್ಲಿ (2020–21) ಒಟ್ಟು 2.08 ಲಕ್ಷ ನಕಲಿ ನೋಟುಗಳು ಪತ್ತೆಯಾಗಿದ್ದವು.

2019–20ನೆಯ ಹಣಕಾಸು ವರ್ಷದಲ್ಲಿ ಪತ್ತೆಯಾದ ನಕಲಿ ನೋಟುಗಳ ಒಟ್ಟು ಸಂಖ್ಯೆಗೆ ಹೋಲಿಸಿದರೆ ಇದು ಕಡಿಮೆ. ಆ ವರ್ಷದಲ್ಲಿ ಒಟ್ಟು 2.96 ಲಕ್ಷ ನಕಲಿ ನೋಟುಗಳು ಪತ್ತೆಯಾಗಿದ್ದವು.

₹ 100 ಮುಖಬೆಲೆಯ 92,237 ನಕಲಿ ನೋಟುಗಳು 2021–22ನೇ ಹಣಕಾಸು ವರ್ಷದಲ್ಲಿ ಪತ್ತೆಯಾಗಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ವಾರ್ಷಿಕ ವರದಿಯು ತಿಳಿಸಿದೆ.

ವಿವರ 9

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN : U85110KA1970SGC001919

ನಂ: KPCL/2022-23/BD/WORK_INDENT12399 ದಿನಾಂಕ:26.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹೆಸರು: ಕೆಪಿಸಿಎಲ್‌ನ ಶಕ್ತಿಭವನ ಕಟ್ಟಡದಲ್ಲಿ ಹೊಸ ಒಳಚರಂಡಿ ಕೊಳವೆಗಳನ್ನು ಒದಗಿಸುವ, ಕೋಬಲ್ ಸ್ಟೋನ್ ಇಂಟರ್‌ಲಾಕ್ ಪೇವರ್ ಬ್ಲಾಕ್‌ಗಳನ್ನು ಮರು ಹೊಂದಿಸುವ ಹಾಗೂ ಸಣ್ಣ ದುರಸ್ತಿಯ ಕಾಮಗಾರಿ. ಇಎಂಡಿ ಮೊತ್ತ : ರೂ.39,875/-. ಗುತ್ತಿಗೆ ಅವಧಿ: 45 ದಿನಗಳ ಕೆಲಸದ ಕಾಲಾವಧಿ ಜೊತೆ ಒಂದು ವರ್ಷದ ನಿರ್ವಹಣಾ ಅವಧಿ. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:10.06.2022 ಸಂಜೆ 4.00 ಗಂಟೆಯವರೆಗೆ. ಇತರೆ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಅಧೀಕ್ಷಕ ಅಭಿಯಂತರರು (ಕಾ) ಆರ್‌ಓ, ನಂ.82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001, ಮೊ:9449784846 ಇಲ್ಲಿಂದ ಪಡೆಯಬಹುದು.

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702-ಬಿ, 7ನೇ ಮಹಡಿ, ಕನ್ಸೆಪ್ಟ್ ಟವರ್-2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ-110002 ಫೋನ್: +91-11-23232854, ಫ್ಯಾಕ್ಸ್: +91-11-23232835

ಇ-ಟೆಂಡರ್ ಮುಖಾಂತರ ಪ್ರಸ್ತಾವನೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಪಿ/ಸಿಡಿ-35/2022 ದಿನಾಂಕ 23.05.2022)

ನೈರುತ್ಯ ರೈಲ್ವೆಯ ಬೆಂಗಳೂರು ಕಂಟೋನ್ಮೆಂಟ್ (ಪ್ಲಾಟ್-ಎ) ಬೆಂಗಳೂರಿನಲ್ಲಿರುವ 8.61 ಎಕರೆ ರೈಲು ಭೂಮಿಯ ವಾಣಿಜ್ಯ ಅಭಿವೃದ್ಧಿಗಾಗಿ (ಪ್ರಸ್ತುತ ಅಸ್ತಿತ್ವದಲ್ಲಿರುವ ರೈಲ್ವೆ ಕಾಲೋನಿಯ ಪುನರ್ ಅಭಿವೃದ್ಧಿ ಸೇರಿದಂತೆ) 60 ವರ್ಷಗಳ ಅವಧಿಗೆ ಲೀಸ್/ಲೈಸೆನ್ಸ್ ಮಂಜೂರಾತಿ

ಭೂಮಿ	ನಿವೇಶನದ ಅಂದಾಜು ಕ್ಷೇತ್ರಫಲ	ಎಫ್‌ಎಸ್‌ಐ ಆಫರ್	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ಕಂಟೋನ್ಮೆಂಟ್ ರೈಲ್ವೆ ಕಾಲೋನಿ (ಪ್ಲಾಟ್-ಎ), ಬೆಂಗಳೂರು	8.61 ಎಕರೆ	5.0	ರೂ. 1.00 ಕೋಟಿ	ರೂ. 236 ಕೋಟಿ

ಆನ್‌ಲೈನ್ / ಆಫ್‌ಲೈನ್ ಪ್ರಿ-ಬಿಡ್ ಮೀಟಿಂಗ್ : 08ನೇ ಜೂನ್ 2022 ರಂದು 11:30 ಗಂಟೆ.
(ಜಂಟಿ ಮಹಾ ಪ್ರಬಂಧಕರು / ಪ್ರಾಜೆಕ್ಟ್-5 ಇವರಿಂದ ಆನ್‌ಲೈನ್ / ಆಫ್‌ಲೈನ್ ಪ್ರಿ-ಬಿಡ್ ಮೀಟಿಂಗ್ ವಿವರಗಳನ್ನು ಪಡೆದುಕೊಳ್ಳಬಹುದು)
ಆನ್‌ಲೈನ್‌ನಲ್ಲಿ ಇ-ಬಿಡ್ ಸಲ್ಲಿಸುವ ಅಂತಿಮ ದಿನಾಂಕ: 01.08.2022 ರಂದು 15:00 ಗಂಟೆವರೆಗೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ಕೊಡಿ
www.rlda.indianrailways.gov.in ಅಥವಾ ಇ-ಪ್ರೊಕ್ಯೂರ್‌ಮೆಂಟ್ www.tenderwizard.in/RLDA ಪೋರ್ಟಲ್‌ನಲ್ಲಿ 'ಇ-ಟೆಂಡರ್' ಶೀರ್ಷಿಕೆಯನ್ನು ಪರಿಶೀಲಿಸಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಸಂಪರ್ಕಿಸಿ:-

ಜಂಟಿ ಮಹಾ ಪ್ರಬಂಧಕರು /ಪ್ರಾಜೆಕ್ಟ್-5	ಮುಖ್ಯ ಯೋಜನಾ ಪ್ರಬಂಧಕರು/ ಎಸ್‌ಬಿಸಿ	ಕನ್ಸಲ್ಟಂಟ್/ಆರ್‌ಎಲ್‌ಡಿಎ ಮಿಸ್. ನೈಮುನ್ನಿಸಾ ಖಾನ್	ಇ-ಬಿಡ್ ವಿಚಾರಣೆಗಾಗಿ ಶ್ರೀ. ಸೂರಜ್ ಸಿಂಗ್
ಮೊ: 9024563298 jgm5rlda@gmail.com	ಮೊ: 9361591387 cpmbangalore@rlda.railnet.gov.in	ಮೊ: 8068185663 naimunnisa.khan@in.knightfrank.com	ಮೊ: 9599653865 suraj@etenderwizard.com

ಸೂಚನೆ:- ಇದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಆರ್‌ಎಲ್‌ಡಿಎ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. ಎಎಂ/ಟೆಂಡರ್, (ಮೊ) 8750554811

ಕೇಂದ್ರೀಯ ವಿ.ವಿ. ಅರ್ಜಿ

ಬೆಂಗಳೂರು: ಕೇರಳದ ಕಾಸರಗೋಡಿನಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯ 2022-23ನೇ ಶೈಕ್ಷಣಿಕ ವರ್ಷದ ಕನ್ನಡ ಎಂ.ಎ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪದವಿ ಅಂತಿಮ ವಿದ್ಯಾರ್ಥಿಗಳು ಜೂ.18 ರೊಳಗೆ ಅರ್ಜಿ ಸಲ್ಲಿಸಬಹುದು. ಇಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರತಿ ವರ್ಷ ₹25 ಸಾವಿರ ಪ್ರೋತ್ಸಾಹಧನ ನೀಡುತ್ತದೆ. ಆಸಕ್ತರು 6282871092ಗೆ ಸಂಪರ್ಕಿಸಬಹುದು. https://cuet.nta.nic.in ಭೇಟಿ ನೀಡಬಹುದು.

ಮಾರ್ಚ್‌ನಲ್ಲಿ ಎಲ್‌ಐಸಿ ಲಾಭ ಇಳಿಕೆ

ಬೆಂಗಳೂರು: ಷೇರುಪೇಟೆಯಲ್ಲಿ ನೋಂದಾಯಿತ ಆದ ನಂತರ ಮೊದಲ ತ್ರೈಮಾಸಿಕ ಫಲಿತಾಂಶ ಪ್ರಕಟಿಸಿರುವ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ), ಮಾರ್ಚ್ ತ್ರೈಮಾಸಿಕದಲ್ಲಿ ಲಾಭದ ಪ್ರಮಾಣವು ಶೇಕಡ 17ರಷ್ಟು ಕುಸಿದಿದೆ ಎಂದು ತಿಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಎಲ್‌ಐಸಿ ₹ 2,409 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಎಲ್‌ಐಸಿ ₹ 2,917 ಕೋಟಿ ಲಾಭ ದಾಖಲಿಸಿತ್ತು. ಎಲ್‌ಐಸಿಯು ಷೇರುದಾರರಿಗೆ ಪ್ರತಿ ಷೇರಿಗೆ ₹1.50ರಷ್ಟು ಲಾಭಾಂಶ ಪ್ರಕಟಿಸಿದೆ.

ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆದ ನಂತರದಲ್ಲಿ ಎಲ್‌ಐಸಿ ಷೇರುಗಳ ಮೌಲ್ಯವು ಕುಸಿತ ಕಂಡಿದೆ.

ಇಂಗ್ಲೀಷ್ ಪ್ರಾದೇಶಿಕ ಸಂಸ್ಥೆ, ದಕ್ಷಿಣ ಭಾರತ

ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು-560056
ದೂ: 080-35101131 ಇ-ಮೇಲ್: director@riesi.ac.in/ riesi.bangalore@gmail.com ವೆಬ್‌ಸೈಟ್: riesi.ac.in

ಕೊಟೇಶನ್ ಆಹ್ವಾನ ಪ್ರಕಟಣೆ

ಆರ್‌ಐಇಎಸ್‌ಐ, ಬೆಂಗಳೂರು ಇವರು ಸಂಸ್ಥೆಯಲ್ಲಿ ಇ-ಆಫೀಸ್ ಮೀಟಿಂಗ್ಸ್ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಅಧಿಕೃತ ಸಂಸ್ಥೆಗಳಿಂದ ಕೊಟೇಶನ್‌ಗಳನ್ನು ಆಹ್ವಾನಿಸುವ ಮೂಲಕ ಉಪಕರಣಗಳನ್ನು ಪಡೆಯಲು ಉದ್ದೇಶಿಸಿರುವರು. ಪೂರೈಸಲಾಗುವ ಉತ್ಪನ್ನಗಳು ಒಂದು ಒಇಎಂ.

1. ಇ-ಆಫೀಸ್ ಉಪಕರಣಗಳು: ಕಂಪ್ಯೂಟರ್ ಸಿಸ್ಟಮ್‌ಗಳು (02), ಸ್ಕ್ಯಾನರ್‌ಗಳು (02), ಬುಕ್ ಸ್ಕ್ಯಾನರ್ (01), ಪ್ರಿಂಟರ್‌ಗಳು (02)

ಉಪಕರಣಗಳನ್ನು ಸರಬರಾಜು ಮಾಡಲು ವಿವರಣೆಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಆರ್‌ಐಇಎಸ್‌ಐ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು ಅಥವಾ ಆರ್‌ಐಇಎಸ್‌ಐ ಕ್ಯಾಂಪಸ್‌ಗೆ ಕೆಲಸದ ಸಮಯದಲ್ಲಿ (ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆವರೆಗೆ) ಭೇಟಿ ನೀಡಿ ಪಡೆದುಕೊಳ್ಳಬಹುದು. ಕೊಟೇಶನ್ ಸಲ್ಲಿಸಲು ಕಡೆಯ ದಿನಾಂಕ 10.06.2022.

ಸಹಿ/- ನಿರ್ದೇಶಕರು

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು - 560 048.
CIN : L23209KA1977PLC043357 E-mail : info@gpl.in, secretarial@gujaratpetrosynthese.com Website: www.gpl.in

ಮಾರ್ಚ್ 31, 2022ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಅಂತ್ಯಗೊಂಡ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

[ರೆಗ್ಯುಲೇಶನ್ 47(1)(ಬಿ)ರ ಸೆಬಿಯ(ಎಲ್.ಒ.ಡಿ.ಆರ್)ನ ರೆಗ್ಯುಲೇಶನ್ಸ್, 2015] (ರೂ. ಸಾವಿರಗಳಲ್ಲಿ)

		ಪ್ರತ್ಯೇಕವಾದ				ಒಟ್ಟುಗೂಡಿಸಿದ			
ಕ್ರ. ಸಂ.	ವಿವರಗಳು	ಮಾರ್ಚ್ 2022 ತ್ರೈಮಾಸಿಕಕ್ಕೆ ಅಂತ್ಯಗೊಂಡ ಅವಧಿಗೆ	ಮಾರ್ಚ್ 2022 ವಾರ್ಷಿಕ ಅವಧಿಗೆ ಅಂತ್ಯಗೊಂಡ	ಮಾರ್ಚ್ 2021 ತ್ರೈಮಾಸಿಕಕ್ಕೆ ಅಂತ್ಯಗೊಂಡ ಅವಧಿಗೆ	ಮಾರ್ಚ್ 2021 ವಾರ್ಷಿಕ ಅವಧಿಗೆ ಅಂತ್ಯಗೊಂಡ	ಮಾರ್ಚ್ 2022 ತ್ರೈಮಾಸಿಕಕ ಅಂತ್ಯಗೊಂಡ ಅವಧಿಗೆ	ಮಾರ್ಚ್ 2022 ವಾರ್ಷಿಕ ಅವಧಿಗೆ ಅಂತ್ಯಗೊಂಡ	ಮಾರ್ಚ್ 2021 ತ್ರೈಮಾಸಿಕಕ್ಕೆ ಅಂತ್ಯಗೊಂಡ ಅವಧಿಗೆ	ಮಾರ್ಚ್ 2021 ವಾರ್ಷಿಕ ಅವಧಿಗೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	57,676	3,08,545	66,389	1,99,773	57,433	3,14,431	67,891	2,05,892
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	(1,667)	14,378	(880)	(6,205)	(2,186)	19,876	(203)	(1,126)
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	(1,667)	14,378	(1,338)	49,593	(2,202)	19,876	(660)	54,691
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	(2,426)	3,802	(920)	50,136	(3,429)	9,768	(230)	54,603
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	(2,426)	3,802	(920)	50,136	(2,233)	14,344	811	59,386
6	ಈಕ್ವಿಟಿ ಷೇರುಬಂಡವಾಳ(ಮುಖಬೆಲೆ ರೂ.10 ಪ್ರತಿಷೇರಿಗೆ)	5969	5969	5969	5969	5969	5969	5969	5969
7	ಮೀಸಲು(ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ				211,306				383,661
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	-0.41	0.64	-0.15	8.40	-0.37	2.40	0.14	9.95

ಸೂಚನೆಗಳು:
ಎ) ಈ ಮೇಲಿನವು ಮಾರ್ಚ್ 31, 2022ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತದೆ ಹಾಗೂ ಮೇ 30, 2022ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ ಫಲಿತಾಂಶವು ವಿವರವಾದ ನಮೂನೆಯ ಸಾರಾಂಶವಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ.
ಬಿ) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತದೆ.

ಸ್ಥಳ : ಬೆಂಗಳೂರು
ದಿನಾಂಕ : 30.05.2022

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಊರ್ಮಿ. ಎನ್. ಪ್ರಸಾದ್
ಜಂಟಿ.ವ್ಯವಸ್ಥಾಪಕ ನಿರ್ದೇಶಕ
ಡಿ.ಐ.ಎನ್ : 00319482

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

ಕರ್ನಾಟಕ ಸರ್ಕಾರ GOVERNMENT OF KARNATAKA
VIJAYANAGAR INSTITUTE OF MEDICAL SCIENCES, BALLARI Cantonment Area,
Director:8147796529, CAO:8147796526,
PA: 8147796539, website: www.vims.karnataka.gov.in
e-mail : directorvimsballari@gmail.com

No. VIMS/SUP/01/2022-23 DATE: 26.05.2022

ಮರು-ಇ-ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸರ್ಜಿಕಲ್ ಡಿಸ್ಪೋಜಬಲ್ಸ್ ಮತ್ತು ಸೂಚರ್ ಮೆಟಿರಿಯಲ್ಸ್‌ಗಳನ್ನು ಧರ ಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ-1999 ಮತ್ತು ನಿಯಮ-2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: https://eproc.karnataka.gov.in ಮೂಲಕ ಪಡೆಯಲು ಕೋರಿದೆ.

01. ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳು ಪ್ರಾರಂಭದ ದಿನಾಂಕ: 26.05.2022.
02. ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 31.05.2022 upto 5.00 pm.
03. ಪ್ರಿ ಬಿಡ್ ಮಿಟಿಂಗ್ ದಿನಾಂಕ ಮತ್ತು ಸಮಯ: 01.06.2022 @ 11.30 AM in the chambers of Director, VIMS, Balllari.
04. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 09.06.2022 upto 5.00 pm.
05. ಸ್ಯಾಂಪಲ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ: On or before 09.06.2022 up to 4.00 pm to the Medical Superintendent, Medical College Hospital, VIMS, Ballari. Without samples items will not be considered.
06, ಟೆಂಡರಿನ ಟೆಕ್ನೋ-ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್): 10.06.2022 @ 05.15 PM.
07. ಸದರಿ ಟೆಂಡರಿನ ಅಂದಾಜು ಮೊತ್ತ: 155.80 Lakhs

ಸಹಿ/- ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/86/ಎಂಸಿಎ/2022-23

ಸಂಕ್ಷಿಪ್ತ ಸುದ್ದಿ

ಬಿಪಿಸಿಎಲ್, ಬೌನ್ಸ್ ನಡುವೆ ಒಪ್ಪಂದ

ಬೆಂಗಳೂರು: ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಬೌನ್ಸ್ ಇನ್ಫಿನಿಟಿ ಕಂಪನಿಗಳು ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಬ್ಯಾಟರಿ ಸ್ವ್ಯಾಪಿಂಗ್ ಕೇಂದ್ರಗಳ ಸ್ಥಾಪನೆಗೆ ಒಪ್ಪಂದವೊಂದಕ್ಕೆ ಸಹಿ ಹಾಕಿವೆ.

ಈ ಒಪ್ಪಂದದ ಅನ್ವಯ, ಬೌನ್ಸ್ ಇನ್ಫಿನಿಟಿ ಕಂಪನಿಯು ತನ್ನ ಬ್ಯಾಟರಿ ಸ್ವ್ಯಾಪಿಂಗ್ ಕೇಂದ್ರಗಳನ್ನು ಬಿಪಿಸಿಎಲ್ ಪೆಟ್ರೋಲ್ ಬಂಕ್‌ಗಳಲ್ಲಿ ಸ್ಥಾಪಿಸಲಿದೆ ಎಂದು ಪ್ರಕಟಣೆ ತಿಳಿಸಿದೆ. ಕಂಪನಿಯು 10 ನಗರಗಳಲ್ಲಿ ಒಟ್ಟು ಮೂರು ಸಾವಿರ ಬ್ಯಾಟರಿ ಸ್ವ್ಯಾಪಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ.

ಬೆಂಗಳೂರು ಪುನಶ್ಚೇತನ ಯಾತ್ರೆಗೆ ಕೆಆರ್‌ಎಸ್ ಚಾಲನೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮಾದರಿ ಬೆಂಗಳೂರಿಗಾಗಿ ಜೂನ್ 1ರಿಂದ ಕರ್ನಾಟಕ ರಾಷ್ಟ್ರ ಸಮಿತಿಯ (ಕೆಆರ್‌ಎಸ್) 'ಬೆಂಗಳೂರು ಪುನಶ್ಚೇತನ ಯಾತ್ರೆ' ಹಮ್ಮಿಕೊಂಡಿದೆ.

ಬೆಂಗಳೂರಿನ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಸರ್ಕಾರಿ ಕಚೇರಿಗಳಲ್ಲಿ ಲಂಚಮುಕ್ತ ಅಭಿಯಾನ ಕೈಗೊಳ್ಳಲಾಗುವುದು ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಕೆಆರ್‌ಎಸ್ ನಗರ ಘಟಕದ ಪ್ರಧಾನ ಕಾರ್ಯದರ್ಶಿ ಆರೋಗ್ಯಸ್ವಾಮಿ ಚಿನ್ನಪ್ಪ ಹೇಳಿದರು.

ರಾಜ್ಯದಲ್ಲಿರುವ ಭ್ರಷ್ಟ ಮತ್ತು ಅನೈತಿಕ ರಾಜಕಾರಣಕ್ಕೆ ಪರ್ಯಾಯವಾಗಿ ಪ್ರಾಮಾಣಿಕ ಆಡಳಿತ ನಡೆಸುವ ನಿಟ್ಟಿನಲ್ಲಿ ಕೆಆರ್‌ಎಸ್ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಿರಂತರ ದುರಾಡಳಿತದಿಂದ ಬೆಂಗಳೂರಿನಲ್ಲಿ ಹಾಳಾಗಿರುವ ಮೂಲಸೌಕರ್ಯಗಳು, ಸ್ಥಳೀಯ ಆಡಳಿತದಲ್ಲಿರುವ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ಜನರ ಗಮನ ಸೆಳೆಯಲಾಗುತ್ತದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಒಂದು ತಿಂಗಳ ಬೆಂಗಳೂರು ಪುನಶ್ಚೇತನ ಯಾತ್ರೆಯಲ್ಲಿ ಪಕ್ಷ ಸೇರ್ಪಡೆ, ಸ್ಥಳೀಯ ಘಟಕಗಳ ಉದ್ಘಾಟನೆ ಮತ್ತು ಪಕ್ಷ ಸಂಘಟನೆಗೆ ಆದ್ಯತೆ ನೀಡಲಾಗುವುದು. ಬೆಂಗಳೂರು ನಗರವನ್ನು ಸ್ವಚ್ಛ, ಸುಂದರ, ಸಮೃದ್ಧ ಮತ್ತು ಸದೃಢ ನಗರವನ್ನಾಗಿ ಮಾಡಲು ಪಕ್ಷ ಹಲವಾರು ಯೋಜನೆಗಳನ್ನು ರೂಪಿಸಿದೆ. ಯಾತ್ರೆ ಸಮಯದಲ್ಲಿ ಜನರ ಸಲಹೆ ಸೂಚನೆಗಳನ್ನು ಪಡೆಯಲಾಗುವುದು ಎಂದರು. ಬೆಂಗಳೂರು ಘಟಕದ ಅಧ್ಯಕ್ಷ, ಮಂಜುನಾಥ.ಎಸ್, ಕಾರ್ಯದರ್ಶಿ ಎಲ್.ಜೀವನ್ ಇದ್ದರು.

ಲಂಚ ಪ್ರಕರಣ: ಗುತ್ತಿಗೆ ನೌಕರನಿಗೆ ಜೈಲು ಶಿಕ್ಷೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯ ಇಂದಿರಾನಗರ ಸಹಾಯಕ ಆಯುಕ್ತರ ಕಚೇರಿಯಲ್ಲಿ ಗುತ್ತಿಗೆ ನೌಕರರಾಗಿದ್ದ ಎಸ್. ಶ್ರೀನಿವಾಸಮೂರ್ತಿ ಎಂಬುವವರಿಗೆ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಮಾಹಿತಿ ಸಲ್ಲಿಸಲು 'ಯೂಸರ್ ನೇಮ್' ಮತ್ತು 'ಪಾಸ್‌ವರ್ಡ್' ನೀಡಲು ₹ 5,000 ಲಂಚ ಪಡೆದಿದ್ದ ಪ್ರಕರಣದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ನಾಲ್ಕು ವರ್ಷ ಜೈಲು ಹಾಗೂ ₹10,000 ದಂಡ ವಿಧಿಸಿದೆ.

ದೊಮ್ಮಲೂರಿನಲ್ಲಿ ಕಂಪ್ಯೂಟರ್ ಸಲ್ಯೂಷನ್ಸ್ ಕಚೇರಿ ಹೊಂದಿದ್ದ ಶಾಂತಿನಗರದ ನಿವಾಸಿಯೊಬ್ಬರು ಆದಾಯ ತೆರಿಗೆ ದಾಖಲೆಗಳನ್ನು ಸಕಾಲಕ್ಕೆ ಸಲ್ಲಿಸದ ಕಾರಣದಿಂದ ಅವರ ವ್ಯಾಟ್ 'ಯೂಸರ್ ನೇಮ್' ಮತ್ತು 'ಪಾಸ್‌ವರ್ಡ್'ಗಳನ್ನು 2018ರಲ್ಲಿ ಸ್ಥಗಿತಗೊಳಿಸಲಾಗಿತ್ತು. ಪುನಃ ಅವುಗಳನ್ನು ನೀಡುವಂತೆ ಉದ್ಯಮಿ ಅರ್ಜಿ ಸಲ್ಲಿಸಿದ್ದರು. ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀನಿವಾಸಮೂರ್ತಿ ಅಲಿಯಾಸ್ ಮೂರ್ತಿ ಅವರನ್ನು ಭೇಟಿಮಾಡಿದ್ದರು.

ಶ್ರೀನಿವಾಸಮೂರ್ತಿ 'ಯೂಸರ್ ನೇಮ್' ಮತ್ತು 'ಪಾಸ್‌ವರ್ಡ್' ನೀಡಲು ₹ 8,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು. ಅರ್ಜಿದಾರರಿಂದ ₹5,000 ಲಂಚ ಪಡೆಯುತ್ತಿದ್ದ ಗುತ್ತಿಗೆ ನೌಕರನನ್ನು ಎಸಿಬಿ ಬಂಧಿಸಿತ್ತು. ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಎಸಿಬಿ, 2018ರ ನವೆಂಬರ್‌ನಲ್ಲೇ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಸೋಮವಾರ ತೀರ್ಮಾನ ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್, 'ಶ್ರೀನಿವಾಸಮೂರ್ತಿ ಅಪರಾಧಿ' ಎಂದು ಸಾರಿದರು. ಅಪರಾಧಿಗೆ 4 ವರ್ಷಗಳ ಸಾಧಾರಣ ಜೈಲು ಶಿಕ್ಷೆ ಮತ್ತು ₹ 10,000 ದಂಡ ವಿಧಿಸಿ ಆದೇಶ ಹೊರಡಿಸಿದರು. ಪಬ್ಲಿಕ್ ಪ್ರಾಸಿಕ್ಯೂಟರ್ ಸಂತೋಷ್ ನಾಗರಲೆ ಅವರು ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರವಾಗಿ ವಾದ ಮಂಡಿಸಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರುರವರ ಕಛೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೇಗೂರು ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು- 560 068

ಸಂಖ್ಯೆ: ಕಾಪಾಅ/ಬೊಯೋವಿ/ಟೆಂಡರ್/01/2022-23 ದಿನಾಂಕ: 30.05.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ ಇವರು ಬೊಮ್ಮನಹಳ್ಳಿ ವಲಯ, ಬೊಮ್ಮನಹಳ್ಳಿ ಯೋಜನೆ ವಿಭಾಗದ ಅಭಿವೃದ್ಧಿ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವ ಸಲಹಾ ಸೇವೆಗಳಿಗಾಗಿ ಪ್ರತಿಷ್ಠಿತ ಸಲಹೆಗಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನೆಯ ವೆಚ್ಚ (ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ 174ರಲ್ಲಿ ಹೆಚ್‌ಎಸ್‌ಆರ್ ಲೇಔಟ್ 6ನೇ ಸೆಕ್ಟರ್‌ನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ವಿವರವಾದ ಯೋಜನಾ ವರದಿ (DPR).	250.00	2.50	6,250.00
2	ಪ್ಯಾಕೇಜ್ ಸಂಖ್ಯೆ 1 – 1) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸಿಸಿ ಕ್ಯಾಮೆರಾವನ್ನು ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು. 2) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸೈನ್ ಬೋರ್ಡ್ ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು. 3) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಬೀದಿ ದೀಪ ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ನಿರ್ವಹಣೆ ಮಾಡುವುದು.	1000.00	10.00	25,000.00
3	ಪ್ಯಾಕೇಜ್ ಸಂಖ್ಯೆ 2 – ವಾರ್ಡ್ ನಂ.191 ರಲ್ಲಿ ಸಿಂಗಸಂದ್ರ ಶಾಲಾ ಕಟ್ಟಡದ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ. 2) ವಾರ್ಡ್ ನಂ.193ರ ಹುಳಿಮಾವು ಮುನೇಶ್ವರ ಬಡಾವಣೆಯಲ್ಲಿ ಸಮುದಾಯ ಭವನ ನಿರ್ಮಾಣ. 3) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಅಂಗನವಾಡಿ ನಿರ್ಮಾಣ. 4) ವಾರ್ಡ್ ನಂ.175ರ ರೂಪೇನ ಅಗ್ರಹಾರದಲ್ಲಿ ಸಮುದಾಯ ಭವನ ನಿರ್ಮಾಣ ಮತ್ತು ನಿರ್ವಹಣೆ, ಪೀಠೋಪಕರಣಗಳು ಹಾಗೂ ಸಂಬಂಧಿತ ಕೆಲಸಗಳು. 5) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರದ ಅಭಿವೃದ್ಧಿ, ಶ್ರೆಡರ್ಸ್ ಮತ್ತು ಇತರ SWM ಸಂಬಂಧಿತ ಕಾಮಗಾರಿಗಳನ್ನು ಒದಗಿಸುವುದು.	1000.00	10.00	25,000.00
4	ಪ್ಯಾಕೇಜ್ ಸಂಖ್ಯೆ 3 – 1) ವಾರ್ಡ್ ನಂ. 174ರ ಅಗರದಲ್ಲಿ ಸಮುದಾಯ ಭವನ ನಿರ್ಮಾಣ. 2) ವಾರ್ಡ್ ನಂ.174ರ ಪರಂಗಿಪಾಳ್ಯದಲ್ಲಿ ಶಾಲೆ ನಿರ್ಮಾಣ. 3) ವಾರ್ಡ್ ನಂ.174ರ ಪರಂಗಿಪಾಳ್ಯದಲ್ಲಿರುವ ಅಂಬೇಡ್ಕರ್ ಭವನಕ್ಕೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿ. 4) ವಾರ್ಡ್ ನಂ.174 ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಆಟದ ಮೈದಾನದಲ್ಲಿ ಕಚೇರಿ ಕಟ್ಟಡ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳ ನಿರ್ಮಾಣ. 5) ವಾರ್ಡ್ ನಂ.175ರ ಕೋಡಿಚಿಕ್ಕನಹಳ್ಳಿಯಲ್ಲಿ ಶಾಲೆ ನಿರ್ಮಾಣ. 6) ವಾರ್ಡ್ ನಂ.189ರ ಹೊಂಗಸಂದ್ರದಲ್ಲಿ ಶಾಲೆ ನಿರ್ಮಾಣ. 7) ವಾರ್ಡ್ ನಂ.189ರ ಹೊಂಗಸಂದ್ರ, 8ನೇ ಮುಖ್ಯರಸ್ತೆಯಲ್ಲಿ ಶಾಲೆ ಮತ್ತು ಆಸ್ಪತ್ರೆ ನಿರ್ಮಾಣ. 8) ವಾರ್ಡ್ ನಂ.190ರ ಎಳ್ಳುಕುಂಟೆಯಲ್ಲಿ ಸಮುದಾಯ ಭವನ ನಿರ್ಮಾಣ. 9) ವಾರ್ಡ್ ನಂ.190 ರ ಬಂಡೆಪಾಳ್ಯದಲ್ಲಿ ಪಿಎಚ್‌ಸಿಗೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳು. 10) ವಾರ್ಡ್ ನಂ.190ರ ಸೋಮಸುಂದರಪಾಳ್ಯದ ಆಟದ ಮೈದಾನ ಅಭಿವೃದ್ಧಿ ಹಾಗೂ ಶಾಲಾ ಕಟ್ಟಡ ನಿರ್ಮಾಣ.	1090.00	10.90	27,250.00
5	ಪ್ಯಾಕೇಜ್ ಸಂಖ್ಯೆ 4 – 1) ವಾರ್ಡ್ ನಂ.188, ವಿಜಯಬ್ಯಾಂಕ್ ಲೇಔಟ್‌ನಲ್ಲಿ ಉದ್ಯಾನವನದ ಅಭಿವೃದ್ಧಿ. 2) ವಾರ್ಡ್ ನಂ.191ರ ಸಿಂಗಸಂದ್ರದಲ್ಲಿ ಉದ್ಯಾನವನಗಳ ಅಭಿವೃದ್ಧಿ. 3) ವಾರ್ಡ್ ನಂ.174ರ ಎಚ್‌ಎಸ್‌ಆರ್ ಲೇಔಟ್‌ನ ವೇಮನ ವೃತ್ತದ ಅಭಿವೃದ್ಧಿ. 4) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಜಂಕ್ಷನ್ ಸುಧಾರಣೆಗಳು. 5) ವಾರ್ಡ್ ನಂ.175ರ ಕೋಡಿಚಿಕ್ಕನಹಳ್ಳಿಯಲ್ಲಿ ಆಟದ ಮೈದಾನ ಅಭಿವೃದ್ಧಿ. 6) ವಾರ್ಡ್ ನಂ.188ರ ವಿಜಯಬ್ಯಾಂಕ್ ಲೇಔಟ್‌ನಲ್ಲಿ ಆಟದ ಮೈದಾನ ಅಭಿವೃದ್ಧಿ. 7) ವಾರ್ಡ್ ನಂ.191 ರ ಎಇಸಿಎಸ್ ಲೇಔಟ್ ಬಿ ಬ್ಲಾಕ್‌ನಲ್ಲಿ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಳು. 8) ವಾರ್ಡ್ ನಂ.175ರ ದೇವರಚಿಕ್ಕನಹಳ್ಳಿಯಲ್ಲಿ ರುದ್ರಭೂಮಿಯ ಅಭಿವೃದ್ಧಿ ಕಾಮಗಾರಿ. 9) ವಾರ್ಡ್ ನಂ.188ರ ಬಿಳೇಕಹಳ್ಳಿಯಲ್ಲಿ ರುದ್ರಭೂಮಿಯ ಅಭಿವೃದ್ಧಿ ಕಾಮಗಾರಿ. 10) ವಾರ್ಡ್ ನಂ.191ರ ಹೊಸರೋಡ್ ಚನ್ನಕೇಶವನಗರದಲ್ಲಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು. 11) ವಾರ್ಡ್ ನಂ.190ರ ಹೊಸಪಾಳ್ಯದ ಚಿತಾಗಾರದ ಅಭಿವೃದ್ಧಿ ಕಾಮಗಾರಿಗಳು. 12) ವಾರ್ಡ್ ನಂ.187ರ ಪುಟ್ಟೇನಹಳ್ಳಿ ಶಾಲಾ ಕಟ್ಟಡಕ್ಕೆ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ. 13) ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ನಿರ್ಮಾಣ.	1010.00	10.10	25,250.00

ವೇಳಾಪಟ್ಟಿ: (1) ಟೆಂಡರ್ 01.06.2022ರ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 07.06.2022ರ ಸಂಜೆ 4:00 ಗಂಟೆಯವರೆಗೆ. (3) ಪೂರ್ವಭಾವಿ ಸಭೆ 03.06.2022ರ ಬೆಳಿಗ್ಗೆ 11:00 ಗಂಟೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.06.2022ರ ಸಂಜೆ 4:30 ಗಂಟೆಯ ನಂತರ. (5) ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.inನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

The Public are hereby informed that our clients Gopala M. S/o of Late Muniyappa and Ors. have obtained a Decree of Permanent Injunction, dated 01/10/2021, in OS. 73/2015 from the Hon'ble Principal Civil Judge & JMFC Anekal, Bengaluru Rural, against M/s M.J. Infrastructure, Rep. by its Prop. Dr. Anil Kumar, No. 27, M.J. House, Manipal County Road, Singasandra Bengaluru - 560 008 and Ors., Restraining them from Alienating, Transferring or Creating any Third-Party Rights, on Land bearing Sy.No. 70, Chikkanagamangala Village, Anekal Taluk, Bengaluru Rural District, including any transfer of Apartments with Undivided Share in the said Sy.No.70, in M.J. Lifestyle Amadeus. The Public are hereby warned not to enter into any transaction, and that all Sale Deeds Executed by M.J. Infrastructure, on or after 03/02/2015, are null and void.

K B S Manian, Advocate
Santhanam Chambers,
3rd Floor, #6, Union Street,
Bengaluru - 560 001.
Ph. No. 080-22860486 / 41130283
Bengaluru, Dated: 27.05.2022



BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

JOB OPPORTUNITIES

Teachers/ Professors

SVR PU COLLEGE, HSR-Layout, Bangalore Requires COMPUTER SCIENCE LECTURER. Contact: 9448883586 Mail to: svrfaculty@gmail.com

Multiple Vacancy

REQUIRED TEAMLEADER, TELECALLER, & FIELD EXECUTIVE For Banking Loan collection (salary 20k). direct recruitment to company Contact:- 9620206756, 9620200756.

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

PERSONAL

Change of Name

I, RAGHAVENDRAN C.K, residing at No. 5F- 1006, 10th floor Provident Sunworth Apartment, Venkatapura, Kengeri Hobli near Doddabele Village, Bangalore 560060, have changed my minor daughter's name from JANYASHREE C.R. to SHEETHAL C.R., vide affidavit dated 30.05.2022 before Notary Onkarappa N.R., Bangalore. Henceforth she shall be known as SHEETHAL C.R. only

I, M.C. LATHA, Spouse of 6913987W, Rank: Ex.L/Naik, Name: A.P. Bopaiah, presently R/a #282, 2nd cross, 10th Main, HanumanthNagar, Bengaluru South, Bengaluru- 560019, have changed my name from M.C. LATHA to A.B. LATHA (D.O.B. 12.03.1958), vide affidavit dated 27.05.2022 before Notary C.V. Earappa, Bangalore.

I, S MARY KALIYESTA, residing at No. 3 K.No. 1st street Ashoknagar, Bangalore North, Museum Road, Bangalore 560025 have changed my name to CALISTA GABRIEL vide affidavit dated 30.05.2022 before Notary L. Gopalakrishna, Bangalore. Henceforth I shall be known as CALISTA GABRIEL only.

I, Vijayendra Laxman Nikam Residing at Flat No.603, 12th Block, Doddaballapura Main Road Heritage Estate Yelahanka Bangalore-560064 have changed my name to VIJENDRA L NIKAM S/o. Laxman D Nikam vide affidavit dated 30.05.2022 Sworn before notary: D.Sarala Kumari, Bangalore

I, SHARADA HIMMATHLAL resident of No. 1569, Ward No. 20, Bharathinagar, Chickballapur-562101 have changed my name to SHARADA HIMMATH PATEL vide affidavit dated 30-05-2022 sworn to before notary K.H. Venkatappa, Chickballapur.

I, HIMMATHLAL ARJUNBHAI PATEL resident of No. 1569, Ward No. 20, Bharathinagar, Chickballapur-562101 have changed my name to HIMMATH ARJUN PATEL vide affidavit dated 30-05-2022 sworn to before notary K.H. Venkatappa, Chickballapur.

I, MALLIKA. V. G R/a .#43, 11th C cross, Vyalikaval, Malleshwaram post, Bangalore-03 Have Changed my name to MALLIKA .C vide Affidavit Dated 28/05/2022 Before Notary B.K.R. Krishnamurthy Bangalore

I, SOPHIA Shrine Prabhu R/O 30 6th Main Rd, Shamanna Layout Banaswadi BLR-43 Changed my name as Sophia Shrine John W/O Shrine Prabhu Reagis

I, MANJUNATH.R, have changed my name to MANJUNATHA C R vide affidavit dated: 30/5/2022 Before Notary Manohar Jeerige Bangalore.

I, THYJESWINI S.N, have changed my name to TEJASWINY. N vide affidavit dated: 30/5/2022 Before Notary Manohar Jeerige Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ



Classifieds
EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ಜನಗಣತಿಯಲ್ಲಿ ಧರ್ಮವನ್ನು 'ಲಿಂಗಾಯತ' ಎಂದೇ ನಮೂದಿಸಲು ಮನವಿ

'ಲಿಂಗಾಯತ ಹಿಂದೂ ಭಾಗವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತರು ಹಿಂದೂ ಧರ್ಮದ ಭಾಗವಲ್ಲ. ಆದ್ದರಿಂದ ಮುಂದಿನ ಜನಗಣತಿಯಲ್ಲಿ ಧರ್ಮವನ್ನು 'ಲಿಂಗಾಯತ' ಎಂದೇ ನಮೂದಿಸಬೇಕು' ಎಂದು ಲಿಂಗಾಯತ ಸಂಘಟನೆಗಳು ಮನವಿ ಮಾಡಿವೆ.

ಲಿಂಗಾಯತ ಮಠಾಧೀಶರ ಒಕ್ಕೂಟ, ಲಿಂಗಾಯತ ಧರ್ಮ ಮಹಾಸಭೆ ಮತ್ತು ಬಸವದಳ, ಜಾಗತಿಕ ಲಿಂಗಾಯತ ಮಹಾಸಭೆ, ಬಸವ ಸಮಿತಿ, ಬಸವ ಧರ್ಮ ಪ್ರತಿಷ್ಠಾನಗಳ ಪದಾಧಿಕಾರಿಗಳು ಸುದ್ದಿಗೋಷ್ಠಿ ನಡೆಸಿದರು.

ಭಾಲ್ಕಿ ಮಠದ ಬಸವಲಿಂಗ ಪಟ್ಟದೇವರು, ಡಂಬಳ ತೋಂಟಾ ದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಲಿಂಗಾಯತ ಧರ್ಮ ಮಹಾಸಭಾದ ಗಂಗಾ ಮಾತಾಜಿ, ಬಸವ ಧರ್ಮ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣತಾಯಿ, ಮೈಸೂರಿನ ನೀಲಕಂಠ ಸ್ವಾಮೀಜಿ, ಬೆಳಗಾವಿ ರುದ್ರಾಕ್ಷಿಮಠದ ಅಲ್ಲಮಪ್ರಭು ಸ್ವಾಮೀಜಿ, ಅಥಣಿಯ ಚನ್ನಬಸವಸ್ವಾಮೀಜಿ, ಜಾಗತಿಕ ಲಿಂಗಾಯತ ಮಹಾಸಭಾದ ಎಸ್.ಎಂ.ಜಾಮದಾರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಲಿಂಗಾಯತ ಎಂಬುದು ವಿಶೇಷ ತತ್ವ, ಸಿದ್ಧಾಂತಗಳೊಂದಿಗೆ 900 ವರ್ಷಗಳ ಇತಿಹಾಸ ಹೊಂದಿರುವ ಧರ್ಮ. ವೀರಶೈವ ಮಹಾಸಭಾವು 2018ರಲ್ಲಿ ತೆಗೆದುಕೊಂಡ ಕೆಟ್ಟ ತೀರ್ಮಾನಗಳಿಂದ ಲಿಂಗಾಯತ ಮತ್ತು ವೀರಶೈವ ಲಿಂಗಾಯಿತರ ನಡುವೆ ಗೊಂದಲಗಳು ಸೃಷ್ಟಿಯಾಗಿವೆ. ಲಿಂಗಾಯತ ಧರ್ಮದಲ್ಲಿ 102 ಉಪ ಪಂಗಡಗಳಿದ್ದು, ಅದರಲ್ಲಿ ವೀರಶೈವ ಕೂಡ ಒಂದು ಉಪಪಂಗಡ. ಆದ್ದರಿಂದ ಅವರೂ ಲಿಂಗಾಯತ ಧರ್ಮದವರೇ ಆಗಿದ್ದಾರೆ' ಎಂದರು.

'ವೀರಶೈವ ಮಹಾಸಭಾದ ದ್ವಂದ್ವ ನೀತಿಯಿಂದ ಸ್ವತಂತ್ರ ಧರ್ಮವಾಗುವ ಅವಕಾಶ ತಪ್ಪಿತು. ಅಲ್ಪಸಂಖ್ಯಾತ ಕೋಟದಲ್ಲಿ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ದೊರೆಯಬಹುದಾದ 5 ಸಾವಿರ ಪದವಿ ಮತ್ತು 500ಕ್ಕೂ ಹೆಚ್ಚು ಸ್ನಾತಕೋತ್ತರ ಪದವಿ ಸೀಟುಗಳಿಂದ ಲಿಂಗಾಯಿತ ವಿದ್ಯಾರ್ಥಿಗಳು ವಂಚಿತರಾದರು' ಎಂದರು. 'ವೀರಶೈವ ಮಹಾಸಭಾ' ಎಂದು ಇದ್ದ ಹೆಸರನ್ನು ಈಗ 'ವೀರಶೈವ ಲಿಂಗಾಯತ ಮಹಾಸಭಾ' ಎಂದು ಬದಲಿಸಿಕೊಂಡಿದ್ದಾರೆ. ಇದೆಲ್ಲವನ್ನು ನೋಡಿದರೆ ಧರ್ಮವನ್ನು ಒಡೆದವರು ಯಾರು ಎಂಬುದು ಗೊತ್ತಾಗುತ್ತದೆ. ಜನಗಣತಿಯಲ್ಲಿ ಲಿಂಗಾಯತರನ್ನು 'ವೀರಶೈವ ಲಿಂಗಾಯತ' ಎಂದು ನಮೂದಿಸಿದರೆ ಲಿಂಗಾಯತ ಸಮಾಜದ ಅಸ್ತಿತ್ವ, ಅಸ್ಮಿತೆ ಮತ್ತು ಅಲ್ಪಸಂಖ್ಯಾತ ಧರ್ಮದ ಹೋರಾಟ ಶಾಶ್ವತವಾಗಿ ದಾರಿ ತಪ್ಪಿದಂತೆ ಆಗಲಿದೆ. ಆದ್ದರಿಂದ ಧರ್ಮದ ಕಾಲಂನಲ್ಲಿ 'ಲಿಂಗಾಯತ' ಎಂದೇ ನಮೂದಿಸಬೇಕು' ಎಂದು ಹೇಳಿದರು.

'ಒಬಿಸಿ ಮೀಸಲಾತಿಗೆ ಪಂಚಮಸಾಲಿ ಸಮುದಾಯ ನಡೆಸುತ್ತಿರುವ ಹೋರಾಟಕ್ಕೆ ನಮ್ಮ ವಿರೋಧವಿಲ್ಲ. ಲಿಂಗಾಯತ ಸ್ವತಂತ್ರ ಧರ್ಮಕ್ಕಾಗಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ' ಎಂದೂ ಅವರು ಸ್ಪಷ್ಟಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಬಸವಲಿಂಗ ಪಟ್ಟದೇವರು ಮಾತನಾಡಿದರು. ಎಸ್.ಎಂ.ಜಾಮದಾರ, ಜಾಗತಿಕ ಲಿಂಗಾಯತ ಮಹಾಸಭಾದ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ, ಅನ್ನಪೂರ್ಣ ತಾಯಿ, ಗಂಗಾ ಮಾತಾಜಿ ಇದ್ದರು —ಪ್ರಜಾವಾಣಿ ಚಿತ್ರ

'ಪೀರ್‌ಪಾಷಾ ದರ್ಗಾ: ಅನುಭವ ಮಂಟಪ ಎಂಬುದು ಸುಳ್ಳು'

'ಪೀರ್‌ಪಾಷಾ ದರ್ಗಾದಲ್ಲಿ ಅನುಭವ ಮಂಟಪದ ಕುರುಹುಗಳಿವೆ ಎಂಬುದು ಶುದ್ಧ ಸುಳ್ಳು' ಎಂದು ಎಸ್.ಎಂ.ಜಾಮದಾರ್ ತಿಳಿಸಿದರು.

'ಅನುಭವ ಮಂಟಪದ ವಿವಾದ ಇದೇ ಮೊದಲಲ್ಲ. ಬೀದರ್‌ನಲ್ಲಿ ಎಂಟು ಸ್ಥಳಗಳಲ್ಲಿ ಅನುಭವ ಮಂಟಪ ಇತ್ತು ಎಂದು ಹೇಳುತ್ತಾರೆ. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯ ಮುಖ್ಯಾಧಿಕಾರಿಯಾಗಿ 8 ವರ್ಷ ಕೆಲಸ ಮಾಡಿದ್ದರಿಂದ ಈ ಎಲ್ಲಾ ಸ್ಥಳಗಳನ್ನೂ ಪರಿಶೀಲನೆ ಮಾಡಿದ್ದೇವೆ. ಅನುಭವ ಮಂಟಪ ಎಂಬುದು ಬೇರೆಲ್ಲೂ ಇರಲಿಲ್ಲ. ಬಸವಣ್ಣನವರ ಮಹಾಮನೆಯೇ ಅನುಭವ ಮಂಟಪ ಎಂಬುದು ಪಾಟೀಲ ಪುಟ್ಟಪ್ಪ, ಎಂ.ಎಂ. ಕಲಬುರ್ಗಿ ಅವರನ್ನು ಒಳಗೊಂಡ ಸಮಿತಿ ಕೊಟ್ಟಿರುವ ವರದಿಯಲ್ಲಿದೆ. ಆದ್ದರಿಂದ ಇದನ್ನು ವಿವಾದವಾಗಿಸುವ ಅಗತ್ಯವಿಲ್ಲ' ಎಂದು ಸ್ಪಷ್ಟಪಡಿಸಿದರು. 'ಈ ವದಂತಿ ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ಸತ್ಯವನ್ನು ತಿರುಚಲು ಆಗುವುದಿಲ್ಲ' ಎಂದು ಭಾಲ್ಕಿಮಠದ ಬಸವಲಿಂಗ ಪಟ್ಟದ ದೇವರು ಸ್ಪಷ್ಟಪಡಿಸಿದರು.


ಕುವೆಂಪುಗೆ ಅವಹೇಳನ: ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣದ ಮೂಲಕ ಕುವೆಂಪು ಮತ್ತು ನಾಡಗೀತೆಯನ್ನು ಅವಮಾನಿಸಿರುವ ಎಲ್ಲರ ವಿರುದ್ಧವೂ ಸೈಬರ್ ಅಪರಾಧ ಕಾನೂನಿನ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ ಅವರು ಪುನಃ ಒತ್ತಾಯಿಸಿದ್ದಾರೆ.

ಈ ವಿಚಾರವಾಗಿ ಸರ್ಕಾರಕ್ಕೆ ಪತ್ರ ಬರೆದ ಹಿನ್ನೆಲೆಯಲ್ಲಿ ಸೋಮವಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಸ್ವಾಮೀಜಿಯವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

'ನಾಡಗೀತೆಯನ್ನು ಅವಹೇಳನ ಮಾಡಿದ ವಿಷಯವನ್ನು ಸರ್ಕಾರ ಹಿಂದೆಯೇ ಗಂಭೀರವಾಗಿ ಪರಿಗಣಿಸಿ ಕಾನೂನು ಕ್ರಮ ಕೈಗೊಂಡಿದ್ದರೆ, ಈಗ ಈ ಸ್ಥಿತಿ ಬರುತ್ತಿರಲಿಲ್ಲ. ಈಗಲೂ ಸುಮ್ಮನೆ ಬಿಟ್ಟರೆ ಮುಂದೆ ಬೇರೆ ಯಾರಾದರೂ ರಾಷ್ಟ್ರಗೀತೆಯನ್ನು ಅವಮಾನಿಸಲೂಬಹುದು. ಸಾಮಾಜಿಕ ಜಾಲತಾಣದ ಮೂಲಕ ಅವಮಾನಿಸಿದವರು, ಅದನ್ನು ಹಂಚಿಕೊಂಡವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು ಎಂದೂ ಮೂಲಗಳು ಹೇಳಿವೆ.



ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್

ದೇವನೂರ, ಬರಗೂರರಿಗೆ ಅಗೌರವ: ಖಂಡನೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ವಿಚಾರಕ್ಕೆ ಸಂಬಂಧಿಸಿದಂತೆ ಸಂಸದ ಪ್ರತಾಪ್ ಸಿಂಹ ಅವರು ಸಾಹಿತಿಗಳಾದ ದೇವನೂರ ಮಹಾದೇವ ಮತ್ತು ಬರಗೂರು ರಾಮಚಂದ್ರಪ್ಪನವರನ್ನು ನಿಂದಿಸಿರುವುದು ಖಂಡನೀಯ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ದಲಿತ ಹಕ್ಕುಗಳ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಹಿಂದೂ ಮೂಲಭೂತವಾದದ ಪುರೋಹಿತಶಾಹಿ ವ್ಯವಸ್ಥೆಯನ್ನು ಬೇರೂರಿಸಲು ಶಿಕ್ಷಣ ಕ್ಷೇತ್ರವನ್ನು 'ಸಂವಹನಾ' ಕೇಂದ್ರವನ್ನಾಗಿ ಮಾಡಿಕೊಂಡಿರುವ ಬಿಜೆಪಿ ಸರ್ಕಾರ, ಕೇಂದ್ರ– ರಾಜ್ಯಗಳ ಪಠ್ಯ ಪುಸ್ತಕ ಪರಿಷ್ಕರಣೆ ಚೌಕಟ್ಟುಗಳನ್ನು ಪಾಲಿಸಿಲ್ಲ. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ರೋಹಿತ್ ಚಕ್ರತೀರ್ಥರ ಮೂಲಕ ಪಠ್ಯಪುಸ್ತಕ ಪರಿಷ್ಕರಣೆ ಮಾಡುತ್ತಿರುವುದು ಕೋಮುವಾದಿ ಹಿತಾಸಕ್ತಿಯನ್ನು ತೋರಿಸುತ್ತದೆ ಎಂದು ಟೀಕಿಸಿದೆ. ರೋಹಿತ್ ಚಕ್ರತೀರ್ಥ ಸಮಿತಿ ನಡೆಸಿರುವ ಪಠ್ಯಪುಸ್ತಕ ಮರು ಪರಿಷ್ಕರಣೆಗಳನ್ನು ಹಿಂತೆಗೆದುಕೊಂಡು, ಬರಗೂರು ರಾಮಚಂದ್ರಪ್ಪ ಸಮಿತಿ ಪರಿಷ್ಕರಿಸಿರುವ ಪಠ್ಯಗಳನ್ನು ಅಳವಡಿಸಬೇಕು ಎಂದೂ ಆಗ್ರಹಿಸಿದೆ.

ಪಠ್ಯಪುಸ್ತಕ ಪರಿಷ್ಕರಣೆ: ಸರ್ಕಾರದ ನಿಲುವಿಗೆ ಸಮರ್ಥನೆ

ಪರಿಷ್ಕೃತ ಪಠ್ಯ ಪುಸ್ತಕವನ್ನು ಹಿಂದಕ್ಕೆ ಪಡೆಯುವ ಅಗತ್ಯ ಇಲ್ಲ. ಈ ವಿಚಾರವಾಗಿ ಸರ್ಕಾರದ ನಿಲುವನ್ನು ಬೆಂಬಲಿಸಲು ಪಕ್ಷ ನಿರ್ಧರಿಸಿದೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ತಿಳಿಸಿದರು.

ಈ ಕುರಿತು ಪಕ್ಷದ ಕಚೇರಿಯಲ್ಲಿ ಸೋಮವಾರ ನಡೆದ ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರ ಸಭೆಯ ಬಳಿಕ 'ಪ್ರಜಾವಾಣಿ' ಜತೆ ಮಾತನಾಡಿದ ಅವರು, ಪಠ್ಯ ಪುಸ್ತಕ ಪರಿಷ್ಕರಣೆ ವಿರೋಧಿಸುತ್ತಿರುವವರು ಕೇವಲ ಎಡಪಂಥೀಯರು. ಇವರ ಒತ್ತಡಕ್ಕೆ ಹೆಚ್ಚಿನ ಮನ್ನಣೆ ನೀಡಬೇಕಾಗಿಲ್ಲ. ಸತ್ಯ ಸಂಗತಿ ಮಕ್ಕಳಿಗೆ ಹೇಳುವುದನ್ನು ವಿರೋಧಿಸುತ್ತಾರೆ. ಅವರ ಕಾರ್ಯಸೂಚಿಯ ವಿಷಯಗಳನ್ನೇ ಪಠ್ಯ ಪುಸ್ತಕಗಳಲ್ಲಿ ತುಂಬಿಸಿದ್ದಾರೆ. ಅದನ್ನು ಕೈಬಿಟ್ಟಿರುವುದು ಅವರ ಸಿಟ್ಟಿಗೆ ಕಾರಣ ಎಂಬ ವಿಷಯ ಸಭೆಯಲ್ಲಿ ಪ್ರಸ್ತಾಪವಾಯಿತು ಎಂದರು.

'ಎಡಪಂಥೀಯರು ಎತ್ತಿರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದೇವೆ. ಭಗತ್‌ಸಿಂಗ್ ಪಾಠ ತೆಗೆದಿಲ್ಲ, ಕುವೆಂಪು ಪಾಠವನ್ನು ಬರಗೂರು ಸಮಿತಿ ತೆಗೆದಿತ್ತು, ರೋಹಿತ್ ಸಮಿತಿ ಅದನ್ನು ಸೇರಿಸಿದೆ. ಕಾಂಗ್ರೆಸ್ ಅವಧಿಯಲ್ಲೇ ಅತಿ ಹೆಚ್ಚು ಬ್ರಾಹ್ಮಣ ಲೇಖಕರ ಪಾಠವನ್ನು ಸೇರಿಸಿತ್ತು. ಆದ್ದರಿಂದ ಪಠ್ಯ ಪುಸ್ತಕ ಪರಿಷ್ಕರಣೆಯನ್ನು ಬಲವಾಗಿ ಸಮರ್ಥಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು' ಎಂದು ರವಿಕುಮಾರ್ ಹೇಳಿದರು.

ಮೇಲ್ಜಾತಿಯವರಿಗೆ, ಹೊರಗಿನವರಿಗೆ ಸ್ಥಾನ– ಆಕ್ರೋಶ

ರಾಜ್ಯಸಭೆ ಟಿಕೆಟ್ ಹಂಚಿಕೆ: ಕಾಂಗ್ರೆಸ್‌ನಲ್ಲಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯ ಕುರಿತು ಕಾಂಗ್ರೆಸ್ ಪಕ್ಷದಲ್ಲಿ ಅಸಮಾಧಾನ ಭುಗಿಲೆದ್ದಿದ್ದು, ಟಿಕೆಟ್ ನಿರೀಕ್ಷೆಯಲ್ಲಿದ್ದ ಅನೇಕ ಆಕಾಂಕ್ಷಿಗಳು ಹಾಗೂ ಅವರನ್ನು ಬೆಂಬಲಿಸಿದ್ದ ಮುಖಂಡರು ಪಕ್ಷದ ವರಿಷ್ಠರ ನಿರ್ಧಾರವನ್ನು ಬಹಿರಂಗವಾಗಿಯೇ ಪ್ರಶ್ನಿಸಿದ್ದಾರೆ.

ಕರ್ನಾಟಕವೂ ಸೇರಿದಂತೆ ಏಳು ರಾಜ್ಯಗಳ ಹತ್ತು ಸ್ಥಾನಗಳನ್ನು ಗೆಲ್ಲಲು ಪಕ್ಷಕ್ಕೆ ಅವಕಾಶವಿದೆ. ಹಾಲಿ ಸದಸ್ಯ ಜೈರಾಮ್ ರಮೇಶ್ ಅವರನ್ನು ಮರು ಆಯ್ಕೆ ಮಾಡುವ ನಿರ್ಧಾರ ಕೈಗೊಂಡಿರುವ ಪಕ್ಷದ ವರಿಷ್ಠರ ನಡೆಯ ಕುರಿತು ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಸಮಾಧಾನ ಕಂಡುಬಂದಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಮೂವರು ಮುಖಂಡರ ಶಿಫಾರಸುಗಳನ್ನೂ ವರಿಷ್ಠರು ತಳ್ಳಿಹಾಕಿರುವುದು ಅಸಮಾಧಾನಕ್ಕೆ ಪ್ರಮುಖ ಕಾರಣವಾಗಿದೆ.

ಇತ್ತೀಚೆಗಷ್ಟೇ ರಾಜಸ್ಥಾನದ ಉದಯಪುರದಲ್ಲಿ ನಡೆದಿದ್ದ ಮೂರು ದಿನಗಳ ಅವಧಿಯ ಚಿಂತನ ಶಿಬಿರದಲ್ಲಿ ಪಕ್ಷವು ಕೈಗೊಂಡ ನಿರ್ಣಯಕ್ಕೆ ಅನುಗುಣವಾಗಿ, 50ಕ್ಕಿಂತ ಕಡಿಮೆ ವಯಸ್ಸಿನ ಶೇ 50ರಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ದೊರೆತಿದ್ದ ಮೊದಲ ಅವಕಾಶದಲ್ಲೇ ಪಕ್ಷದ ನಡೆಯ ಕುರಿತು ಪ್ರಶ್ನೆಗಳು ಉದ್ಭವಿಸಿದಂತಾಗಿದೆ.

ಮುಖ್ಯವಾಗಿ, ಪಕ್ಷದ ಆಯಾ ರಾಜ್ಯ ಘಟಕಗಳಿಂದ ಮಹಿಳೆಯರು, ಇತರೆ ಹಿಂದುಳಿದ ಜಾತಿ, ಪರಿಶಿಷ್ಟ ವರ್ಗ, ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಆದ್ಯತೆ ನೀಡುವಂತೆ ಶಿಫಾರಸು ಮಾಡಲಾಗಿತ್ತಾದರೂ, ಪಕ್ಷ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಮೇಲ್ಜಾತಿಗೆ ಸೇರಿದ ಅಭ್ಯರ್ಥಿಗಳಿಗೇ ಆದ್ಯತೆ ನೀಡಲಾಗಿದೆ ಎಂಬ ಆರೋಪಗಳು ಕೇಳಿಬಂದಿದೆ.

'ಇದೀಗ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪೈಕಿ ಎಷ್ಟು ಜನ ಇತರೆ ಹಿಂದುಳಿದ ಜಾತಿ, ಪರಿಶಿಷ್ಟ ವರ್ಗ, ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ್ದಾರೆ ಎಂಬುದನ್ನು ತಿಳಿಸುವಿರಾ?' ಎಂದು ಪಕ್ಷದ ಗುಜರಾತ್ ಘಟಕದ ಸಹ-ಪ್ರಭಾರಿ ಜಿತೇಂದ್ರ ಬಗೇಲ್ ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

ರಾಜಸ್ಥಾನದ ಮೂರು ಸ್ಥಾನಗಳನ್ನು ಹೊರಗಿನವರಾದ- ಮುಕುಲ್ ವಾಸ್ನಿಕ್, ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಪ್ರಮೋದ್ ತಿವಾರಿ ಅವರನ್ನು ಆಯ್ಕೆ ಮಾಡಲಾಗಿದೆ. ಇದರಿಂದ ರಾಜ್ಯ ಮುಖಂಡ ಪವನ್ ಖೇರಾ ತೀವ್ರ ನಿರಾಸೆಗೆ ಒಳಗಾಗಿ ಆಕ್ರೋಶ ಹೊರಹಾಕಿದ್ದಾರೆ. 'ನನ್ನ ಪಕ್ಷ ನಿಷ್ಠೆಯಲ್ಲಿ ಏನಾದರೂ ಪ್ರಮಾದ ಆಗಿದೆಯೇ?' ಎಂದು ಅವರು ಭಾನುವಾರ ರಾತ್ರಿಯಷ್ಟೇ ಟ್ವೀಟ್ ಮೂಲಕ ವರಿಷ್ಠರನ್ನು ಪ್ರಶ್ನಿಸಿದ್ದರು.

ಈ ವಿಚಾರದಲ್ಲಿ ಇತರ ಕೆಲವು ಮುಖಂಡರಿಂದ ವ್ಯಾಪಕ ಬೆಂಬಲ ವ್ಯಕ್ತವಾದ ಬೆನ್ನಲ್ಲೇ ಸೋಮವಾರ ಮತ್ತೊಂದು ಟ್ವೀಟ್ ಮಾಡಿರುವ ಅವರು, 'ನಾನು ಯಾವ ಕುಟುಂಬವನ್ನು ಬೆಂಬಲಿಸಿದ್ದೇನೋ ಆ ಕುಟುಂಬ ಈ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದೆ' ಎಂದು ಹೇಳಿದ್ದಲ್ಲದೆ, ವರಿಷ್ಠರು ಒಲವು ತೋರಿರುವ ಮೂವರೂ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

'18 ವರ್ಷಗಳ ಹಿಂದೆ ಪಕ್ಷ ಸೇರಿದ್ದರೂ ರಾಜ್ಯಸಭೆಗೆ ಕಳುಹಿಸುವ ಸಂಬಂಧ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮನಸು ಮಾಡಿಲ್ಲ. ಬಹುಶಃ ಅವರ ದೃಷ್ಟಿಯಲ್ಲಿ ನಾನು ಅರ್ಹಳಲ್ಲವೇ?' ಎಂದು ಟ್ವೀಟ್ ಮೂಲಕ ಅಸಮಾಧಾನ ತೋಡಿಕೊಂಡಿರುವ ನಟಿ ನಗ್ಮಾ, ಉತ್ತರ ಪ್ರದೇಶ ಮೂಲದ ಇಮ್ರಾನ್ ಪ್ರತಾಪಗರಿ ಅವರಿಗೆ ಮಹಾರಾಷ್ಟ್ರದ ಪಟ್ಟಿಯಲ್ಲಿ ಸ್ಥಾನ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಸರಳ ಪ್ರಶ್ನೆಗೆ ಉತ್ತರಿಸಲಾಗದಷ್ಟು ಆರೆಸ್ಸೆಸ್ ದುರ್ಬಲವೆ?'

ಬೆಂಗಳೂರು: '97 ವರ್ಷಗಳ ಇತಿಹಾಸವಿರುವ ಆರೆಸ್ಸೆಸ್ ಬಳಿ ಸರಳ ಪ್ರಶ್ನೆಗಳಿಗೆ ಉತ್ತರವಿಲ್ಲವೆ? ಈ ಸಂಘಟನೆ ಅಷ್ಟೊಂದು ದುರ್ಬಲವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಸೋಮವಾರ ಸರಣಿ ಟ್ವೀಟ್ ಮೂಲಕ ಆರೆಸ್ಸೆಸ್ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಅವರು, 'ನಿಮ್ಮ ಸಂಘದಲ್ಲಿ ಒಂದು ಜಾತಿಯ ಪದಾಧಿಕಾರಿಗಳು ಮಾತ್ರ ಯಾಕಿದ್ದಾರೆ' ಎಂಬ ಪ್ರಶ್ನೆಗೆ ಆರ್‌ಎಸ್‌ಎಸ್ ಬಳಿ ಉತ್ತರ ಇಲ್ಲ ಎನ್ನುವುದೇ ಈ ಸಂಘಟನೆಯ ಡೋಂಗಿತನಕ್ಕೆ ಸಾಕ್ಷಿ' ಎಂದಿದ್ದಾರೆ.

'ನನ್ನ ಪ್ರಶ್ನೆಗೆ ಉತ್ತರಿಸಲಾಗದ ಆರೆಸ್ಸೆಸ್, ಬಿಜೆಪಿಯ ಕೂಗುಮಾರಿಗಳನ್ನು ನನ್ನ ಮೇಲೆ ಛೂ ಬಿಟ್ಟಿದೆ. ಬಿಜೆಪಿ ನಾಯಕರ ಮಾತುಗಳು ಆರೆಸ್ಸೆಸ್ ತನ್ನ ಸ್ವಯಂಸೇವಕರಿಗೆ ಕಲಿಸಿಕೊಡುವ ಸಂಸ್ಕಾರ, ಸಂಸ್ಕೃತಿ ಯಾವುದು ಎನ್ನುವುದನ್ನು ಸೂಚಿಸುತ್ತದೆ' ಎಂದು ಹೇಳಿದ್ದಾರೆ.

'ಆರೆಸ್ಸೆಸ್ ಶಾಖೆಗೆ ಬನ್ನಿ, ಆ ಕುರಿತ ಪುಸ್ತಕ ಓದಿ ಎನ್ನುತ್ತಿದ್ದಾರೆ. ಶಾಖೆಗೆ ಹೋಗಿ, ಅವರ ಪುಸ್ತಕ ಓದಿ ಶೇಕಡಾ 40ರಷ್ಟು ಕಮಿಷನ್ ಹೊಡೆಯುವುದು, ಹಣ ಪಡೆದು ಪಕ್ಷಾಂತರ ಮಾಡುವುದನ್ನು ಕಲಿಯಬೇಕೆ? ಆರೆಸ್ಸೆಸ್ ಶಾಖೆಗೆ ಹೋದರೆ ಏನಾಗುತ್ತದೆ ಎನ್ನುವುದಕ್ಕೆ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಜೀವಂತ ಉದಾಹರಣೆ. ಸಂಸ್ಕೃತಿ, ಸಂಸ್ಕಾರ, ಸಚ್ಚಾರಿತ್ರ್ಯದಂತಹ ಮೌಲ್ಯಗಳಿಗೂ, ನಿತ್ಯ ಶಬ್ದಭೇದಿ ಮಾಡುತ್ತಿರುವ ಕಟೀಲ್ ಅವರಿಗೂ ಏನಾದರೂ ಸಂಬಂಧವಿದೆಯೆ' ಎಂದಿದ್ದಾರೆ.

ಜೂನ್ 9ಕ್ಕೆ ಬ್ರಿಟನ್ ಕುಲಪತಿಗಳ ನಿಯೋಗ ರಾಜ್ಯಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟನ್‌ನ 20 ವಿಶ್ವವಿದ್ಯಾಲಯಗಳ ಕುಲಪತಿಗಳ ನಿಯೋಗವು ಜೂನ್ 9ಕ್ಕೆ ರಾಜ್ಯಕ್ಕೆ ಬರಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬ್ರಿಟನ್ ಮತ್ತು ದಾವೋಸ್‌ನಲ್ಲಿ ನಮ್ಮ ತಂಡವು ಕೈಗೊಂಡಿರುವ ಪ್ರವಾಸವು ಫಲಪ್ರದವಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ಜತೆ ಕೈಜೋಡಿಸಲು ಹಲವು ಸಂಸ್ಥೆಗಳು ಆಸಕ್ತಿ ತೋರಿವೆ. ಈ ಕುರಿತು ಒಡಂಬಡಿಕೆಗಳನ್ನು ಅಂತಿಮಗೊಳಿಸುವುದಕ್ಕಾಗಿ ಬ್ರಿಟನ್ ಕುಲಪತಿಗಳ ನಿಯೋಗ ಬರಲಿದೆ. ಎರಡು ದಿನಗಳ ಕಾಲ ರಾಜ್ಯದ ಪ್ರಮುಖರ ಜತೆ ಸಭೆಗಳನ್ನು ನಡೆಸಲಿದ್ದಾರೆ' ಎಂದರು.

ಕಾಮನ್‌ವೆಲ್ತ್ ಶೈಕ್ಷಣಿಕ ಸಮಾವೇಶ ಮತ್ತು ವಿಶ್ವ ಶೈಕ್ಷಣಿಕ ವೇದಿಕೆಗಳ ಸಮಾವೇಶಗಳಲ್ಲಿ ತಮ್ಮ ನೇತೃತ್ವದ ನಿಯೋಗವು ಪಾಲ್ಗೊಂಡಿತ್ತು. ರಾಜ್ಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲು ಬ್ರಿಟನ್‌ನ ಹಲವು ವಿಶ್ವವಿದ್ಯಾಲಯಗಳು ಆಸಕ್ತಿ ವ್ಯಕ್ತಪಡಿಸಿವೆ. ಸೆಪ್ಟೆಂಬರ್‌ನಲ್ಲಿ ಮತ್ತೊಂದು ನಿಯೋಗ ರಾಜ್ಯಕ್ಕೆ ಬರಲಿದ್ದು, ಹಲವು ಯೋಜನೆಗಳನ್ನು ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯ್ಕ್, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲ ಜೋಶಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಂಗಳವಾರದ ಉಷ್ಣಾಂಶ
31° ಗರಿಷ್ಠ 30° ಕನಿಷ್ಠ

ಹವಾಮಾನ ಮುನ್ಸೂಚನೆ
ಭಾಗಶಃ ಮೋಡ ಕವಿದ ವಾತಾವರಣ. ಆಗಾಗ ಮಳೆ ಸಾಧ್ಯತೆ

ಹವಾಮಾನ
ಬುಧವಾರ 31° 21° | ಗುರುವಾರ 32° 21° | ಶುಕ್ರವಾರ 32° 21°


ಸೂರ್ಯೋದಯ: 5:53 ಸೂರ್ಯಾಸ್ತ: 18:48 ಚಂದ್ರೋದಯ: ಬೆ. 5:34 ಚಂದ್ರಾಸ್ತ: ಸಂ. 6:42 ಸೋಮವಾರದ ಹವಾಮಾನ : ಗರಿಷ್ಠ 31° ಕನಿಷ್ಠ 21°

‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ ಹತ್ಯೆ ಪ್ರಕರಣ

ಗುಜರಾತ್‌ನಲ್ಲಿ ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆಯಲ್ಲಿರುವ ‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಅವರನ್ನು ಕೊಲೆ ಮಾಡಿ ಲಕ್ಷಾಂತರ ರೂಪಾಯಿ ಮೌಲ್ಯದ ಬೆಳ್ಳಿ ಸಾಮಗ್ರಿ ಸಮೇತ ಪರಾರಿಯಾಗಿದ್ದ ಆರೋಪಿ ಬಿಜರಾಮ್ ಗುಜರಾತ್‌ನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.


ಜುಗರಾಜ್ ಜೈನ್

‘ರಾಜಸ್ಥಾನದ ಬಿಜರಾಮ್, ಕೆಲ ತಿಂಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದ. ಕೆಲಸ ಕೊಟ್ಟಿದ್ದ ಜುಗರಾಜ್ ಅವರನ್ನೇ ಮೇ 24ರಂದು ಕೊಲೆ ಮಾಡಿ ಪರಾರಿಯಾಗಿದ್ದ. ಈತನ ಬಗ್ಗೆ ಹೊರ ರಾಜ್ಯಗಳಿಗೆ ಫೋಟೊ ಸಮೇತ ಮಾಹಿತಿ ರವಾನಿಸಲಾಗಿತ್ತು’ ಎಂದು ಚಾಮರಾಜಪೇಟೆ ಪೊಲೀಸರು ಹೇಳಿದರು.

‘ಕೊಲೆ ಬಳಿಕ ರಾಜಸ್ಥಾನ್‌ಗೆ ಹೋಗಿದ್ದ ಆರೋಪಿ, ಕೆಲ ದಿನ ನೆಲೆಸಿದ್ದ. ಐಷಾರಾಮಿ ವಸ್ತುಗಳ ಖರೀದಿಗಾಗಿ ಸ್ವಲ್ಪ ಹಣ ಖರ್ಚು ಮಾಡಿದ್ದ. ಬೆಂಗಳೂರು ಪೊಲೀಸರು ತನ್ನನ್ನು ಹುಡುಕಿಕೊಂಡು ತನ್ನೂರಿಗೆ ಬರಬಹುದೆಂದು ತಿಳಿದು, ಅಲ್ಲಿಂದ ಗುಜರಾತ್‌ಗೆ ಹೊರಟಿದ್ದ. ಗಡಿಭಾಗದ ಚೆಕ್‌ಪೋಸ್ಟ್‌ನಲ್ಲಿದ್ದ ಸ್ಥಳೀಯ ಪೊಲೀಸರು, ಆರೋಪಿಯನ್ನು ತಡೆದು ಪರಿಶೀಲನೆ ನಡೆಸಿದ್ದರು. ಆತನ ಬಳಿ ನಗದು ಹಾಗೂ ಬೆಳ್ಳಿ ಸಾಮಗ್ರಿ ಪತ್ತೆಯಾಗಿದ್ದವು’ ಎಂದೂ ತಿಳಿಸಿದರು.


ಆರೋಪಿ ಬಿಜರಾಮ್ ಹಾಗೂ ಆತನನ್ನು ಬಂಧಿಸಿದ ಗುಜರಾತ್ ಪೊಲೀಸರ ತಂಡ

‘ವಶಕ್ಕೆ ಪಡೆದು ವಿಚಾರಿಸಿದಾಗ, ಬೆಂಗಳೂರಿನಲ್ಲಿ ಕೊಲೆ ಮಾಡಿರುವ ಸಂಗತಿಯನ್ನು ಆರೋಪಿ ಬಾಯ್ಬಿಟ್ಟಿದ್ದಾನೆ. ಈ ಬಗ್ಗೆ ಗುಜರಾತ್ ಪೊಲೀಸರು ಮಾಹಿತಿ ನೀಡಿದ್ದು, ಶೀಘ್ರವೇ ಆರೋಪಿಯನ್ನು ಕಸ್ಟಡಿಗೆ ಪಡೆದು ಬೆಂಗಳೂರಿಗೆ ಕರೆತರಲಾಗುವುದು’ ಎಂದೂ ಹೇಳಿದರು.

ಸಂಚು ರೂಪಿಸಿ ಕೊಲೆ: ‘ಜುಗರಾಜ್ ಜೈನ್ ಅವರ ಕಿರಿಯ ಮಗ ಆನಂದ್‌ಕುಮಾರ್, ಮನೆ ಕೆಲಸಕ್ಕೆಂದು ಆರೋಪಿ ಬಿಜರಾಮ್‌ನನ್ನು ನೇಮಿಸಿಕೊಂಡಿದ್ದರು. ಆರೋಪಿಯೇ ಜುಗರಾಜ್ ಅವರನ್ನು ನಿತ್ಯವೂ ಮಳಿಗೆಗೆ ಕರೆದೊಯ್ದು, ವಾಪಸು ಕರೆದುಕೊಂಡು ಬರುತ್ತಿದ್ದ. ಜುಗರಾಜ್ ವಾಸವಿದ್ದ ಚಾಮರಾಜಪೇಟೆಯ ವಸತಿ ಸಮುಚ್ಚಯವೊಂದರ ನೆಲಮಹಡಿಯಲ್ಲೇ ಆರೋಪಿಗೆ ತಂಗಲು ಕೊಠಡಿ ನೀಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಜುಗರಾಜ್ ಅವರ ಮನೆಯಲ್ಲಿ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ನಗದು ಇರುವ ಸಂಗತಿ ಆರೋಪಿಗೆ ಗೊತ್ತಾಗಿತ್ತು. ಅವುಗಳನ್ನು ದೋಚಲು ಆರೋಪಿ ಸಂಚು ರೂಪಿಸಿದ್ದ. ಮೇ 23ರಂದು ಕುಟುಂಬಸ್ಥರೆಲ್ಲರೂ ಗೋವಾಗೆ ಹೋಗಿದ್ದರು. ಜುಗರಾಜ್ ಮಾತ್ರ ಮನೆಯಲ್ಲಿದ್ದರು. ಮೇ 24ರಂದು ಜುಗರಾಜ್ ಜೊತೆ ಮಳಿಗೆಗೆ ಹೋಗಿದ್ದ ಆರೋಪಿ, ರಾತ್ರಿ ಮಳಿಗೆ ಬಂದ್ ಮಾಡಿಕೊಂಡು ಮನೆಗೆ ವಾಪಸು ಬಂದಿದ್ದ.’

‘ಮನೆಯಲ್ಲಿ ಒಂಟಿಯಾಗಿದ್ದ ಜುಗರಾಜ್ ಅವರ ಕೈ–ಕಾಲು ಕಟ್ಟಿ ಹಾಕಿದ್ದ ಆರೋಪಿ, ಕಿರುಚಾಡದಂತೆ ಬಾಯಿಗೆ ಬಟ್ಟೆ ತುರುಕಿದ್ದ. ನಂತರ, ಹಲ್ಲೆ ಮಾಡಿ ಕೊಂದಿದ್ದ. ಮೃತದೇಹವನ್ನು ಸ್ನಾನದ ಕೋಣೆಯಲ್ಲಿರಿಸಿ ಪರಾರಿಯಾಗಿದ್ದ’ ಎಂದೂ ಪೊಲೀಸರು ತಿಳಿಸಿದರು.

‘₹ 8 ಲಕ್ಷ ನಗದು ಮಾತ್ರ ಪತ್ತೆ’

ಆರೋಪಿ ಬಿಜರಾಮ್ ಬಳಿ ಕೇವಲ ₹ 8 ಲಕ್ಷ ನಗದು ಸಿಕ್ಕಿದ್ದು, ಗುಜರಾತ್ ಪೊಲೀಸರ ಮೇಲೆ ಅನುಮಾನ ವ್ಯಕ್ತವಾಗಿದೆ.

‘ಫೈನಾನ್ಸ್ ವ್ಯವಹಾರ ಮಾಡುತ್ತಿದ್ದ ಜುಗರಾಜ್, ಲಕ್ಷಾಂತರ ರೂಪಾಯಿ ಮನೆಯಲ್ಲಿ ಇರಿಸಿಕೊಂಡಿದ್ದರು. ಅದನ್ನೆಲ್ಲ ಆರೋಪಿ ದೋಚಿಕೊಂಡು ಹೋಗಿದ್ದಾನೆ. ಆತನನ್ನು ಬಂಧಿಸಿರುವ ಗುಜರಾತ್ ಪೊಲೀಸರು, ₹ 8 ಲಕ್ಷ ನಗದು ಹಾಗೂ ₹15 ಲಕ್ಷ ಮೌಲ್ಯದ ಚಿನ್ನಾಭರಣ ಮಾತ್ರ ಜಪ್ತಿ ಮಾಡಿರುವುದಾಗಿ ಹೇಳುತ್ತಿದ್ದಾರೆ. ಈ ಬಗ್ಗೆ ಅನುಮಾನ ಮೂಡಿದ್ದು, ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಿಸಿದಾಗಲೇ ನಿಜಾಂಶ ತಿಳಿಯಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹಗಲಿನಲ್ಲಿ ಹೋಟೆಲ್ ಕೆಲಸ: ರಾತ್ರಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮೊಹಮ್ಮದ್ ಸಾದಿಕ್ (31) ಎಂಬುವವರನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಂಗಳೂರಿನ ಸಾದಿಕ್, ಐಷಾರಾಮಿ ಜೀವನಕ್ಕಾಗಿ ಕಳ್ಳತನ ಮಾಡುತ್ತಿದ್ದರು. ಅವರಿಂದ ₹ 18 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಯ ತಂದೆ–ತಾಯಿ 18 ವರ್ಷಗಳ ಹಿಂದೆಯೇ ತೀರಿಕೊಂಡಿದ್ದರು. ಊರು ತೊರೆದಿದ್ದ ಆರೋಪಿ, ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದರು. ಸಿಟಿ ಮಾರ್ಕೆಟ್ ಬಳಿಯ ಹೋಟೆಲೊಂದರಲ್ಲಿ ಸ್ವಚ್ಛತೆಯ ಕೆಲಸಕ್ಕೆ ಸೇರಿದ್ದರು.’

‘ಕೆಲಸದಿಂದ ಬರುತ್ತಿದ್ದ ಸಂಬಳ ಜೀವನ ನಿರ್ವಹಣೆಗೆ ಸಾಲುತ್ತಿರಲಿಲ್ಲ. ಇದೇ ಕಾರಣಕ್ಕೆ ಆರೋಪಿ, ಕಳ್ಳತನಕ್ಕೆ ಇಳಿದಿದ್ದರು. ಕುಮಾರಸ್ವಾಮಿ ಲೇಔಟ್, ಸಿಟಿ ಮಾರ್ಕೆಟ್, ಬನಶಂಕರಿ ಠಾಣೆ ವ್ಯಾಪ್ತಿಯ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದರು.’


ಬಂಧಿತ ಆರೋಪಿ ಹಾಗೂ ಜಪ್ತಿ ಮಾಡಲಾದ ಆಭರಣ ಜೊತೆ ಬಸವನಗುಡಿ ಠಾಣೆ ಪೊಲೀಸರು

ಅಪರಾಧ ಸುದ್ದಿ

‘ಮೇ 27ರಂದು ಬಸವನಗುಡಿ ಠಾಣೆ ವ್ಯಾಪ್ತಿಯ ಟಾಟಾ ಸಿಲ್ಕ್ ಫಾರ್ಮ್ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.

ಕೊಲೆಯಲ್ಲಿ ಅಂತ್ಯವಾದ ಅಡುಗೆ ಕೆಲಸಗಾರರ ಜಗಳ

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯ ಹೋಟೆಲೊಂದರಲ್ಲಿ ಅಡುಗೆ ಕೆಲಸಗಾರರ ನಡುವೆ ಜಗಳವಾಗಿದ್ದು, ಮಿಲನ್ ಬಾರಲ್ (25) ಎಂಬುವವರ ಕೊಲೆಯಲ್ಲಿ ಅಂತ್ಯವಾಗಿದೆ.

‘ನೇಪಾಳದ ಮಿಲನ್ ಕೊಲೆಯಾದ ವ್ಯಕ್ತಿ. ಕೊಲೆ ಆರೋಪದಡಿ ಸಹೋದ್ಯೋಗಿ ಆರ್ಯನ್ ಪುಷ್ಕರ್ (20) ಎಂಬಾತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಿಲನ್ ಹಾಗೂ ಆರ್ಯನ್, ಕೆಲ ವರ್ಷಗಳ ಹಿಂದೆಯಷ್ಟೇ ನೇಪಾಳದಿಂದ ನಗರಕ್ಕೆ ಬಂದಿದ್ದರು. ಅವರಿಬ್ಬರು, ಒಂದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ. ಕ್ಷುಲ್ಲಕ ಕಾರಣಕ್ಕಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಇದೇ ವೇಳೆಯೇ ಆರೋಪಿ ಆರ್ಯನ್, ಚಾಕುವಿನಿಂದ ಮಿಲನ್ ಅವರಿಗೆ ಇರಿದು ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ತಿಳಿಸಿದರು.

ಕ್ರಿಕೆಟ್ ಬೆಟ್ಟಿಂಗ್: ₹9.50 ಲಕ್ಷ ಜಪ್ತಿ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಆತನಿಂದ ₹ 9.50 ಲಕ್ಷ ಜಪ್ತಿ ಮಾಡಿದ್ದಾರೆ.

‘ಇಂದಿರಾನಗರ ಠಾಣೆ ವ್ಯಾಪ್ತಿಯ ಎಚ್‌ಎಎಲ್ 2ನೇ ಹಂತದ 12ನೇ ಮುಖ್ಯರಸ್ತೆಯಲ್ಲಿ ಸುತ್ತಾಡುತ್ತಿದ್ದ ಆರೋಪಿ, ರಾಜಸ್ಥಾನ್ ರಾಯಲ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳ ಪಂದ್ಯದ ಮೇಲೆ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಸಾರ್ವಜನಿಕರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ದಾಳಿ ಮಾಡಿ ಬಂಧಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

177 ಚೀಲ ಪ್ಲಾಸ್ಟಿಕ್ ವಶ

ಬೆಂಗಳೂರು: ಕಲಾಸಿಪಾಳ್ಯ ಮಾರುಕಟ್ಟೆಯಲ್ಲಿ ಲಾರಿ ಮೂಲಕ ಅಂಗಡಿಗಳಿಗೆ ಸಾಗಿಸುತ್ತಿದ್ದ 25 ಕೆ.ಜಿ ತೂಕದ 177 ಚೀಲಗಳನ್ನು ಬಿಬಿಎಂಪಿ ಸೋಮವಾರ ವಶಕ್ಕೆ ಪಡೆದಿದೆ.

7.30ರ ಸುಮಾರಿಗೆ ಪ್ಲಾಸ್ಟಿಕ್ ಸಾಗಿಸುತ್ತಿದ್ದ ಲಾರಿಯನ್ನು ಮಾರ್ಷಲ್‌ಗಳು ತಪಾಸಣೆ ನಡೆಸಿದಾಗ ಎಲ್ಲ ಚೀಲಗಳಲ್ಲೂ ನಿಷೇಧಿತ ಪ್ಲಾಸ್ಟಿಕ್ ಇರುವುದು ಪತ್ತೆಯಾಯಿತು. ಲಾರಿ ಸಹಿತ ಪ್ಲಾಸ್ಟಿಕ್ ವಶಕ್ಕೆ ಪಡೆಯಲಾಯಿತು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

‘ಗುಜರಾತಿನ ಅಹಮದಾಬಾದ್ ಜಿಲ್ಲೆಯಿಂದ ಲಾರಿ ಬಂದಿದ್ದು, ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳನ್ನು ಎಸ್.ವಿ. ರಸ್ತೆ, ಕಲಾಸಿಪಾಳ್ಯ, ಕೆ.ಆರ್. ಮಾರುಕಟ್ಟೆಯಲ್ಲಿ ವಿವಿಧ ಅಂಗಡಿಗಳಿಗೆ ವಿತರಣೆ ಮಾಡಲಾಗುತ್ತಿತ್ತು ಎಂದು ಚಾಲಕರು ತಿಳಿಸಿದ್ದಾರೆ. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮದ ಪ್ರಕಾರ ಕ್ರಮ ಜರುಗಿಸಲಾಗುವುದು’ ಎಂದು ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಪರಶುರಾಮ್ ಶಿನ್ನಾಳ್ಕರ್ ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

32 ವಿದೇಶಿಗರು ವಶಕ್ಕೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ವಾಸವಿದ್ದ 32 ವಿದೇಶಿ ಪ್ರಜೆಗಳನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದು, ಅವರ ಪೂರ್ವಾಪರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

‘ವೀಸಾ ಅವಧಿ ಮುಗಿದರೂ ತಮ್ಮ ದೇಶಕ್ಕೆ ವಾಪಸ್ಸಾಗದ ವಿದೇಶಿ ಪ್ರಜೆಗಳು, ಡ್ರಗ್ಸ್, ಸೈಬರ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇದರ ಪತ್ತೆಗಾಗಿ ಸೋಮವಾರ ವಿಶೇಷ ಕಾರ್ಯಾಚರಣೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

‘ವಿವಿಧ ವಿಭಾಗದ ಠಾಣೆಗಳ ವ್ಯಾಪ್ತಿಯಲ್ಲಿ ಪ್ರಜೆಗಳು ವಾಸವಿದ್ದರು. ಇವರಿಗೆ ಮನೆ ಬಾಡಿಗೆ ನೀಡಿದ್ದ ಮಾಲೀಕರಿಂದಲೂ ಹೇಳಿಕೆ ಪಡೆಯಲಾಗುತ್ತಿದೆ’ ಎಂದೂ ತಿಳಿಸಿದರು.

ಜಾರಕಿಹೊಳಿ ಪ್ರಕರಣ: ವಿಚಾರಣೆ ಮುಂದಕ್ಕೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಿರುವ ಆದೇಶ ಮತ್ತು ಬ್ಲಾಕ್‌ಮೇಲ್ ಆರೋಪಕ್ಕೆ ಸಂಬಂಧಿಸಿದಂತೆ ಜಾರಕಿಹೊಳಿ ಅವರ ದೂರು ಆಧರಿಸಿ ಸದಾಶಿವನಗರ ಠಾಣಾ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಸಂತ್ರಸ್ತೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಜೂನ್ 27ಕ್ಕೆ ಮುಂದೂಡಿದೆ.

ಸಂತ್ರಸ್ತೆ ಸಲ್ಲಿಸಿರುವ ಎರಡು ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಐಎಎಸ್ ಅಧಿಕಾರಿಗಳ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ

ಬೆಂಗಳೂರು: ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಮಂಜೂರಾದ ಹಣವನ್ನು ನಕಲಿ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿ ರಾಜ್ಯದ ಬೊಕ್ಕಸಕ್ಕೆ ಕೋಟ್ಯಂತರ ಮೊತ್ತದ ನಷ್ಟ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಸೇರಿದಂತೆ ಮೂವರು ಐಎಎಸ್ ಅಧಿಕಾರಿಗಳ ವಿರುದ್ಧದ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನಮ್ಮ ವಿರುದ್ಧದ ತನಿಖೆಗೆ ನೀಡಲಾಗಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ; ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್‌ಡಿಪಿಆರ್) ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುವ ಅಮಿತಾ ಪ್ರಸಾದ್ (ನಿವೃತ್ತ ಐಎಎಸ್), ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಮತ್ತು ರಾಜ್ಯ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹಾಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನಕುಮಾರ್, 'ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ 2015 ಮತ್ತ 2018ರಲ್ಲಿ ತನಿಖೆ ನಡೆಸಲಾಗಿದೆ. ಬಿ.ಎಸ್.ರಾಯಗೇರಿ ಮತ್ತು ಇತರರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಇದೇ ದೂರುದಾರ ಎಸಿಬಿಗೆ ದೂರು ನೀಡಿದಾಗ ನಮ್ಮ ಅರ್ಜಿದಾರರ ಬಗ್ಗೆ ಎಲ್ಲೂ ಏನೂ ಆರೋಪ ಮಾಡಿಲ್ಲ. ಅಂತೆಯೇ 2015ರ ಲೆಕ್ಕ ಪರಿಶೋಧನಾ ವರದಿ ಆದರಿಸಿ ಈ ದೂರು ದಾಖಲಿಸಲಾಗಿದೆ. ಅದರೆ, ಆ ವರದಿಯಲ್ಲೂ ಎಲ್ಲಿಯೂ ನಮ್ಮ ಅರ್ಜಿದಾರರ ಬಗ್ಗೆ ಆರೋಪಗಳಿಲ್ಲ' ಎಂದು ಪ್ರತಿಪಾದಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿದಾರರ ವಿರುದ್ಧದ ಎಸಿಬಿ ತನಿಖೆ ಮತ್ತು ಮುಂದಿನ ಎಲ್ಲಾ ಪ್ರಕ್ರಿಯೆಗೆ ತಡೆ ನೀಡಿತು.

ಪ್ರತಿವಾದಿಗಳಾದ ಹಲಸೂರು ಗೇಟ್ ಠಾಣೆ ಪೊಲೀಸರು, ಎಸಿಬಿ ಮತ್ತು ಖಾಸಗಿ ದೂರುದಾರ ಎಸ್. ನಾರಾಯಣ ಸ್ವಾಮಿ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ ಹಾಗೂ ರಾಜ್ಯ ಜಲ ಮತ್ತು ನೈರ್ಮಲ್ಯ ಮಿಷನ್ ಯೋಜನೆಯಡಿ ಮಂಜೂರಾಗಿದ್ದ ಹಣವನ್ನು 2011ರಿಂದ 2015ರ ಮಧ್ಯದ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಅಮಿತಾ ಪ್ರಸಾದ್, ಟಿ.ಎಂ. ವಿಜಯಭಾಸ್ಕರ್, ಡಾ.ಇ.ವಿ.ರಮಣರೆಡ್ಡಿ ದುರುಪಯೋಗ ಪಡಿಸಿಕೊಂಡಿದ್ದಾರೆ. ನೂರಾರು ನಕಲಿ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಲು ಆದೇಶಿಸಿ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಎಸ್.ನಾರಾಯಣ ಸ್ವಾಮಿ ಖಾಸಗಿ ದೂರು ಸಲ್ಲಿಸಿದ್ದರು. ದೂರಿನ ವಿಚಾರಣೆ ನಡೆಸಿದ್ದ ನಗರದ ಎಸಿಬಿ ವಿಶೇಷ ನ್ಯಾಯಾಲಯ, 'ಅರ್ಜಿದಾರರ ವಿರುದ್ಧ ತನಿಖೆ ನಡೆಸಿ ನಾಲ್ಕು ತಿಂಗಳಲ್ಲಿ ವರದಿ ಸಲ್ಲಿಸಿ' ಎಂದು 2022ರ ಏಪ್ರಿಲ್ 18ರಂದು ಆದೇಶಿಸಿತ್ತು.

ಅಪರಾಧ ಪ್ರಕರಣ ತನಿಖೆಗೆ ಹೈಕೋರ್ಟ್ ಗಡುವು

ಬೆಂಗಳೂರು: ಅಪರಾಧ ಪ್ರಕರಣಗಳ ತನಿಖೆಯ ವಿಳಂಬವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಪೊಲೀಸರು ಮತ್ತು ತನಿಖಾ ಸಂಸ್ಥೆಗಳಿಗೆ ಇಂತಿಷ್ಟೇ ಅವಧಿಯಲ್ಲಿ ತನಿಖೆ ಪೂರ್ಣಗೊಳಿಸಬೇಕೆಂಬ ಗಡುವು ನಿಗದಿಪಡಿಸಿದೆ.

ಸಣ್ಣಪುಟ್ಟ ಅಪರಾಧಗಳು ಮತ್ತು ಗಂಭೀರ ಅಪರಾಧಗಳ ತನಿಖೆ ಪೂರ್ಣಗೊಳಿಸಲು ಕ್ರಮವಾಗಿ 60 ಮತ್ತು 90 ದಿನಗಳ ಕಾಲಾವಕಾಶ ನಿಗದಿಪಡಿಸಿದೆ.

ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯಕುಮಾರ್ ಪಾಟೀಲ್ ವಿರುದ್ಧ 2012ರಲ್ಲಿ ಸಲ್ಲಿಸಲಾಗಿದ್ದ ಅಕ್ರಮ ಆಸ್ತಿ ಗಳಿಕೆ ಆರೋಪ ಪ್ರಕರಣದಲ್ಲಿ ತನಿಖೆ ವಿಳಂಬವಾಗುತ್ತಿದೆ ಎಂದು ದೂರುದಾರ ಸುಜಿತ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಹತ್ವದ ಮಧ್ಯಂತರ ಆದೇಶ ನೀಡಿದ್ದು, ತ್ವರಿತ ತನಿಖೆಗೆ ವಿಸ್ತೃತ ಮಾರ್ಗಸೂಚಿ ರೂಪಿಸಿ ಪೊಲೀಸರಿಗೆ ಹಲವು ನಿರ್ದೇಶನಗಳನ್ನು ನೀಡಿದೆ.

ತನಿಖೆ ಪೂರ್ಣಗೊಳಿಸಲು ಸಮಯ ವಿಸ್ತರಣೆಗೆ ಸೂಕ್ತ ಕಾರಣ ಪಡೆದು ವಿಚಾರಣಾ ಕೋರ್ಟ್‌ಗಳು ಪೊಲೀಸರ ಕೋರಿಕೆಯ ಮೇರೆಗೆ ತನಿಖೆಯ ಅವಧಿಯನ್ನು ವಿಸ್ತರಣೆ ಮಾಡಬಹುದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಬೆಂಗಳೂರು ವಿ.ವಿ: ದೂರು ವಾಪಸ್ ಪಡೆಯಲು ಒತ್ತಾಯ

ವಿದ್ಯಾರ್ಥಿಗಳಿಂದ ಧರಣಿ ಆರಂಭ

ಪ್ರಜಾವಾಣಿ ವಾರ್ತೆ



ಬೆಂಗಳೂರು ವಿ.ವಿಯ ಜ್ಞಾನಭಾರತಿ ಆವರಣದಲ್ಲಿ ಸೋಮವಾರ ವಿದ್ಯಾರ್ಥಿಗಳು ಧರಣಿ ನಡೆಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸೋಮವಾರದಿಂದ ಧರಣಿ ಆರಂಭಿಸಿದ್ದಾರೆ.

ಇಬ್ಬರು ಸಂಶೋಧನಾ ವಿದ್ಯಾರ್ಥಿಗಳ ವಿರುದ್ಧ ಹಣಕಾಸು ಅಧಿಕಾರಿ (ಪ್ರಭಾರ) ಆರ್. ಜಯಲಕ್ಷ್ಮಿ ಅವರು ಜ್ಞಾನಭಾರತಿ ಪೊಲೀಸ್ ಠಾಣೆಗೆ ನೀಡಿರುವ ದೂರು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ವಿದ್ಯಾರ್ಥಿಗಳು ಧರಣಿ ನಡೆಸುತ್ತಿದ್ದಾರೆ.

ಜ್ಞಾನಭಾರತಿ ಆವರಣದಲ್ಲಿನ ಎಲ್ಲ ತರಗತಿಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳು, ಆಡಳಿತ ಕಚೇರಿ ಕಟ್ಟಡದ ಮುಂಭಾಗ ಧರಣಿ ನಡೆಸಿದರು. ಹಣಕಾಸು ಅಧಿಕಾರಿಗಳು ಮತ್ತು ಕುಲಪತಿ ಅವರ ವಿರುದ್ಧ ಫಲಕಗಳನ್ನು ಪ್ರದರ್ಶಿಸಿದ ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗಿದರು.

'ಮುಖ್ಯಮಂತ್ರಿ ಅವರು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಇತ್ಯರ್ಥಗೊಳಿಸಬೇಕು. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಬೇಕು. ವಿಶ್ವವಿದ್ಯಾಲಯದ ಅಭಿವೃದ್ಧಿ ಚಟುವಟಿಕೆಗಳಿಗೆ ಮೀಸಲಿಟ್ಟಿದ್ದ ಹಣವನ್ನು ಸ್ವಾಯತ್ತ ಸಂಸ್ಥೆಯಾಗಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಮೆಕ್ಯಾನಿಕಲ್ ವಿಭಾಗದ ಕಟ್ಟಡ ನಿರ್ಮಾಣಕ್ಕೆ ವರ್ಗಾಯಿಸಲು ಕೈಗೊಂಡಿರುವ ನಿರ್ಧಾರವನ್ನು ರದ್ದುಪಡಿಸುವ ಕುರಿತು ಸ್ಪಷ್ಟ ನಿರ್ಧಾರ ಪ್ರಕಟಿಸಬೇಕು' ಎಂದು ಒತ್ತಾಯಿಸಿದರು.

'ಮಂಗಳವಾರ ದೂರು ವಾಪಸ್ ಪಡೆಯುವುದಾಗಿ ಹಣಕಾಸು ಅಧಿಕಾರಿ ಅವರು ಭರವಸೆ ನೀಡಿದ್ದಾರೆ. ಕುಲಪತಿ ಅವರು ಸಹ ಈಗ ನಡೆದಿರುವ ಘಟನೆಯನ್ನು ಸರಿಪಡಿಸುವುದಾಗಿ ತಿಳಿಸಿದ್ದಾರೆ. ಒಂದು ವೇಳೆ ದೂರು ವಾಪಸ್ ಪಡೆಯದಿದ್ದರೆ ಪ್ರತಿಭಟನೆ ಮುಂದುವರಿಸಲಾಗುವುದು' ಎಂದು ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಒಕ್ಕೂಟದ ಎನ್. ಲೋಕೇಶ್ ತಿಳಿಸಿದರು.

ನಗರದ ಹಲವೆಡೆ ಜೋರು ಮಳೆ

ಬೆಂಗಳೂರು: ನಗರದಲ್ಲಿ ಹಲವು ದಿನಗಳಿಂದ ಬಿಡುವು ಕೊಟ್ಟಿದ್ದ ಮಳೆ, ಸೋಮವಾರ ರಾತ್ರಿ ಜೋರಾಗಿ ಸುರಿದು ತಂಪಿನ ಅನುಭವ ನೀಡಿತು.

ಸೋಮವಾರ ಬೆಳಿಗ್ಗೆಯಿಂದ ಬಿಸಿಲು ಹೆಚ್ಚಿತ್ತು. ಕೆಲ ಪ್ರದೇಶಗಳಲ್ಲಿ ಮಧ್ಯಾಹ್ನ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿತ್ತು. ಸಂಜೆ ತುಂತುರು ಮಳೆ ಆರಂಭವಾಗಿತ್ತು. ರಾತ್ರಿ 7ರ ನಂತರ ತಂಪಿನ ಗಾಳಿ ಸಮೇತ ಮಳೆ ಆಯಿತು.

ಯಶವಂತಪುರ, ಮಲ್ಲೇಶ್ವರ, ರಾಜಾಜಿನಗರ, ಬಸವೇಶ್ವರನಗರ, ಮಹಾಲಕ್ಷ್ಮಿ ಲೇಔಟ್, ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತ ಮಳೆ ಆಯಿತು. ಶಿವಾಜಿನಗರ, ಎಂ.ಜಿ.ರಸ್ತೆ, ಕೋರಮಂಗಲ, ಮಡಿವಾಳ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಶಾಂತಿನಗರ, ಅಶೋಕನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಸುರಿಯಿತು.

'ನಗರದ ಹಲವೆಡೆ ಮಳೆ ಆಗಿದೆ. ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಆರೋಗ್ಯ ಸಂಜೀವಿನಿ ಶೀಘ್ರ ಜಾರಿ

ಪ್ರಜಾವಾಣಿ ವಾರ್ತೆ



ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ಅಡಿಕೆ ಹಿಂಗಾರವನ್ನು ಬಿಡಿಸುವ ಮೂಲಕ ರಾಜ್ಯ ಸರ್ಕಾರಿ ನೌಕರರ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಕೆ.ಸಿ. ನಾರಾಯಣ ಗೌಡ, ಆರ್.ಅಶೋಕ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮುನಿರತ್ನ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ನಗದುರಹಿತ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ರೂಪಿಸಿರುವ 'ಕರ್ನಾಟಕ ಆರೋಗ್ಯ ಸಂಜೀವಿನಿ' ಯೋಜನೆಗೆ ಶೀಘ್ರದಲ್ಲಿ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು-2022 ಉದ್ಘಾಟಿಸಿ ಅವರು ಮಾತನಾಡಿದರು.

'ನೌಕರರ ಆರೋಗ್ಯ ರಕ್ಷಣೆಗಾಗಿ ರೂಪಿಸಿರುವ ಆರೋಗ್ಯ ಸಂಜೀವಿನಿ ಯೋಜನೆಗೆ ಸಂಪುಟ ಸಭೆ ಅನುಮೋದನೆ ನೀಡಿದೆ. ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಸಿದ್ಧತೆಗಳು ನಡೆದಿವೆ' ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಒತ್ತಾಯದಂತೆ ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಪ್ರತ್ಯೇಕ ವರ್ಷವೇ ಏಳನೇ ವೇತನ ಆಯೋಗ ರಚಿಸಲು ತೀರ್ಮಾನಿಸಲಾಗಿದೆ. ಸರ್ಕಾರಿ ನೌಕರರು ಜನಸಾಮಾನ್ಯರ ಅಹವಾಲುಗಳಿಗೆ ತುರ್ತಾಗಿ ಸ್ಪಂದಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಅರ್ಹ ಜನರಿಗೆ ತಲುಪಿಸುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಉಪಸ್ಥಿತರಿದ್ದರು.

ಡಾ.ರಾಜಕುಮಾರ್ ಅಕಾಡೆಮಿ ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) 2021ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ನಗರದ ಡಾ. ರಾಜಕುಮಾರ್ ಸಿವಿಲ್ ಸರ್ವೀಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ ಎಂಟು ಅಭ್ಯರ್ಥಿಗಳು ಯಶಸ್ಸು ಸಾಧಿಸಿದ್ದಾರೆ.

ಬೆನಕ ಪ್ರಸಾದ್ 92ನೇ ರ‍್ಯಾಂಕ್, ಮೇಘನಾ ಕೆ.ಟಿ. 425 ನೇ ರ‍್ಯಾಂಕ್, ರಾಜೇಶ್ ಪೊನ್ನಪ್ಪ ಎಂ.ಪಿ 222, ಪ್ರೀತಿ ಪಂಚಾಲ್ 449, ಪ್ರಶಾಂತ್ ಕುಮಾರ್ ಬಿ.ಒ 641ನೇ ರ‍್ಯಾಂಕ್, ರವಿನಂದನ್ ಬಿ.ಎಂ. 455ನೇ ರ‍್ಯಾಂಕ್, ನಿಖಿಲ್ ಬಿ. ಪಾಟೀಲ್ 139, ದೀಪಕ್ ಆರ್ ಶೇಠ್ 311ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂಡಿಯಾ 4 ಐಎಎಸ್‌ಗೆ 25 ರ‍್ಯಾಂಕ್: ಸತತ ಎರಡನೇ ವರ್ಷವೂ 'ಇಂಡಿಯಾ ಫಾರ್ ಐಎಎಸ್ ಅಕಾಡೆಮಿ'ಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಅಕಾಡೆಮಿಯಲ್ಲಿ ತರಬೇತಿ ಪಡೆದ 25 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಮಾಹಿತಿಗೆ: www.india4ias.com

ಯುನಿವರ್ಸಲ್ ಕೋಚಿಂಗ್ ಸೆಂಟರ್: ವಿಜಯನಗರದ ಯುನಿವರ್ಸಲ್ ಕೋಚಿಂಗ್ ಸೆಂಟರ್‌ನ 10 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಯಕ್ಷ ಚೌಧರಿ 6ನೇ ರ‍್ಯಾಂಕ್, ಪುಸಪತಿ ಸಾಹಿತ್ಯ 24ನೇ ರ‍್ಯಾಂಕ್, ವಿ. ಅವಿನಾಶ್ 31ನೇ ರ‍್ಯಾಂಕ್, ಜಸ್ಪಿಂದರ್ ಸಿಂಗ್ 33ನೇ ರ‍್ಯಾಂಕ್, ಶುಭಂ ಶುಕ್ಲಾ 43ನೇ ರ‍್ಯಾಂಕ್, ಗರಿಮಾ 220ನೇ ರ‍್ಯಾಂಕ್, ಅಶ್ವಿನ್ ಮಾಣಿ ದೀಪ್ ಕಕುಮಾನು 235ನೇ ರ‍್ಯಾಂಕ್, ಪಿ. ಶ್ರವಣ್ ಕುಮಾರ್ 521ನೇ ರ‍್ಯಾಂಕ್, ರಾಜಕುಮಾರ್ ಮೀನಾ 554ನೇ ರ‍್ಯಾಂಕ್, ರಾಹುಲ್ ಕುಮಾರ್ ಮೀನಾ 671ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ಸಂಸ್ಥೆಯ ಇಬ್ಬರು ಆಯ್ಕೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು ನಡೆಸಿದ ಅಂತಿಮ ಪರೀಕ್ಷೆಯಲ್ಲಿ ತಮ್ಮ ಸಂಸ್ಥೆಯಿಂದ ತರಬೇತಿ ಪಡೆದ ಇಬ್ಬರು ಆಯ್ಕೆಯಾಗಿದ್ದಾರೆ ಎಂದು ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ ತಿಳಿಸಿದೆ.

ತಮ್ಮ ಸಂಸ್ಥೆಯಲ್ಲಿ ತರಬೇತುಗೊಂಡ ಡಾ.ಬೆನಕಾ ಪ್ರಸಾದ್ ಎಂ.ಜೆ. (92 ನೇ ರ‍್ಯಾಂಕ್) ಹಾಗೂ ಆರ್.ಮಂಜುನಾಥ 219ನೇ ರ‍್ಯಾಂಕ್ ಪಡೆದು ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ತೈಲ ಖರೀದಿಸದೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮಿಷನ್ ಹೆಚ್ಚಳ, ತೈಲ ದರ ಇಳಿಕೆಯಿಂದ ಆಗಿರುವ ನಷ್ಟವನ್ನು ಮರುಪಾವತಿ ಮಾಡಿಕೊಡಲು ಆಗ್ರಹಿಸಿ ಪೆಟ್ರೋಲ್ ಬಂಕ್ ಮಾಲೀಕರು ಮಂಗಳವಾರ ಖರೀದಿ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಿದ್ದಾರೆ.

ಹಿಂದೂಸ್ಥಾನ್ ಪೆಟ್ರೋಲಿಯಂ-(ಎಚ್‌.ಪಿ), ಇಂಡಿಯನ್ ಆಯಿಲ್ ಮತ್ತು ಬಿಪಿಸಿಎಲ್ ಕಂಪನಿಗಳಿಂದ ತೈಲ ಖರೀದಿಯನ್ನು ಒಂದು ದಿನದ ಮಟ್ಟಿಗೆ ಮಾಡುವುದಿಲ್ಲ. ಬಂಕ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ. ದಾಸ್ತಾನಿರುವ ಇಂಧನ ಖಾಲಿಯಾದರೆ ಗ್ರಾಹಕರಿಗೆ ತೊಂದರೆಯಾಗುವ ಸಾಧ್ಯತೆ ಇದೆ ಎಂದು ಬಂಕ್ ಮಾಲೀಕರು ತಿಳಿಸಿದರು.

ರೇಣುಕಾಚಾರ್ಯರು, ಬಸವೇಶ್ವರರ ಸಿದ್ಧಗಂಗಾ ಶ್ರೀ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮವನ್ನು ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು. ಎಸ್.ಆರ್.ವಿಶ್ವನಾಥ್, ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ಯಲಹಂಕ ಕ್ಷೇತ್ರ ಘಟಕದ ಅಧ್ಯಕ್ಷೆ ಹೇಮಲತಾ ಚಿದಾನಂದ, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಮುಖಂಡರಾದ ಮರಿಸ್ವಾಮಿ, ಗಂಗಾಂಬಿಕೆ ಮಲ್ಲಿಕಾರ್ಜುನ್ ಇದ್ದರು

ಯಲಹಂಕ: ಅನೇಕ ದಾರ್ಶನಿಕರು, ಚಿಂತಕರು ಹಾಗೂ ಸಮಾಜ ಸುಧಾರಕರು ಈ ನಾಡಿನ ಧಾರ್ಮಿಕ ಪರಂಪರೆಯನ್ನು ವಿಶ್ವಮಟ್ಟದಲ್ಲಿ ಶ್ರೀಮಂತಗೊಳಿಸಿದ್ದಾರೆ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಯಲಹಂಕ ವಿಧಾನಸಭಾ ಕ್ಷೇತ್ರ ಘಟಕ ಉಪನಗರ 5ನೇ ಹಂತದ ನಿಸರ್ಗ ಮೈದಾನದಲ್ಲಿ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯರ ಯುಗಮಾನೋತ್ಸವ, ಬಸವೇಶ್ವರರ ಜಯಂತ್ಯೋತ್ಸವ ಹಾಗೂ ಸಿದ್ಧಗಂಗಾದ ಶಿವಕುಮಾರಸ್ವಾಮಿಗಳ 115ನೇ ಜಯಂತ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ಬಸವಣ್ಣನವರು ವಚನ ಸಾಹಿತ್ಯದ ಮೂಲಕ ಜಾತಿ-ಮತ ಭೇದವಿಲ್ಲದೆ ಸಮಾನತೆಯ ಪರಿಕಲ್ಪನೆ ಅನುಷ್ಠಾನಗೊಳಿಸಿದ್ದರು. ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದ ರೇಣುಕಾಚಾರ್ಯರು 3 ಸಾವಿರಕ್ಕೂ ಹೆಚ್ಚು ಮಠಗಳನ್ನು ಸ್ಥಾಪಿಸಿ ವೀರಶೈವ ಸಮುದಾಯದ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ' ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಬಸವಣ್ಣನವರ ನೆನಪು ನಮ್ಮೆಲ್ಲರಲ್ಲೂ ಶಾಶ್ವತವಾಗಿ ಉಳಿಯಬೇಕು. ಸೋಮೇಶ್ವರ ದೇವಸ್ಥಾನದ ಬಳಿ ಈಗಾಗಲೆ ಬಸವಭವನ ಹಾಗೂ ಸಮುದಾಯಭವನ ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ. ಯಲಹಂಕದ ಮಿನಿ ವಿಧಾನಸೌಧದ ಮುಂಭಾಗದಲ್ಲಿ ಬಸವಣ್ಣನವರ 6 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಶೀಘ್ರದಲ್ಲೇ ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

ಇದಕ್ಕೂ ಮುನ್ನ ರೇಣುಕಾಚಾರ್ಯರು, ಬಸವೇಶ್ವರರು ಹಾಗೂ ಶಿವಕುಮಾರಸ್ವಾಮಿಗಳ ಭಾವಚಿತ್ರವನ್ನು ರಥದಲ್ಲಿ ಇರಿಸಿ ಹಳೇನಗರದ ಮಹಾಸಭಾ ಕಚೇರಿಯಿಂದ ಮೆರವಣಿಗೆ ನಡೆಸಲಾಯಿತು.

ಆರು ಮಕ್ಕಳನ್ನು ಬಾವಿಗೆ ಎಸೆದು, ಕೊಂದ ತಾಯಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ರಾಯಗಡ ಜಿಲ್ಲೆಯಲ್ಲಿ ಐದು ಬಾಲಕಿಯರು ಸೇರಿದಂತೆ 10ರಿಂದ 18 ವರ್ಷದೊಳಗಿನ ಆರು ಮಕ್ಕಳನ್ನು ತಾಯಿಯೇ ಬಾವಿಗೆ ಎಸೆದು ಕೊಂದಿದ್ದಾಳೆ ಎಂಬ ಆರೋಪ ಕೇಳಿಬಂದಿದೆ.

ಮಹಡ್ ತಾಲ್ಲೂಕಿನ ಖಾರಾವಳಿ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದ್ದು, ಕೌಟುಂಬಿಕ ಕಲಹವೇ ಇದಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಪುಲ್ವಾಮಾ:ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭಾನುವಾರ ತಡರಾತ್ರಿ ನಡೆದ ಎನ್‌ಕೌಂಟರ್‌ನಲ್ಲಿ ಜೈಷ್–ಎ–ಮಹಮ್ಮದ್ ಉಗ್ರ ಸಂಘಟನೆಯ ಇಬ್ಬರು ಶಂಕಿತ ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮನ್ಸೂರ್ ಬಳಿ ₹ 57.71 ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಜೈರಾಂ ರಮೇಶ್		ಮನ್ಸೂರ್ ಅಲಿ ಖಾನ್		ತಸ್ಬಿಯಾ ಖಾನ್	
ಚರಾಸ್ತಿ	₹ 1.72 ಕೋಟಿ	ಚರಾಸ್ತಿ	₹ 8.39 ಕೋಟಿ	ಚರಾಸ್ತಿ	₹ 4.41 ಕೋಟಿ
ಸ್ಥಿರಾಸ್ತಿ	₹ 2.84 ಕೋಟಿ	ಸ್ಥಿರಾಸ್ತಿ	₹ 48.34 ಕೋಟಿ	ಸ್ಥಿರಾಸ್ತಿ	₹ 9.37 ಕೋಟಿ
ಸಾಲ	₹ 35.47 ಲಕ್ಷ	ಸಾಲ	₹ 1.92 ಕೋಟಿ	ಸಾಲ	₹ 2.03 ಕೋಟಿ

ಬೆಂಗಳೂರು: ರಾಜ್ಯಸಭಾ ಚುನಾವಣೆಗೆ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಮನ್ಸೂರ್ ಅಲಿ ಖಾನ್, ತಮ್ಮ ಕುಟುಂಬದ ಬಳಿ ₹ 57.71 ಕೋಟಿ ಮೌಲ್ಯದ ಆಸ್ತಿಗಳಿವೆ ಎಂದು ಘೋಷಿಸಿಕೊಂಡಿದ್ದಾರೆ.

18 ಎಕರೆಗೂ ಹೆಚ್ಚು ಕೃಷಿ ಜಮೀನು, 14 ಕೃಷಿಯೇತರ ಜಮೀನು, ವಾಣಿಜ್ಯ ಕಟ್ಟಡಗಳು, ಮಿನಿ ಕೂಪರ್ ಮತ್ತು ಬಿಎಂಡಬ್ಲ್ಯು ಕಾರುಗಳು ತಮ್ಮ ಬಳಿ ಇವೆ ಎಂದು ನಾಮಪತ್ರದ ಜತೆಗಿನ ಪ್ರಮಾಣಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ. ಮನ್ಸೂರ್ ಬಳಿ ₹ 48.34 ಕೋಟಿ ಮೌಲ್ಯದ ಆಸ್ತಿ ಇದ್ದರೆ, ಅವರ ಪತ್ನಿ ತಸ್ಬಿಯಾ ಖಾನ್ ಬಳಿ ₹ 9.37 ಕೋಟಿ ಆಸ್ತಿ ಇದೆ. ಇಬ್ಬರ ಬ್ಯಾಂಕ್ ಖಾತೆಗಳಲ್ಲೂ ತಲಾ ₹ 1.21 ಕೋಟಿ ಠೇವಣಿಗಳಿವೆ ಎಂಬ ಮಾಹಿತಿಯನ್ನು ಚುನಾವಣಾಧಿಕಾರಿಗೆ ನೀಡಿದ್ದಾರೆ.

ಜೈರಾಂ ಆಸ್ತಿ ₹ 4.56 ಕೋಟಿ: ನಾಲ್ಕನೇ ಬಾರಿ ರಾಜ್ಯಸಭಾ ಚುನಾವಣಾ ಕಣಕ್ಕಿಳಿದಿರುವ ಜೈರಾಂ ರಮೇಶ್ ಬಳಿ ₹ 4.56 ಕೋಟಿ ಮೌಲ್ಯದ ಆಸ್ತಿ ಇದೆ. ಬ್ಯಾಂಕ್ ಖಾತೆಗಳಲ್ಲಿ ₹ 90.59 ಕೋಟಿ ಇದ್ದರೆ, ಹೂಡಿಕೆ ರೂಪದಲ್ಲಿ ₹ 27.41 ಲಕ್ಷವಿದೆ. 2011ರ ಮಾಡೆಲ್‌ನ ರಿಟ್ಜ್ ಕಾರು ತಮ್ಮ ಬಳಿ ಇದೆ ಎಂದು ಅವರು ಘೋಷಿಸಿಕೊಂಡಿದ್ದಾರೆ.

ಚಿತ್ರಾವಳಿ



'ನಾಡಗೀತೆ ಮತ್ತು ಕುವೆಂಪು ಅವರನ್ನು ಅವಮಾನಿಸಿರುವ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯನ್ನು ರದ್ದುಗೊಳಿಸಬೇಕು' ಎಂದು ಒತ್ತಾಯಿಸಿ ನಗರದ ಕೆಲ ವಕೀಲರು, ಸಿಟಿ ಸಿವಿಲ್ ನ್ಯಾಯಾಲಯದ ಎದುರು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರಗಳು



ಕುವೆಂಪು ಅವರು ಬರೆದ ನಾಡಗೀತೆಗೆ ರೋಹಿತ್ ಚಕ್ರತೀರ್ಥ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರದ ಮಲ್ಲೇಶ್ವರದಲ್ಲಿರುವ ಕುವೆಂಪು ಪುತ್ಥಳಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು



ಶೆಫರ್ಡ್ ಇಂಟರ್ ನ್ಯಾಷನಲ್, ಕರ್ನಾಟಕ ಪ್ರದೇಶ ಕುರುಬರ ಸಂಘ, ಕರ್ನಾಟಕ ರಾಜ್ಯ ಅಹಲ್ಯಾ ಬಾಯಿ ಹೋಳ್ಕರ್ ಸಂಘದ ವತಿಯಿಂದ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ವಿಧಾನಪರಿಷತ್ ಹಂಗಾಮಿ ಸಭಾಪತಿ ರಘುನಾಥ್‌ರಾವ್ ಮಲ್ಕಾಪುರೆ ಅವರನ್ನು ಬೆಂಗಳೂರಿನಲ್ಲಿ ಸೋಮವಾರ ಸನ್ಮಾನಿಸಲಾಯಿತು. ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, ಗುಜರಾತ್ ಕುರುಬ ಸಮಾಜದ ಅರ್ಜುನ್ ದೆಬಾಷಿ, ಶೆಫರ್ಡ್ ಇಂಟರ್‌ನ್ಯಾಷನಲ್‌ನ ನಾಗರಾಜ್ ಜಿದ್ದಿಮನಿ, ಐಟಿಐ ನಾಗರಾಜ್, ಆರ್‌ಪಿಎಸ್ ರೆಡ್ಡಿ ಇದ್ದರು

ಬಿಬಿಎಂಪಿ: ಮೀಸಲು ನಿಗದಿ ಕಾಯ್ದೆಗೆ ತಿದ್ದುಪಡಿ

ಒಂದನೇ ಪುಟದಿಂದ...

'ಹಿಂದುಳಿದ ವರ್ಗದವರಿಗೆ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ.ಭಕ್ತವತ್ಸಲಂ ಸಮಿತಿಯೂ ಎಂಟು ವಾರಗಳೊಳಗೆ ವರದಿ ನೀಡಲಿದೆ. ಚುನಾವಣೆಗೆ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ಬಿಜೆಪಿ ಚುನಾವಣೆಗೆ ಸಿದ್ಧವಿದೆ. ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಇತ್ತೀಚೆಗೆ ಹೇಳಿದ್ದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಮೇ 31ರಂದು ವಿವಿಧೆಡೆ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಎಚ್‌ಎಸ್‌ಆರ್ ಬಡಾವಣೆಯ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ. ಗೊಲ್ಲಹಳ್ಳಿ, ಮೈಲಸಂದ್ರ, ಬೆಟ್ಟದಸಣಪುರ, ಹೊಮ್ಮದೇವನಹಳ್ಳಿ, ಬಸವನಪುರ, ದೊಡ್ಡಕಮ್ಮನಹಳ್ಳಿ, ಅರಕೆರೆ, ಮೈಕ್ರೋಲೇಔಟ್, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ ಸುತ್ತಮುತ್ತ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ

ನಗರದಲ್ಲಿ ಇಂದು

ವಿಶ್ವ ಮಲ್ಟಿಪಲ್ ಸ್ಕ್ಲರೋಸಿಸ್(ನರ ಮಂಡಲ ಕಾಯಿಲೆ) ದಿನ: ಅತಿಥಿ: ಫಜಲ್ ಮಹ್ಮೂದ್, ಉಪಸ್ಥಿತಿ: ಶಂಕರ್ ಸುಬ್ರಮಣಿಯನ್, ಪಂಕಜ್ ಗುಪ್ತಾ, ಆಯೋಜನೆ: ರೋಟರಿ ಕ್ರಿಯಾ ಗುಂಪು (ರ‍್ಯಾಗಮ್ಸ್), ಸ್ಥಳ: ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ ಸಂಜೆ:6.30

ವಿಶ್ವ ತಂಬಾಕು ರಹಿತ ದಿನಾಚರಣೆ: ಉಪಸ್ಥಿತಿ ಸಂಸದ ಪಿ.ಸಿ. ಮೋಹನ್, ಶಾಸಕಿ ಸೌಮ್ಯ ರೆಡ್ಡಿ, ಡಾ.ವೇಣುಗೋಪಾಲ್, ಡಾ.ಪ್ರತಿಮಾ ಮೂರ್ತಿ, ಆಯೋಜನೆ: ತಂಬಾಕು ಮುಕ್ತ ಕರ್ನಾಟಕ ವೇದಿಕೆ, ಸ್ಥಳ: ನಿಮ್ಹಾನ್ಸ್ ಸಭಾಂಗಣ, ಬೆಳಿಗ್ಗೆ 11

297ನೇ ಅಹಲ್ಯಾಬಾಯಿ ಹೋಳ್ಕರ್ ಜನ್ಮದಿನೋತ್ಸವ: ಉದ್ಘಾಟನೆ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಉಪಸ್ಥಿತಿ: ಸಚಿವ ಎಂ.ಟಿ.ಬಿ ನಾಗರಾಜ, ಆರ್. ಶಂಕರ್, ಬೈರತಿ ಸುರೇಶ, ಅಧ್ಯಕ್ಷತೆ: ಎಚ್.ಎಂ.ರೇವಣ್ಣ, ಆಯೋಜಕರು: ಕರ್ನಾಟಕ ರಾಜ್ಯ ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ: 10.30

ಜಲಗಂಗಮ್ಮ ದೇವಿಯ ಜಾತ್ರೆ(ಗಂಗಾ ಕೊಲುವು): ಬೆಳಿಗ್ಗೆ 7ಕ್ಕೆ ಮಹಾಭಿಷೇಕ, 11.30ಕ್ಕೆ ವೈಯಾಲಿಕಾವಲ್ ಗೊಲ್ಲರ ಕಾಲೊನಿ ಬಳಿ ಅಂಬಲಿ ಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿತರಣೆ, ಸಂಜೆ 6ಕ್ಕೆ ಹೂವಿನ ಕರಗ ಮತ್ತು ಜಲಗಂಗಮ್ಮ ದೇವಿಯ ಮೆರವಣಿಗೆ, ರಾತ್ರಿ ದೇವಸ್ಥಾನದ ಆವರಣದಲ್ಲಿ ರಂಗೋಲಿ ಅಲಂಕಾರ, ಆಯೋಜಕರು: ಜಲಗಂಗಮ್ಮ ದೇವಸ್ಥಾನ ಸೇವಾ ಸಮಿತಿ, ಸ್ಥಳ: ಜಿ.ಡಿ.ಪಾರ್ಕ್ ವೈಯಾಲಿಕಾವಲ್

ಸನ್ಮಾನ ಕಾರ್ಯಕ್ರಮ: ಕೆ.ಎಸ್. ನಾಗರಾಜ್ ಶೆಟ್ಟಿ, ಉಪಸ್ಥಿತಿ: ಸಚಿವರಾದ ಮುರಗೇಶ ನಿರಾಣಿ, ವಿ.ಸೋಮಣ್ಣ, ಶಾಸಕ ಆರ್.ವಿ.ದೇಶಪಾಂಡೆ, ಎಸ್. ಸುರೇಶಕುಮಾರ್, ಆಯೋಜನೆ: ಪಿ.ಜಿ. ಆರ್.ಸಿಂಧ್ಯಾ, ಸ್ಥಳ: ರೇಸ್‌ಕೋರ್ಸ್ ರಸ್ತೆಯ ತಾಜ್‌ವೆಸ್ಟೆಂಡ್, ಸಂಜೆ 7

ಗಾಂಧಿ ಬಜಾರ್ ರಸ್ತೆಯ ನವೀಕರಣ ಯೋಜನೆ ಪ್ರದರ್ಶನ: ಆಯೋಜಕರು: ಬಿಬಿಎಂಪಿ, ಸ್ಥಳ: ಟ್ಯಾಗೋರ್ ಪಾರ್ಕ್ ಗಾಂಧಿ ಬಜಾರ್ ರಸ್ತೆ ಬಸವನಗುಡಿ, ಬೆಳಿಗ್ಗೆ 11

ಸಿಐಡಿ ಬಲೆಗೆ ಶಾಂತಿಬಾಯಿ, ಬಸ್ಯ ನಾಯ್ಕ

ಪ್ರಜಾವಾಣಿ ವಾರ್ತೆ



ಶಾಂತಿಬಾಯಿ–ಬಸ್ಯ ನಾಯ್ಕ ದಂಪತಿ

ಕಲಬುರಗಿ: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ತನಿಖೆ ಭೀತಿಯಿಂದ ತಲೆ ಮರೆಸಿಕೊಂಡಿದ್ದ ಅಭ್ಯರ್ಥಿ, ಸೇಡಂ ತಾಲ್ಲೂಕಿನ ಕೋನಾಪುರ ಎಸ್.ಎನ್.ತಾಂಡಾದ ಶಾಂತಿಬಾಯಿ ಮತ್ತು ಪತಿ ಬಸ್ಯ ನಾಯ್ಕ ರನ್ನು ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ.

ಈಗಾಗಲೇ ಬಂಧಿತರಾಗಿರುವ ಶಹಾಬಾದ್ ನಗರಸಭೆ ಸಿಬ್ಬಂದಿ ಜ್ಯೋತಿ ಪಾಟೀಲ ಮೂಲಕ ವ್ಯವಹಾರ ಕುದುರಿಸಿಕೊಂಡಿದ್ದ ಶಾಂತಿಬಾಯಿ ಪ್ರಕರಣದ ಪ್ರಮುಖ ಆರೋಪಿ ಮಂಜುನಾಥ ಮೇಳಕುಂದಿಗೆ ಹಣ ನೀಡಿ, ಪರೀಕ್ಷೆ ಬರೆದ ಆರೋಪವಿದೆ. ಸಿಐಡಿ ಅಧಿಕಾರಿಗಳು ಬಂಧಿಸಿ, ಸೋಮವಾರ ಕಲಬುರಗಿಗೆ ಕರೆತಂದರು. ಜೊತೆಗೆ ಇಬ್ಬರು ಮಕ್ಕಳೂ ಇದ್ದಾರೆ. ಏ.10ರಂದು ಎಸ್.ಎನ್. ತಾಂಡಾಕ್ಕೆ ಸಿಐಡಿ ಅಧಿಕಾರಿಗಳು ಭೇಟಿ ನೀಡಿದ್ದಾಗ ತಲೆಮರೆಸಿಕೊಂಡಿದ್ದರು. ನಂತರ ಇಬ್ಬರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದ್ದವು.

₹40 ಲಕ್ಷಕ್ಕೆ ಡೀಲ್!: 'ಪಿಎಸ್ಐ ಹುದ್ದೆಗೆ ಆಯ್ಕೆಗೆ ಮಧ್ಯವರ್ತಿಯಾಗಿದ್ದ ಜ್ಯೋತಿ ಪಾಟೀಲ ಮತ್ತು ಶಾಂತಿಬಾಯಿ ನಡುವೆ ಹಣದ ವ್ಯವಹಾರ ಆಗಿತ್ತು. ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಶಾಂತಿಬಾಯಿ ಹೆಸರು ಬರುವ ಮುನ್ನವೇ ಜ್ಯೋತಿ ಪಾಟೀಲಗೆ ₹ 10 ಲಕ್ಷ ಹಣ ಮುಂಗಡ ಪಾವತಿ ಆಗಿತ್ತು, ಆಯ್ಕೆಪಟ್ಟಿಯಲ್ಲಿ ಹೆಸರು ಬಂದ ಬಳಿಕ ಉಳಿದ ₹ 30 ಲಕ್ಷ ಕೊಡಲು ಸಿದ್ಧತೆ ನಡೆದಿತ್ತು' ಎಂದು ಮೂಲಗಳು ತಿಳಿಸಿವೆ. ಪ್ರಕರಣದ ಆರೋಪಿ ಆರ್.ಡಿ.ಪಾಟೀಲಗೆ ಮತ್ತೆ 4 ದಿನಗಳವರೆಗೆ ಸಿಐಡಿ ಕಸ್ಟಡಿಗೆ ನೀಡಿ ಇಲ್ಲಿನ ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಆದೇಶ ಹೊರಡಿಸಿದರು.

ದೆಹಲಿ ಸಚಿವ ಸತ್ಯೇಂದ್ರ ಜೈನ್ ಬಂಧನ

ಒಂದನೇ ಪುಟದಿಂದ...

ಈ ಬಂಧನವು ರಾಜಕೀಯ ತಿರುವು ಪಡೆದುಕೊಂಡಿದೆ. 'ಎಂಟು ವರ್ಷ ಹಳೆಯ 'ಹುಸಿ' ಪ್ರಕರಣದಲ್ಲಿ ಸತ್ಯೇಂದ್ರ ಜೈನ್ ಅವರನ್ನು ಬಂಧಿಸಲಾಗಿದೆ. ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಎಎಪಿ ಉಸ್ತುವಾರಿಯಾಗಿ ಸತ್ಯೇಂದ್ರ ಅವರು ಇದ್ದಾರೆ. ಅಲ್ಲಿ ಚುನಾವಣೆ ಸೋಲುವ ಭೀತಿಯಲ್ಲಿರುವ ಬಿಜೆಪಿ, ಹೀಗೆ ಮಾಡಿದೆ' ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಟೀಕಿಸಿದ್ದಾರೆ.

ಜೈನ್ ಮತ್ತು ಅವರ ಕುಟುಂಬದ ಒಡೆತನದ ಕಂಪನಿಗಳಿಗೆ ಸೇರಿದ ₹4.81 ಕೋಟಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ. ಇತ್ತೀಚೆಗೆ ಹೇಳಿತ್ತು. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಜೈನ್ ಅವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಜೈನ್ ಅವರು ದೆಹಲಿಯ ಆರೋಗ್ಯ, ಕೈಗಾರಿಕೆ, ವಿದ್ಯುತ್, ಗೃಹ, ನಗರಾಭಿವೃದ್ಧಿ ಮತ್ತು ಜಲಸಂಪನ್ಮೂಲ ಸಚಿವರಾಗಿದ್ದಾರೆ.

ಹಿಮಾಚಲ ಪ್ರದೇಶ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆಯಲಿದೆ. ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಭಾರಿ ಗೆಲುವು ಪಡೆದಿರುವ ಎಎಪಿ, ಹಿಮಾಚಲದಲ್ಲಿಯೂ ಛಾಪು ಮೂಡಿಸುವ ನಿರೀಕ್ಷೆಯಲ್ಲಿದೆ. ಪಂಜಾಬ್ ಚುನಾವಣೆಗೆ ಮೊದಲೇ ಜೈನ್ ಅವರನ್ನು ಇ.ಡಿ. ಬಂಧಿಸಲಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜನವರಿಯಲ್ಲಿಯೇ ಹೇಳಿದ್ದರು.

ಶೃಂಗೇರಿ ಶಾರದಾಪೀಠದ ವಿಧುಶೇಖರ ಭಾರತಿ ಸ್ವಾಮೀಜಿ

ಮಕ್ಕಳಿಗೆ ಪರಂಪರೆ, ಧರ್ಮಸೂಕ್ಷ್ಮತೆ, ಸಂಸ್ಕಾರ ಕಲಿಸಿ

ಪ್ರಜಾವಾಣಿ ವಾರ್ತೆ



ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಮತ್ತು ಇತರ ಪದಾಧಿಕಾರಿಗಳು ಗುರುವಂದನಾ ಕಾರ್ಯಕ್ರಮದ ಸಂದರ್ಭದಲ್ಲಿ ವಿಧುಶೇಖರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಬೆಂಗಳೂರು: 'ಮನೆಯಲ್ಲಿ ಮಕ್ಕಳಿಗೆ ನಮ್ಮ ಪರಂಪರೆ, ಧರ್ಮದ ಸೂಕ್ಷ್ಮತೆಗಳನ್ನು ತಿಳಿಸುವುದರ ಜೊತೆಗೆ ಉತ್ತಮ ಸಂಸ್ಕಾರವನ್ನೂ ಕಲಿಸಬೇಕು' ಎಂದು ಶೃಂಗೇರಿ ಶಾರದಾಪೀಠದ ವಿಧುಶೇಖರ ಭಾರತಿ ಸ್ವಾಮೀಜಿ ಹೇಳಿದ್ದಾರೆ.

ನಗರದ ಶಂಕರಮಠದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಪರಂಪರೆ, ಸಂಸ್ಕಾರದ ಅರಿವು ನೀಡುವುದರಿಂದ ಮುಂದಿನ ಪೀಳಿಗೆಗೂ ಧರ್ಮದ ಬಗ್ಗೆ ಜಾಗೃತಿ ಮೂಡಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಧರ್ಮದ ಆಚರಣೆಯಿಂದ ಶ್ರೇಯಸ್ಸು ಲಭಿಸಿದೆ. ಧರ್ಮದ ಅನುಷ್ಠಾನದಿಂದ ಅಪಾರವಾದ ಫಲ ಸಿಗಲಿದೆ. ತಾತ್ಕಾಲಿಕ ಸಂತೋಷಕ್ಕಾಗಿ ಧರ್ಮಾಚರಣೆಯ ನಿಯಮಗಳನ್ನು ಬಿಡಬಾರದು. ಜೀವನದ ಸಾರ್ಥಕತೆಗೆ ಧರ್ಮದ ಅನುಷ್ಠಾನ ಅತಿ ಮುಖ್ಯ. ಇದರಿಂದ ಮಾನವನ ಜೀವನದಲ್ಲಿ ಪ್ರಯೋಜನ ಸಿಗಲಿದೆ ಎಂದರು.

'ಬ್ರಾಹ್ಮಣರು ಧರ್ಮಾಚರಣೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಬೇಕು. ಬರೀ ಬ್ರಾಹ್ಮಣನಾಗಿ ಹುಟ್ಟುವುದರಿಂದ ಬ್ರಾಹ್ಮಣ್ಯ ಲಭಿಸುವುದಿಲ್ಲ. ಪರಿಪೂರ್ಣ ಬ್ರಾಹ್ಮಣನಾಗಲು ಧರ್ಮಾಚರಣೆ ಅತಿ ಮುಖ್ಯ. ಈ ನಿಟ್ಟಿನಲ್ಲಿ ಬ್ರಾಹ್ಮಣ ಸಮಾಜ ಕಾರ್ಯೋನ್ಮುಖರಾಗಬೇಕು. ಬ್ರಾಹ್ಮಣ ಸಮಾಜದ ಪ್ರತಿಯೊಬ್ಬರೂ ಐಕ್ಯಮತ ಸಾಧಿಸಲು ಇತರ ಧರ್ಮಗಳಿಗೆ ಮಾದರಿಯಾಗಬೇಕು. ಹಾಗೆಯೇ ಧರ್ಮವನ್ನು ಮೊದಲು ಅರಿತು ಇತರರಿಗೆ ಮಾರ್ಗದರ್ಶನ ಮಾಡುವಂತಾಗಬೇಕು. ಆಗ ಇತರ ಸಮಾಜದವರು ಬ್ರಾಹ್ಮಣರನ್ನು ಕೀಳಾಗಿ ಕಾಣುವ ಪ್ರಮೇಯವೇ ಬರುವುದಿಲ್ಲ. ಅಲ್ಲದೇ, ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವುದನ್ನು ಕಲಿತುಕೊಳ್ಳಬೇಕು' ಎಂದೂ ಶ್ರೀಗಳು ಸಲಹೆ ನೀಡಿದರು.

ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಮಾತನಾಡಿ, ಸನಾತನ ಧರ್ಮ ಇವತ್ತಿಗೂ ಜೀವಂತವಾಗಿ ಸದೃಢವಾಗಿ ಉಳಿದಿದೆ. ಅದಕ್ಕೆ ಶಂಕರ ಭಗವತ್ಪಾದರೇ ಕಾರಣರು. ಅನೇಕ ಮೂಢನಂಬಿಕೆಗಳು ಮತ್ತು ಅತಿಯಾದ ಕರ್ಮಶ್ರದ್ಧೆ ಮೋಕ್ಷಕ್ಕೆ ಕಾರಣ ಎಂದು ನಂಬಿದ್ದ ಕಾಲದಲ್ಲಿ ಮತ್ತು ನಾನಾ ಪಂಥಗಳಲ್ಲಿ ಹರಿದು ಹಂಚಿ ಹೋಗಿದ್ದ ಸನಾತನ ಧರ್ಮವನ್ನು ಒಂದುಗೂಡಿಸಿ ಅದನ್ನು ಒಂದು ಚೌಕಟ್ಟಿನಲ್ಲಿ ತಂದ ಶ್ರೇಯಸ್ಸು ಶಂಕರರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಚಂದ್ರಶೇಖರಯ್ಯ, ಶಾಸಕ ರವಿಸುಬ್ರಹ್ಮಣ್ಯ, ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಮಠದ ಆಡಳಿತಾಧಿಕಾರಿ ವಿ.ಆರ್. ಗೌರಿಶಂಕರ್ ಮುಂತಾದವರು ಇದ್ದರು.

'ಇನ್‌ಸೈಟ್ಸ್ ಐಎಎಸ್'ಗೆ ಹಿರಿಮೆಯ ಗರಿ

ಪ್ರಜಾವಾಣಿ ವಾರ್ತೆ


ಜಿ.ಬಿ. ವಿನಯಕುಮಾರ್

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಗಳಿಗೆ ತರಬೇತಿ ನೀಡುವ ಪ್ರತಿಷ್ಠಿತ ಸಂಸ್ಥೆಯಾಗಿರುವ 'ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ ರಾಜ್ಯದ 20 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಅಕಾಡೆಮಿಯು ಬೆಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿದೆ.

'ದೇಶದಾದ್ಯಂತ ಇನ್‌ಸೈಟ್ಸ್‌ನಲ್ಲಿ ತರಬೇತಿ ಪಡೆದ 170ಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ. ಕರ್ನಾಟಕದ 20 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ' ಎಂದು 'ಇನ್‌ಸೈಟ್ಸ್ ಐಎಎಸ್‌'ನ ಸಂಸ್ಥಾಪಕ ಮತ್ತು ನಿರ್ದೇಶಕ ಜಿ.ಬಿ. ವಿನಯಕುಮಾರ್ ತಿಳಿಸಿದ್ದಾರೆ.

'31ನೇ ರ್‍ಯಾಂಕ್ ಪಡೆದ ರಾಜ್ಯಕ್ಕೆ ಮೊದಲಿಗರಾಗಿರುವ ಅವಿನಾಶ್ ರಾಷ್ಟ್ರೀಯ ಕಾನೂನು ಕಾಲೇಜಿನಲ್ಲಿ ಪದವಿ ಪಡೆದ ಬಳಿಕ ಇನ್‌ಸೈಟ್ಸ್‌ನಲ್ಲಿ ತರಬೇತಿ ಪಡೆದರು. ಅವಿನಾಶ್ ಇನ್‌ಸೈಟ್ಸ್ ಅಕಾಡೆಮಿಯಲ್ಲಿ ಪೂರ್ಣ ಪ್ರಮಾಣದ (ಒಪಿಜಿ) ಆಫ್‌ಲೈನ್ ತರಗತಿ ಕಾರ್ಯಕ್ರಮದ ವಿದ್ಯಾರ್ಥಿಯಾಗಿದ್ದರು' ಎಂದು ವಿವರಿಸಿದ್ದಾರೆ.

'ಅಭ್ಯರ್ಥಿಗಳಿಗೆ ಬೋಧನೆ ಮತ್ತು ಉತ್ತರ ಬರೆಯುವುದು ಸೇರಿದಂತೆ ಕೌಶಲ ವೃದ್ಧಿಯ ಬಗ್ಗೆ ನಮ್ಮ ಕೇಂದ್ರದಲ್ಲಿ ಮಾರ್ಗದರ್ಶನ ನೀಡಲಾಗುತ್ತದೆ. ಇದು ಒಟ್ಟಾರೆಯಾಗಿ ಇಂಟಿಗ್ರೇಟೆಡ್ ಕೋಚಿಂಗ್ ಮಾದರಿಯಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ' ಎಂದು ವಿವರಿಸಿದರು.

'ಇನ್‌ಸೈಟ್ಸ್ ಐಎಎಸ್‌ನಲ್ಲಿ ತರಬೇತಿ ಪಡೆದವರು'

ಹೆಸರು	ರ್‍ಯಾಂಕ್	ಹೆಸರು	ರ್‍ಯಾಂಕ್
ಅವಿನಾಶ್ ವಿ	31	ದೀಪಕ್ ರಾಮಚಂದ್ರ ಶೇಟ್	311
ಎನ್. ಜಿ. ಬೆನಕ ಪ್ರಸಾದ್	92	ಹರ್ಷವರ್ಧನ್ ಬಿ.ಜಿ.	318
ನಿಖಿಲ್ ಬಸವರಾಜ ಪಾಟೀಲ್	139	ವಿನಯಕುಮಾರ್ ಡಿ.ಎಚ್	352
		ಮೇಘನಾ ಕೆ.ಟಿ	425
		ರವಿನಂದನ್ ಬಿ.ಎಂ.	455
ವಿನಯಕುಮಾರ್ ಗಾಡ್ಗೆ	151	ಮೊಹಮ್ಮದ್ ಸಿದ್ದಿಖ್ ಷರೀಫ್	516
ಅಪೂರ್ವ ಬಾಸೂರು	191	ಜೇಬ್‌ಶೇ	532
ನಿಶ್ಚಲ್	207	ನಾಗರಾಜ ಶುಭ ಪ್ರಕಾಶ್	568
ಎಂ.ಪಿ. ರಾಜೇಶ್ ಪೂಣಚ್ಚ	222	ಪ್ರಶಾಂತ್‌ಕುಮಾರ್ ಬಿ.ಒ.	641
ಸಾಹಿತ್ಯಾ ಎಂ. ಆಲದಕಟ್ಟಿ	250	ವೆಂಕಟರಾಮ್	655
ಕಲ್ಪಶ್ರೀ ಕೆ.ಆರ್	291	ಚೇತನ್‌ಕುಮಾರ್ ಬಿ	699

'ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ಈ ವಿದ್ಯಾರ್ಥಿಗಳು, ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯ ಒಜಿಪಿ, ಕೋರ್ ಬ್ಯಾಚ್, ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷಾ ಸರಣಿ ಮತ್ತು ಅಣಕು ಸಂದರ್ಶನಗಳಂತಹ ಹಲವಾರು ಕಾರ್ಯಕ್ರಮಗಳ ವಿದ್ಯಾರ್ಥಿಗಳಾಗಿದ್ದಾರೆ. ವಿದ್ಯಾರ್ಥಿಗಳಿಗೆ ಯುಪಿಎಸ್‌ಸಿ ಪರೀಕ್ಷಾ ತಯಾರಿಯನ್ನು ಸರಳೀಕರಿಸಲು ಮತ್ತು ಯಶಸ್ಸು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್‌ಸೈಟ್ಸ್ ಸತತವಾಗಿ ಶ್ರಮಿಸುತ್ತಿದೆ' ಎಂದು ತಿಳಿಸಿದ್ದಾರೆ.

'ತಂದೆಯ ಕನಸು ಈಡೇರಿತು'


ಡಾ.ಬೆನಕ ಪ್ರಸಾದ್ 92ನೇ ರ್‍ಯಾಂಕ್

ಚಿತ್ರದುರ್ಗ: ಉನ್ನತ ಹುದ್ದೆಗೇರಬೇಕೆಂಬ ತಂದೆಯ ಅಪೇಕ್ಷೆಯಂತೆ ವೈದ್ಯರಾಗಿದ್ದ ಡಾ.ಬೆನಕ ಪ್ರಸಾದ್ ಅವರು ಮೂರನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಕಂಡಿದ್ದಾರೆ. 92ನೇ ರ್‍ಯಾಂಕ್ ಪಡೆದು ಐಎಎಸ್ ಸಾಕಾರಗೊಳಿಸಿ-ಕೊಂಡಿದ್ದಾರೆ.

ಹೊಸದುರ್ಗ ತಾಲ್ಲೂಕಿನ ನಾಗರಕಟ್ಟೆಯ ಜಯಣ್ಣ -ಪಂಕಜಾ ದಂಪತಿಯ ಮೂರನೇ ಪುತ್ರ ಡಾ.ಬೆನಕ ಪ್ರಸಾದ್. ಹೊಸದುರ್ಗದ ಎಸ್‌ಜೆಎಂ ಪದವಿಪೂರ್ವ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿದ್ದ ಜಯಣ್ಣ ಅವರು ಪುತ್ರನಿಗೆ ಐಎಎಸ್ ಕನಸು ಬಿತ್ತಿದ್ದರು.

'ಚಿಕ್ಕಂದಿನಿಂದಲೂ ಓದಿನಲ್ಲಿ ಅಪಾರ ಆಸಕ್ತಿ ಹೊಂದಿದ್ದ, ಐಎಎಸ್ ಅಧಿಕಾರಿಯಾಗ-ಬೇಕು ಎಂಬುದು ತಂದೆಯ ಕನಸಾಗಿತ್ತು. ಕೊನೆಗೂ ಅದನ್ನು ಸಾಧಿಸಿದ್ದಾನೆ' ಎಂದು ಬೆನಕಪ್ರಸಾದ್ ಅಣ್ಣ ವಿಶ್ವಚೇತನ ಸಂತಸ ವ್ಯಕ್ತ-ಪಡಿಸಿದರು.

ಕೋವಿಡ್ ಸಂಕಷ್ಟದಲ್ಲಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ. ಹೊಸದುರ್ಗದ ಸಂತ ಅಂಥೋನಿ ಶಾಲೆ, ಬಂಟ್ವಾಳ ತಾಲ್ಲೂಕಿನ ಅಳಿಕೆಯ ಸತ್ಯಸಾಯಿಬಾಬ ಲೋಕಸೇವಾ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ ಪಡೆದಿದ್ದರು. ಬೆಂಗಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 2018ರಲ್ಲಿ ವೈದ್ಯಕೀಯ ಪದವಿ ಪಡೆದರು.

'ಡೆಕ್ಕನ್ ಹೆರಾಲ್ಡ್' ಓದು ನೆರವಾಯಿತು'


ನಿಖಿಲ್ ಪಾಟೀಲ್ 139ನೇ ರ್‍ಯಾಂಕ್


ವಿಜಯಪುರ: ತಾಳಿಕೋಟೆ ತಾಲ್ಲೂಕಿನ ಲಕ್ಕುಂಡಿಯ ನಿಖಿಲ್ ಪಾಟೀಲ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 139ನೇ ರ್‍ಯಾಂಕ್ ಗಳಿಸಿದ್ದಾರೆ.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ನಿಖಿಲ್, 'ರ್‍ಯಾಂಕ್ ಪಡೆದಿದ್ದು ತುಂಬಾ ಖುಷಿಯಾಗಿದೆ. ಇದುವರೆಗೆ ನಾಲ್ಕು ಬಾರಿ ಪರೀಕ್ಷೆ ಬರೆದಿದ್ದೇನೆ. ಹೋದ ವರ್ಷ ಸಂದರ್ಶನದವರೆಗೆ ಹೋಗಿ ಬಂದಿದ್ದೆ, ಆದರೆ,ರ್‍ಯಾಂಕ್ ಲಭಿಸಿರಲಿಲ್ಲ' ಎಂದರು.

'ದೆಹಲಿಯ ವಾಜಿರಾಮ್ ಇನ್‌ಸ್ಟಿಟ್ಯೂಟ್, ಬೆಂಗಳೂರಿನ ಡಾ.ರಾಜಕುಮಾರ್ ಅಕಾಡೆಮಿ ಮತ್ತು ಅಕ್ಕ ಐಎಎಸ್ ಅಕಾಡೆಮಿಯಲ್ಲಿ ಯುಪಿಎಸ್‌ಸಿ ಪರೀಕ್ಷೆಗಾಗಿ ವಿಶೇಷ ತರಬೇತಿ ಪಡೆದಿದ್ದೇನೆ. ಸಂದರ್ಶನದ ವೇಳೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಓದು ನೆರವಾಯಿತು' ಎಂದರು.

ಬೆಳಗಾವಿ ಜಿಲ್ಲೆಯ ಗೋಕಾಕ್ ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕ ಅಧಿಕಾರಿಯಾಗಿರುವ ಬಸವರಾಜ ಪಾಟೀಲ ಮತ್ತು ಅನ್ನಪೂರ್ಣ ಪಾಟೀಲ ದಂಪತಿ ಪುತ್ರ ನಿಖಿಲ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ.

ದೃಢಸಂಕಲ್ಪವೇ ಯಶಸ್ಸಿನ ಗುರಿ


ವಿನಯಕುಮಾರ 151ನೇ ರ್‍ಯಾಂಕ್

ಬೀದರ್: ಇಲ್ಲಿನ ವಿದ್ಯಾನಗರದ ವಿನಯಕುಮಾರ ಗಾಡ್ಗೆ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 151ನೇ ರ್‍ಯಾಂಕ್ ಪಡೆದಿದ್ದಾರೆ. 2020ರಲ್ಲಿ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅವರು ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದಾರೆ.

'ನಾಲ್ಕು ಬಾರಿ ಯುಪಿಎಸ್‌ಸಿ ಪರೀಕ್ಷೆ ಎದುರಿಸಿದರೂ ಉತ್ತೀರ್ಣಗೊಳ್ಳಲು ಆಗಿರಲಿಲ್ಲ. ಆದರೆ, ಪ್ರಯತ್ನ ಬಿಡದೇ ಐದನೇ ಬಾರಿಗೆ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ನಾನು ವೈದ್ಯನಾಗಿ ರೋಗಿಗಳಿಗೆ ಚಿಕಿತ್ಸೆ ನೀಡಬಹುದಿತ್ತು. ಆದರೆ, ಅದು ಆಸ್ಪತ್ರೆಗೆ ಸೀಮಿತವಾಗುತ್ತಿತ್ತು. ಎಲ್ಲ ವಿಧದಿಂದಲೂ ಸೇವೆ ಸಲ್ಲಿಸಲು ದೃಢ ಸಂಕಲ್ಪ ಮಾಡಿ ಯುಪಿಎಸ್‌ಸಿ ಪರೀಕ್ಷೆ ಬರೆದೆ. ಯಶಸ್ವಿಯಾದೆ' ಎಂದರು.

ಐಎಎಸ್ ಅಧಿಕಾರಿಯಾಗಲು ನವದೆಹಲಿಯಲ್ಲೇ ಮೂರು ವರ್ಷ ಉಳಿದು, ಅಧ್ಯಯನ ಮಾಡಿದರು.

'ಮಾದರಿ ಅಧಿಕಾರಿಯಾಗುವ ಹಂಬಲ'


ಅಪೂರ್ವಾ ಬಾಸೂರ 191ನೇ ರ್‍ಯಾಂಕ್

ಕೊಪ್ಪಳ: ಗಂಗಾವತಿಯ ಅಪೂರ್ವಾ ಬಾಸೂರ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 191ನೇ ರ್‍ಯಾಂಕ್ ಗಳಿಸಿದ್ದಾರೆ. 2010-11ನೇ ಸಾಲಿನಲ್ಲಿ ಗಂಗಾವತಿಯ ಸೇಂಟ್ ಪಾಲ್ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ ಅವರು ತಾಲ್ಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದರು.

ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನಲ್ಲಿ ಪಿಯು ಶಿಕ್ಷಣದ ನಂತರ ಬೆಂಗಳೂರಿನ ಆರ್.ವಿ.ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿ ದಂತವೈದ್ಯೆಯಾದರು. ಬಳಿಕ ನವದೆಹಲಿಯಲ್ಲಿ ಯುಪಿಎಸ್‌ಸಿ ಪರೀಕ್ಷೆಗಾಗಿ ಎರಡು ವರ್ಷ ತರಬೇತಿ ಪಡೆದರು.

'ಸಮರ್ಪಣಾ ಭಾವದ ಅಧ್ಯಯನದಿಂದ ಯಶಸ್ಸು ಗಳಿಸಲು ಸಾಧ್ಯ. ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆಯಿಂದ ಮಾದರಿ ಮಹಿಳೆಯಾಗಬೇಕು ಎಂಬ ಗುರಿಯಿದೆ. ನನ್ನ ಸಾಧನೆ ಹಿಂದೆ ಪಾಲಕರ ಶ್ರಮವಿದೆ' ಎಂದು ಅಪೂರ್ವಾ ತಿಳಿಸಿದ್ದಾರೆ.

ಅಪೂರ್ವಾ ಅವರ ತಂದೆ ಡಾ. ಶ್ರೀಕಾಂತ ಬಾಸೂರ ಸದ್ಯಕ್ಕೆ ಬೆಂಗಳೂರಿನಲ್ಲಿ ಆರೋಗ್ಯ ಇಲಾಖೆ ಅಧಿಕಾರಿಯಾಗಿದ್ದಾರೆ.

'ಕೃಷಿ ವಿಜ್ಞಾನಿ ಚಿಕ್ಕಪ್ಪನೇ ಸ್ಫೂರ್ತಿ'


ಮನೋಜ್ ಹೆಗಡೆ 213ನೇ ರ್‍ಯಾಂಕ್

ಶಿರಸಿ: ನಗರದ ಮನೋಜ್ ಹೆಗಡೆ 2021ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ 213ನೇ ರ್‍ಯಾಂಕ್ ಪಡೆದಿದ್ದಾರೆ.

'ಈ ಹಿಂದೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 300ನೇ ರ್‍ಯಾಂಕ್ ಗಳಿಸಿ ಕೇಂದ್ರ ಸರ್ಕಾರದಲ್ಲಿ ಕೃಷಿ ವಿಜ್ಞಾನಿಯಾಗಿ ಕೆಲಸ ಮಾಡುತ್ತಿರುವ ನನ್ನ ಚಿಕ್ಕಪ್ಪ ಡಾ.ರಾಜೇಂದ್ರ ಹೆಗಡೆ ಈ ನನ್ನ ಸಾಧನೆಯ ಹಿಂದಿನ ಸ್ಫೂರ್ತಿ' ಎಂದು ಮನೋಜ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಿದ್ದಾಪುರ ತಾಲ್ಲೂಕಿನ ಹಣಗಾರ ಗ್ರಾಮದವರಾದ ಅವರು, ಸದ್ಯ ಶಿರಸಿಯಲ್ಲಿ ನೆಲೆಸಿರುವ ಪಶು ಸಂಗೋಪನಾ ಇಲಾಖೆಯ ನಿವೃತ್ತ ನೌಕರ ರಾಮನಾಥ ಹೆಗಡೆ ಹಾಗೂ ಶಿಕ್ಷಕಿ ಗೀತಾ ಹೆಗಡೆ ದಂಪತಿ ಪುತ್ರ. ಕೃಷಿ ವಿಜ್ಞಾನದಲ್ಲಿ ಬಿಎಸ್ಸಿ ಪದವೀಧರರಾಗಿರುವ ಅವರು 2015ರಲ್ಲಿ ಕೆ.ಎ.ಎಸ್ ಪರೀಕ್ಷೆ ಬರೆದಿದ್ದರು. 2016, 2017 ಮತ್ತು 2019ರಲ್ಲಿ ಯು.ಪಿ.ಎಸ್.ಸಿ ಮುಖ್ಯ ಪರೀಕ್ಷೆ ಪಾಸು ಮಾಡಿದ್ದರೂ ಸಂದರ್ಶನ ಹಂತದಲ್ಲಿ ಉತ್ತೀರ್ಣರಾಗಲು ಅವರಿಗೆ ಸಾಧ್ಯವಾಗಿರಲಿಲ್ಲ.

'ಪ್ರಾಮಾಣಿಕ ಸೇವೆಯ ಸಂಕಲ್ಪ'


ದೀಪಕ ಶೇಟ್ 311ನೇ ರ್‍ಯಾಂಕ್

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಅಂಗನವಾಡಿ ಕಾರ್ಯಕರ್ತೆಯ ಮಗ ದೀಪಕ ರಾಮಚಂದ್ರ ಶೇಟ್ ಯುಪಿಎಸ್‌ಸಿ ನಡೆಸಿದ ಈ ಬಾರಿಯ ನಾಗರಿಕ ಸೇವಾ ಪರೀಕ್ಷೆಯಲ್ಲಿ 311 ನೇ ಸ್ಥಾನ ಗಳಿಸಿದ್ದಾರೆ.

'ಹಿಂದಿನ ಬಾರಿ ಸಂದರ್ಶನ ಎದುರಿಸಿದ್ದರೂ ಪಾಸಾಗಿರಲಿಲ್ಲ. ಈ ಬಾರಿ ಐ.ಎ.ಎಸ್. ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದೇನೆ. ಜನರಿಗೆ ಸರ್ಕಾರದ ಸೇವೆ ಸರಿಯಾಗಿ ತಲುಪುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. ಬಡ ಕುಟುಂಬದಿಂದ ಬಂದ ದೀಪಕ ಅವರು, ಹುಟ್ಟೂರು ಮಂಕಿ ಸಮೀಪದ ಚಿತ್ತಾರ ಗ್ರಾಮದಲ್ಲೇ ಪ್ರಾಥಮಿಕ ಶಿಕ್ಷಣ ಪೂರೈಸಿದ್ದಾರೆ.

'ಪರಿಶ್ರಮ, ತಾಳ್ಮೆ ಮುಖ್ಯ'


ಕೆ.ಆರ್‌.ಕಲ್ಪಶ್ರೀ 291ನೇ ರ್‍ಯಾಂಕ್

ತುಮಕೂರು: 'ಪರಿಶ್ರಮ, ತಾಳ್ಮೆ, ಆತ್ಮವಿಶ್ವಾಸವಿದ್ದರೆ ಯಾವುದೇ ಪರೀಕ್ಷೆ ಎದುರಿಸಿ ಗೆಲ್ಲಬಹುದು'. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಐದನೇ ಯತ್ನದಲ್ಲಿ 291ನೇ ರ್‍ಯಾಂಕ್ ಪಡೆದಿರುವ ಕೆ.ಆರ್. ಕಲ್ಪಶ್ರೀ ಅವರ ಮಾತು ಇದು.

ತಂದೆ ಕಾಂತಪ್ಪ ಶಿರಾದಲ್ಲಿ ಕಂದಾಯ ಅಧಿಕಾರಿ. ತುರುವೇಕೆರೆ ತಾಲ್ಲೂಕಿನಲ್ಲಿ ತಂದೆ ಗ್ರಾಮ ಲೆಕ್ಕಿಗರಾಗಿದ್ದಾಗ, ಅಲ್ಲಿಯೇ ಪ್ರಾಥಮಿಕ ಶಿಕ್ಷಣ, ನಂತರ ತುಮಕೂರಿನ ಜವಹಾರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಣ ಪಡೆದರು. ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು.

ದೆಹಲಿಯಲ್ಲಿ ಒಂದು ವರ್ಷ ಕೋಚಿಂಗ್ ಪಡೆದಿದ್ದು, ನಂತರ ಬೆಂಗಳೂರಿನಲ್ಲಿ ಅಭ್ಯಾಸ ಮಾಡಿದರು. ಕೋವಿಡ್ ವೇಳೆ ಶಿರಾದ ಮನೆಯಲ್ಲೇ ಓದು ಮುಂದುವರಿಸಿ, ಯಶಸ್ಸು ಕಂಡಿದ್ದಾರೆ.

'ತಂದೆ–ತಾಯಿಯ ಬೆಂಬಲ, ಸತತ ಯತ್ನ'


ವಿನಯ್‌ಕುಮಾರ್ 352ನೇ ರ್‍ಯಾಂಕ್

ಚಿತ್ರದುರ್ಗ: ಹೊಸದುರ್ಗದ ಎಂಜಿನಿಯರಿಂಗ್ ಪದವೀಧರ ಡಿ.ಎಚ್.ವಿನಯ್‌ಕುಮಾರ್ ಆರನೇ ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ. 352ನೇ ರ್‍ಯಾಂಕ್ ಪಡೆದು ಕನಸು ಕೈಗೂಡಿಸಿಕೊಂಡಿದ್ದಾರೆ.

'ಪ್ರತಿ ಬಾರಿ ವಿಫಲವಾದಾಗ ಬೇಸರವಾಗಿತ್ತು. ಆದರೂ ದೃಢ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ತಂದೆ–ತಾಯಿ ಇಬ್ಬರು ನನ್ನೊಂದಿಗೆ ನಿಂತರು. ನಿರಂತರ ಪ್ರಯತ್ನದಿಂದಲೇ ಯಶಸ್ಸು ಸಿಕ್ಕಿತು' ಎಂದು ಡಿ.ಎಚ್.ವಿನಯ್‌ಕುಮಾರ್ ಸಂತಸ ಹಂಚಿಕೊಂಡರು.

ಉಪನ್ಯಾಸಕ ಡಿ.ಎಚ್.ಹೊರಕೇರಪ್ಪ ಹಾಗೂ ಶಿಕ್ಷಕಿ ಎನ್.ರೇಖಾ ದಂಪತಿಯ ಪುತ್ರ ವಿನಯ್‌ಕುಮಾರ್ ಯುಪಿಎಸ್‌ಸಿ ಪರೀಕ್ಷೆಯ ಕನಸು ಕಂಡಿದ್ದು ಚಿಕ್ಕಂದಿನಲ್ಲಿ. ಸೂರತ್‌ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾ-ಲಜಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದರು.

'ಆರು ವರ್ಷದ ಕಠಿಣ ಶ್ರಮದ ಫಲ'


ಸಾಹಿತ್ಯಾ ಆಲದಕಟ್ಟಿ 250ನೇ ರ್‍ಯಾಂಕ್

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪಟ್ಟಣದ ಸಾಹಿತ್ಯಾ ಆಲದಕಟ್ಟಿ ಅವರು ತಮ್ಮ 6ನೇ ಯತ್ನದಲ್ಲಿ 250ನೇ ರ್‍ಯಾಂಕ್ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಪೋಷಕರ ಪ್ರೋತ್ಸಾಹ, ಬೆಂಬಲದಿಂದ ಈ ಸಾಧನೆ ಸಾಧ್ಯವಾಗಿದೆ. ಯಾವತ್ತಿಗೂ ಅಪ್ಪ–ಅಮ್ಮ ಓದು ಸಾಕು ಅಂತ ಹೇಳಿಲ್ಲ. ಎಷ್ಟಾದರೂ ಓದು ಎಂದು ಪ್ರೋತ್ಸಾಹಿಸಿದ್ದಾರೆ. ಆರು ವರ್ಷ ನನ್ನನ್ನು ನಾನೇ ಕಟ್ಟಿ ಹಾಕಿಕೊಂಡು ಶ್ರಮವಹಿಸಿದ್ದೇನೆ' ಎಂದು ಸಂತಸ ಹಂಚಿಕೊಂಡರು. ಇಲ್ಲಿನ ಧಮ್ಮಣಗಿ ಗಲ್ಲಿಯ ವ್ಯಾಪಾರಸ್ಥ ಮಲ್ಲಿಕಾರ್ಜುನ ಆಲದಕಟ್ಟಿ ಅವರ ಪುತ್ರಿ ಸಾಹಿತ್ಯಾ, ಶಾಖಾ ಮೂರುಸಾವಿರಮಠದ ನೀಲಕಂಠೇಶ್ವರ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ, ಕಿತ್ತೂರು ರಾಣಿ ಚನ್ನಮ್ಮ ಸೈನಿಕ ಶಾಲೆಯಲ್ಲಿ ದ್ವಿತೀಯ ಪಿಯುವರೆಗೆ ಓದಿದ್ದಾರೆ. ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. 2016ರ ಜುಲೈನಲ್ಲಿ ದೆಹಲಿಗೆ ಹೋಗಿ ಪರೀಕ್ಷೆಗೆ ತರಬೇತಿ ಆರಂಭಿಸಿದ್ದರು.

'ಸತತ ಪ್ರಯತ್ನ, ತಂದೆಯ ಮಾರ್ಗದರ್ಶನ'


ಬಿ.ಎಂ.ರವಿನಂದನ್ 455ನೇ ರ್‍ಯಾಂಕ್

ಹಾಸನ: ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಗ್ರಾಮದ ಎಂಜಿನಿಯರಿಂಗ್ ಪದವೀಧರ ಬಿ.ಎಂ. ರವಿನಂದನ್ ಅವರು ಆರನೇ ಪ್ರಯತ್ನದಲ್ಲಿ 455ನೇ ರ್‍ಯಾಂಕ್ ಗಳಿಸಿದ್ದಾರೆ.

'ಪರೀಕ್ಷೆ ಬರೆಯಲು ತಂದೆಯೇ ಮಾರ್ಗದರ್ಶನ ನೀಡಿದ್ದರು. ಐದು ಬಾರಿ ಪ್ರಯತ್ನಿಸಿದ್ದರೂ ನಿರೀಕ್ಷಿತ ಯಶಸ್ಸು ಸಿಕ್ಕಿರಲಿಲ್ಲ. ಆದರೆ ಪ್ರಯತ್ನ ಬಿಡಲಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ಕೆನರಾ ಬ್ಯಾಂಕ್ ನೌಕರ ಬಿ.ಟಿ.ಮಂಜೇಗೌಡ, ಶುಶ್ರೂಷಕಿ ಪದ್ಮಾ ದಂಪತಿಯ ಮಗನಾದ ಅವರು, ನಗರದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪೂರೈಸಿದರು. 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಸ್ನೇಹಿತರ ಜೊತೆ ಕೊಠಡಿಯಲ್ಲಿದ್ದುಕೊಂಡು ತಯಾರಿ ನಡೆಸಿದೆ. ದಿನಕ್ಕೆ 8 ತಾಸು ಅಧ್ಯಯನ ಮಾಡುತ್ತಿದ್ದೆ. ಐಪಿಎಸ್ ಹುದ್ದೆ ದೊರಕುವ ನಿರೀಕ್ಷೆ ಇದೆ' ಎಂದರು.

'ಕಣ್ಣು ತೆರೆಸುವ' ಸಾಧನೆ


ಕೆ.ಟಿ.ಮೇಘನಾ 425ನೇ ರ್‍ಯಾಂಕ್

ಮೈಸೂರು: ಪಿರಿಯಾಪಟ್ಟಣ ತಾಲ್ಲೂಕು ಕುಡಕೂರಿನ ಕೆ.ಟಿ. ಮೇಘನಾ 425ನೇ ರ್‍ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ. ಸದ್ಯ ಬೆಂಗಳೂರಿನ ಕಂದಾಯ ಭವನದಲ್ಲಿ ಖಜಾನೆ ಇಲಾಖೆಯ ಸಹಾಯಕ ನಿರ್ದೇಶಕಿಯಾಗಿದ್ದಾರೆ.

ಅವರಿಗೆ ಶೇ 90 ಅಂಧತ್ವವಿದೆ. ಇವರು, 2020ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲೂ 465ನೇ ರ್‍ಯಾಂಕ್ ಪಡೆದಿದ್ದರು. ಮತ್ತೊಂದು ಯತ್ನದಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳುವ-ಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ಕೆಂಗೇರಿ ನಿವಾಸಿಯಾಗಿರುವ ಅವರು ತಾಂಡವಮೂರ್ತಿ ಹಾಗೂ ನವನೀತಾ ದಂಪತಿ ಪುತ್ರಿ. 'ಎಸ್ಸೆಸ್ಸೆಲ್ಸಿ ನಂತರ ದೃಷ್ಟಿ ಕಳೆದುಕೊಂಡರು. ಆದರೆ, ಛಲಬಿಡಲಿಲ್ಲ. ಡಾ.ರಾಜ್‌ಕುಮಾರ್ ಐಎಎಸ್ ಅಕಾಡೆಮಿಯಲ್ಲಿ ಗಂಗರಾವ್, ಯುವ ರಾಜ್‌ಕುಮಾರ್ ಪ್ರೋತ್ಸಾಹಿಸಿದ್ದರು' ಎಂದು ಮೇಘನಾ ತಂದೆ ಕೆ.ಎನ್.ತಾಂಡವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಐಎಎಸ್ ಆಗಬೇಕು, ಮತ್ತೆ ಯತ್ನಿಸುತ್ತೇನೆ'


ಸವಿತಾ ಗೋಟ್ಯಾಳ 479ನೇ ರ್‍ಯಾಂಕ್

ವಿಜಯಪುರ: ವಿಜಯಪುರ ನಗರದ ಆಶ್ರಮ ಬಡಾವಣೆಯ ಸವಿತಾ ಗೋಟ್ಯಾಳ 479ನೇ ರ್‍ಯಾಂಕ್ ಗಳಿಸಿದ್ದಾರೆ. 2020ನೇ ಸಾಲಿನಲ್ಲಿ 626ನೇ ರ್‍ಯಾಂಕ್ ಲಭಿಸಿತ್ತು. ಇನ್ನಷ್ಟು ಉತ್ತಮ ರ್‍ಯಾಂಕ್ ಗಳಿಸುವ ಗುರಿ ಈಗ ಈಡೇರಿದೆ.

'ಎರಡನೇ ಬಾರಿಗೆ ಮತ್ತಷ್ಟು ಉತ್ತಮ ರ್‍ಯಾಂಕ್ ಗಳಿಸಿದ್ದೇನೆ. ಖುಷಿ ಆಗಿದೆ. ಮತ್ತೊಮ್ಮೆ ಪ್ರಯತ್ನ ಮಾಡುವ ಮೂಲಕ ಐಎಎಸ್ ಅಧಿಕಾರಿಯಾಗುವ ಗುರಿ ಸಾಧನೆಗೆ ಪ್ರಯತ್ನಿ-ಸುತ್ತೇನೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಮೂಲತಃ ಇಂಡಿ ತಾಲ್ಲೂಕಿನ ಅಥರ್ಗಾ ಗ್ರಾಮದ ಬಿಎಸ್‌ಎನ್‌ಎಲ್ ನಿವೃತ್ತ ನೌಕರ ಸಿದ್ದಪ್ಪ ಗೋಟ್ಯಾಳ ಮತ್ತು ಜಯಶ್ರೀ ದಂಪತಿಯ ಪುತ್ರಿ ಸವಿತಾ ಎಂಜಿನಿಯರಿಂಗ್ (ಕಂಪ್ಯೂಟರ್ ಸೈನ್ಸ್) ಪದವೀಧರೆ. ಇಂಡಿ ತಾಲ್ಲೂಕಿನ ಅಥರ್ಗಾ, ವಿಜಯಪುರದ ಪಿಡಿಜೆ ಸಂಸ್ಥೆಯಲ್ಲಿ ಆರಂಭಿಕ ಶಿಕ್ಷಣ ಪಡೆದಿದ್ದರು. ಸದ್ಯ ಬೆಂಗಳೂರಿನಲ್ಲಿ ಅಕೌಂಟ್ ಅಂಡ್ ಫೈನಾನ್ಸ್ ಸರ್ವಿಸ್ ವಿಭಾಗದಲ್ಲಿ ತರಬೇತಿ ಪಡೆಯುತ್ತಿ-ದ್ದಾರೆ.

ಸವಿತಾ ಅವರ ಸಹೋದರಿ ಅಶ್ವಿನಿ ಗೋಟ್ಯಾಳ ಅವರು 2016ರಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 625ನೇ ರ್‍ಯಾಂಕ್ ಗಳಿಸಿದ್ದರು. ಸದ್ಯ ಪಂಜಾಬ್‌ನ ಚಂಡೀಗಡದಲ್ಲಿ ಎಸ್‌ಎಸ್‌ಪಿಯಾಗಿ (ಸೀನಿಯರ್ ಸೂಪರಿಟೆಂಡೆಂಟ್ ಆಫ್ ಪೊಲೀಸ್) ಕಾರ್ಯನಿರ್ವಹಿಸುತ್ತಿದ್ದಾರೆ.

'ತೃಪ್ತಿ ತಂದಿಲ್ಲ'


ಪ್ರಶಾಂತ್ 621ನೇ ರ್‍ಯಾಂಕ್

ಶಿವಮೊಗ್ಗ: ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ವೈದ್ಯ ಡಾ.ಪ್ರಶಾಂತ್ ಕುಮಾರ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 621ನೇ ರ್‍ಯಾಂಕ್ ಪಡೆದಿದ್ದಾರೆ.

ನಗರದ ಬಿ.ಎಚ್.ರಸ್ತೆ ಸರ್ಕಾರಿ ಪದವಿಪೂರ್ವ ಕಾಲೇಜು ಉಪನ್ಯಾಸಕ ಬಿ. ಓಂಕಾರಪ್ಪ, ಜೆ.ರೇಖಾ ದಂಪತಿ ಪುತ್ರ ಪ್ರಶಾಂತ್ 2020ರಲ್ಲಿ ಶಿವಮೊಗ್ಗ ವೈದ್ಯಕೀಯ ಕಾಲೇಜಿನಿಂದ ಪದವಿ ಪಡೆದಿದ್ದಾರೆ. 'ರ್‍ಯಾಂಕ್ ಸಮಾಧಾನ ತಂದಿಲ್ಲ. ಮತ್ತೆ ಪರೀಕ್ಷೆ ತೆಗೆದುಕೊಳ್ಳುವ ಕುರಿತು ನಿರ್ಧರಿಸುವೆ' ಎಂದರು.

ಬಾಲ ಕಾರ್ಮಿಕ ಪದ್ಧತಿಗೆ ಪರಿಹಾರದ ಗುರಿ


ಮೊಹಮ್ಮದ್ ಸಿದ್ದಿಕ್ ಷರೀಫ್ 516ನೇ ರ್‍ಯಾಂಕ್

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೂರನೇ ಪ್ರಯತ್ನದಲ್ಲಿ ಉತ್ತೀರ್ಣ ಆಗಿರುವ ಹಂಪಿನಗರದ ಮೊಹಮ್ಮದ್ ಸಿದ್ದಿಕ್ ಶರೀಫ್, 516ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

'ಬಾಲ ಕಾರ್ಮಿಕ ಪದ್ಧತಿ ನೋಡಿದ್ದೆ. ಅದು ಮನಸಿನ ಮೇಲೆ ಪರಿಣಾಮ ಬೀರಿತ್ತು. ಐಎಎಸ್ ಅಧಿಕಾರಿಯಾದರೆ ಏನಾದರೂ ಮಾಡಬಹುದು ಎನಿಸಿತ್ತು. ಈಗ ಗುರಿ ಈಡೇರುತ್ತಿದೆ. ನನಗೆ ಮತ್ತು ನಮ್ಮ ಕುಟುಂಬಕ್ಕೆ ಅತೀವ ಸಂತಸ ತಂದಿದೆ' ಎಂದು ಸಿದ್ದಿಕ್ ಹೇಳಿದರು.

ಮೂರು ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದಿರುವ ಇವರು, ಒಂದು ಬಾರಿ ಸಂದರ್ಶನ ಎದುರಿಸಿದ್ದಾರೆ. ಪರೀಕ್ಷೆಯಲ್ಲಿ ರಾಜ್ಯಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಪಡೆದಿದ್ದರು.

ತಂದೆ ಖಾದರ್ ಅಹಮದ್ ಶರೀಫ್ ಅವರು ಚಿತ್ರದುರ್ಗದಲ್ಲಿ ಉದ್ಯಮಿ. ತಾಯಿ ಸಾಯಿದಾ ಅಸ್ಗರಿ ಗೃಹಿಣಿಯಾಗಿದ್ದಾರೆ. ಪಿಇಎಸ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪೂರ್ಣಗೊಳಿಸಿದರು.

ಸತತ ಪ್ರಯತ್ನ ನೀಡಿದ ಫಲ


ಹರ್ಷವರ್ಧನ ಬಿ.ಜಿ. 318ನೇ ರ್‍ಯಾಂಕ್

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು ಎಂಬ ಛಲದೊಂದಿಗೆ 6ನೇ ಬಾರಿ ಪರೀಕ್ಷೆ ಎದುರಿಸಿದ್ದ ಬೆಂಗಳೂರಿನ ಹರ್ಷವರ್ಧನ ಬಿ.ಜೆ. 318 ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಣ್ಣೂರು ಬಾಗಲೂರು ರಸ್ತೆಯ ಕಣ್ಣೂರಿನ ಜಯಕುಮಾರ್ ಬಿ.ಎನ್. ಮತ್ತು ಗಾಯತ್ರಿ ಕೆ.ಎಲ್. ಅವರ ಪುತ್ರ ಹರ್ಷವರ್ಧನ ಅವರ ಸತತ ಪ್ರಯತ್ನಕ್ಕೆ ಫಲ ಸಿಕ್ಕಿದೆ. ಸದ್ಯ ಇವರು ದೆಹಲಿಯಲ್ಲಿ ಎಸಿಪಿಯಾಗಿದ್ದು, ತರಬೇತಿ ಅವಧಿಯಲ್ಲಿದ್ದಾರೆ.

'ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಆಗಿರುವುದು ಸಂತಸ ತಂದಿದೆ. ಇಂಡಿಯಾ ಫಾರ್ ಐಎಎಸ್, ಇನ್‌ಸೈಟ್, ಹಿಮಾಲಯ ಸಂಸ್ಥೆಗಳಲ್ಲಿ ತರಬೇತಿ ಪಡೆದಿದ್ದೆ. ಶ್ರಮ ವಹಿಸಿದ್ದರಿಂದ ಈ ಫಲಿತಾಂಶ ಬಂದಿದೆ' ಎಂದು 'ಪ್ರಜಾವಾಣಿ' ಜತೆ ಸಂತಸ ಹಂಚಿಕೊಂಡರು. ತಾಯಿ ಗಾಯತ್ರಿ ಅವರು ಗೃಹಿಣಿಯಾಗಿದ್ದು, ತಂದೆ ಜಯಕುಮಾರ್ ನಿವೃತ್ತ ಲೆಕ್ಕಾಧಿಕಾರಿ.

ಕುಡಚಿ ಪ್ರತಿಭೆ: ಐಪಿಎಸ್ ನಿರೀಕ್ಷೆ


ಗಜಾನನ ಬಾಲೆ 319ನೇ ರ್‍ಯಾಂಕ್

ಬೆಳಗಾವಿ: ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿಯ ಗಜಾನನ ಬಾಲೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 319ನೇ ರ್‍ಯಾಂಕ್ ಗಳಿಸಿದ್ದಾರೆ.

'ಹೋದ ಬಾರಿ ಕಡಿಮೆ ರ್‍ಯಾಂಕ್ ಪಡೆದಿದ್ದರಿಂದ ಮತ್ತೆ ಪರೀಕ್ಷೆ ಎದುರಿಸಿದ್ದೆ, 6ನೇ ಯತ್ನದಲ್ಲಿ ಈಗ ಉತ್ತಮ ಫಲಿತಾಂಶ ಬಂದಿದೆ. ಐಪಿಎಸ್ ನಿರೀಕ್ಷೆಯಲ್ಲಿದ್ದೇನೆ' ಎಂದು ಬಾಲೆ 'ಪ್ರಜಾವಾಣಿ'ಗೆ ತಿಳಿಸಿದರು.

ಎಸ್ಸೆಸ್ಸೆಲ್ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ಅವರು ಗ್ರಾಮೀಣ ಪ್ರದೇಶದಿಂದ ಬಂದವರು. ತಂದೆ ಶಂಕರ್ ಅವರು ಉಗಾರ ಶುಗರ್ಸ್ ಸಕ್ಕರೆ ಕಾರ್ಖಾನೆಯಲ್ಲಿ ಎಲೆಕ್ಟ್ರೀಷಿಯನ್, ತಾಯಿ ಸುಜಾತಾ ಗೃಹಿಣಿ. ಬೆಳಗಾವಿ ಜಿಐಟಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. 2019ನೇ ಸಾಲಿನಲ್ಲಿ 663ನೇ ರ್‍ಯಾಂಕ್ ಗಳಿಸಿದ್ದರು.

ಅಪ್ಪನ ಸಾವಿಗೆ ಧೃತಿಗೆಡಲಿಲ್ಲ...


ಎಂ.ಅರುಣಾ 308ನೇ ರ್‍ಯಾಂಕ್

ತುಮಕೂರು: ರೈತರಾಗಿದ್ದ ತಂದೆ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡರೂ ಛಲ ಬಿಡದ ಯಶೋಗಾಥೆ ಶಿರಾ ತಾಲ್ಲೂಕಿನ ತಡಕಲೂರು ಗ್ರಾಮದ ಎಂ.ಅರುಣಾ ಅವರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ 308ನೇ ರ್‍ಯಾಂಕ್ ಪಡೆದಿರುವ ಸಾಧನೆಯನ್ನು ತಮ್ಮ ಐದನೇ ಪ್ರಯತ್ನದಲ್ಲಿ ಮಾಡಿದ್ದಾರೆ. ಕೊರೊನಾ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಂದಲೇ ಪರೀಕ್ಷಾ ಕೇಂದ್ರಕ್ಕೆ ಹೋಗಿದ್ದರು. ಕೋವಿಡ್ ಜತೆಗೆ ಪರೀಕ್ಷೆಯಲ್ಲೂ ಜಯಿಸಿದ್ದಾರೆ.

'ರೈತರು ಮಕ್ಕಳ ಮೇಲೆ ನಂಬಿಕೆ ಇಟ್ಟು ಓದಿಸಬೇಕು. ಒಮ್ಮೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಸಿಗಲಿಲ್ಲ ಎಂಬ ಕಾರಣಕ್ಕೆ ಪರೀಕ್ಷೆಯಿಂದ ಹಿಂದೆ ಸರಿಯಬಾರದು. ರೈತರು ತಮ್ಮ ಮಕ್ಕಳಿಗೆ ಬೆಂಬಲವಾಗಿ ನಿಲ್ಲಬೇಕು' ಎಂಬುದು ಅವರ ಕಿವಿಮಾತು.

ಉತ್ತರ ಪ್ರದೇಶದ ಶ್ರುತಿ ಶರ್ಮಾ ಪ್ರಥಮ

ಒಂದನೇ ಪುಟದಿಂದ


ಶ್ರುತಿ ಶರ್ಮಾ

ಐಶ್ವರ್ಯಾ ವರ್ಮಾ ಅವರು ನಾಲ್ಕನೇ ಮತ್ತು ಉತ್ಕರ್ಷ್ ದ್ವಿವೇದಿ ಅವರು ಐದನೇ ರ್‍ಯಾಂಕ್ ಪಡೆದಿದ್ದಾರೆ. ಮೊದಲ 25 ಸ್ಥಾನ ಗಳಿಸಿದವರಲ್ಲಿ 10 ಮಂದಿ ಮಹಿಳೆಯರು ಇದ್ದಾರೆ.

ಯಶಸ್ಸು ಸಾಧಿಸಿದ ಅಭ್ಯರ್ಥಿಗಳಲ್ಲಿ ಸಾಮಾನ್ಯ ವರ್ಗದ 244, ಆರ್ಥಿಕವಾಗಿ ಹಿಂದುಳಿದ ವರ್ಗದ 73, ಇತರೆ ಹಿಂದುಳಿದ ವರ್ಗದ 203, ಪರಿಶಿಷ್ಟ ಜಾತಿಯ 105, ಪರಿಶಿಷ್ಟ ಪಂಗಡದ 60 ಅಭ್ಯರ್ಥಿಗಳು ಸೇರಿದ್ದಾರೆ. ಮೊದಲ 25 ರ್‍ಯಾಂಕ್ ವಿಜೇತರು ಎಂಜಿನಿಯರಿಂಗ್, ಮಾನವೀಯ ಶಾಸ್ತ್ರ, ವಾಣಿಜ್ಯ, ವೈದ್ಯಕೀಯ ವಿಜ್ಞಾನ ಸೇರಿ ವಿವಿಧ ಪದವಿ ಹೊಂದಿದ್ದು, ಐಐಟಿ, ಏಮ್ಸ್, ವಿಐಟಿ, ಪಿಇಸಿ, ಮುಂಬೈ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ, ಜಿ.ಬಿ.ಪಂತ್ ವಿ.ವಿ.ಯಲ್ಲಿ ಕಲಿತವರು ಇದ್ದಾರೆ.

685 ಅಭ್ಯರ್ಥಿಗಳಲ್ಲಿ 25 ಮಂದಿ ಶೇ 40ರಷ್ಟು ಅಂಗವೈಕಲ್ಯ ಉಳ್ಳವರಾಗಿದ್ದು, ಏಳು ಮಂದಿ ಕಾಲು ಊನಗೊಂಡಿರುವವರು ಸೇರಿದ್ದಾರೆ. ಉಳಿದಂತೆ ಐದು ಮಂದಿ ಅಂಧತ್ವ, ಎಂಟು ಮಂದಿ ಶ್ರವಣದೋಷವುಳ್ಳವರು ಆಗಿದ್ದಾರೆ ಎಂದು ಯುಪಿಎಸ್‌ಸಿ ಮಾಹಿತಿ ನೀಡಿದೆ.2021ನೇ ಸಾಲಿನ ಪ್ರಿಲಿಮಿನರಿ ಪರೀಕ್ಷೆಗೆ 10,93,984 ಮಂದಿ ಅರ್ಜಿ ಸಲ್ಲಿಸಿದ್ದು, 5,08,609 ಮಂದಿ ಪರೀಕ್ಷೆ ಬರೆದಿದ್ದರು. ಮುಖ್ಯಪರೀಕ್ಷೆಗೆ 9,214 ಮಂದಿ ಅರ್ಹತೆ ಪಡೆದಿದ್ದರು. 1,824 ಜನರು ಸಂದರ್ಶನ ಎದುರಿಸಿದ್ದರು.

ಮೊದಲ ಯತ್ನದಲ್ಲೇ 31ನೇ ರ್‍ಯಾಂಕ್

ಒಂದನೇ ಪುಟದಿಂದ

ನಗರದ ಹೋಟೆಲ್ ಉದ್ಯಮಿ ವಿಠಲರಾವ್ ಅವರ ಮಗನಾಗಿರುವ ಅವಿನಾಶ್ ಅವರು ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಣ, ತೋಳಹುಣಸೆಯ ಪಿಎಸ್‌ಎಸ್‌ಇಎಂಆರ್ ಶಾಲೆಯಲ್ಲಿ ಪ್ರೌಢ ಶಿಕ್ಷಣ ಪೂರೈಸಿದ್ದರು. ಧವನ್ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಪಿಯು ಮುಗಿಸಿದ್ದರು. ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯಲ್ಲಿ 2020ರಲ್ಲಿ ಕಾನೂನು ಪದವಿಯನ್ನು ಪಡೆದಿದ್ದರು. 'ಕಾನೂನು ಪದವಿ ಪಡೆಯುತ್ತಿದ್ದಾಗ ವಿದೇಶಾಂಗ ಸಚಿವಾಲಯದಲ್ಲಿ ಇಂಟರ್ನಿಯಾಗಿ ಕೆಲಸ ಮಾಡಿದ್ದೆ. ಆಗ ಐಎಫ್‌ಎಸ್ ಮಾಡಬೇಕು ಎಂಬ ಕನಸು ಹುಟ್ಟಿತು. ಅದಕ್ಕಾಗಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದೇನೆ. 80ನೇ ರ್‍ಯಾಂಕ್ ಒಳಗೆ ಇದ್ದರೆ ಐಎಫ್‌ಎಸ್ ಆಯ್ಕೆ ಮಾಡಲು ಅವಕಾಶ ಇದೆ. ಹಾಗಾಗಿ ನನ್ನ ಕನಸು ನನಸಾಗುತ್ತಿದೆ' ಎಂದು ಅವಿನಾಶ್ 'ಪ್ರಜಾವಾಣಿ' ಜತೆ ಖುಷಿ ಹಂಚಿಕೊಂಡರು.

'ಯಾವ ರ್‍ಯಾಂಕ್ ಬರಬಹುದು ಎಂಬ ಅಂದಾಜು ಇರಲಿಲ್ಲ. ಮತ್ತೆ ಪರೀಕ್ಷೆ ಬರೆಯಲು ಸಿದ್ಧತೆ ಮಾಡಿದ್ದೆ. 'ಇನ್‌ಸೈಟ್ ಐಎಎಸ್' ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದಿದ್ದೆ. ಈಗ 31ನೇ ರ್‍ಯಾಂಕ್ ಬಂದಿದೆ. ಮತ್ತೆ ಪರೀಕ್ಷೆ ಬರೆಯುವ ಪ್ರಶ್ನೆ ಇಲ್ಲ' ಎಂದರು.

ಲೂಪಸ್ ಹಲವು ಅಂಗಗಳ ಕಾಯಿಲೆ

ಡಾ. ರಮೇಶ್ ಜೋಯಿಸ್

ಇದೇ ಮೇ 10ರಂದು ವಿಶ್ವ ಲೂಪಸ್ ದಿನಾಚರಣೆಯನ್ನು ಆಚರಿಸಲಾಯಿತು. ಲೂಪಸ್ ಕಾಯಿಲೆಯು ಹೆಚ್ಚಾಗಿ 20-50 ವಯಸ್ಸಿನ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಪುರುಷರು ಹಾಗೂ ಮಕ್ಕಳಲ್ಲಿ ಕೂಡ ಕಾಣಿಸಿಕೊಳ್ಳಬಹುದು. ವಿನಾ ಕಾರಣ ದೇಹದಲ್ಲಿ ಶುರುವಾಗುವ ಈ ಕಾಯಿಲೆಯನ್ನು 'ಆಟೋ-ಇಮ್ಯುನ್ ಕಾಯಿಲೆ' ಎಂದು ಕರೆಯುತ್ತೇವೆ. ನಮ್ಮ ದೇಹದ ವಿವಿಧ ಅಂಗಾಂಗಳನ್ನು 'ನಮ್ಮದಲ್ಲವೆಂದು' ಪರಿಗಣಿಸಿ ದೇಹದ ರೋಗನಿರೋಧಕ ವ್ಯವಸ್ಥೆಯು ಕಾಯಿಲೆಯನ್ನು ಉಂಟುಮಾಡುತ್ತದೆ. ನಮ್ಮ ದೇಹದ ಹಲವು ಅಂಗಗಳಲ್ಲಿ ಕಾಣಿಸಿಕೊಳ್ಳುವ 'ಲೂಪಸ್', ನಮ್ಮ ಜೀವನಪರ್ಯಂತವಿರುವ ಕಾಯಿಲೆ.

ನಿರಂತರ ಜ್ವರ, ಕೀಲುನೋವು, ಬಾಯಿಹುಣ್ಣು, ಸೂರ್ಯಸ್ಪರ್ಶವಾಗುವ ದೇಹದ ಭಾಗಗಳಲ್ಲಿ ಕೆಂಪು ದದ್ದುಗಳು, ಮುಖದ ಮೇಲೆ ಚಿಟ್ಟೆಯಾಕಾರದ ದದ್ದು, ಕೂದಲು ಉದುರುವುದು – ಇವು ಲೂಪಸ್‌ನ ಸಾಮಾನ್ಯ ಲಕ್ಷಣಗಳು. ಸಾವಿರದಲ್ಲಿ ಒಬ್ಬರಿಗಷ್ಟೆ ಬರುವ ಲೂಪಸ್, ಶೇ 60ರಷ್ಟು ಜನರಲ್ಲಿ ಮೂತ್ರಪಿಂಡಗಳಲ್ಲಿ ತೊಂದರೆಯನ್ನು ಉಂಟುಮಾಡುತ್ತದೆ. ಕೆಲವರಲ್ಲಿ ಹೃದಯ, ಶ್ವಾಸಕೋಶ, ಮಿದುಳು ಮತ್ತು ನರಗಳಲ್ಲಿ ಕೂಡ ಲೂಪಸ್ ಕಾಣಿಸಿಕೊಳ್ಳಬಹುದು. ಆರಂಭಿಕ ಹಂತದಲ್ಲಿ ಲೂಪಸ್ ಪತ್ತೆಯಾಗದಿದ್ದರೆ, ದೇಹದ ವಿವಧ ಅಂಗಗಳಲ್ಲಿ ಇದು ತೀವ್ರ ಸ್ವರೂಪವನ್ನು ತಾಳುತ್ತವೆ; ಆ ಅಂಗಗಳ ಕಾರ್ಯಾಚರಣೆಗೆ ಇದರಿಂದ ತೊಂದರೆಯಾಗುತ್ತದೆ. ಕೆಲವೊಮ್ಮೆ ರೋಗಿಯ ಪ್ರಾಣಕ್ಕೂ ತೊಂದರೆ ಎದುರಾಗಬಹುದು.

ಗರ್ಭಿಣಿಯರಲ್ಲಿ ಲೂಪಸ್ ಹೆಚ್ಚು ತೊಂದರೆಯನ್ನು ಉಂಟುಮಾಡಬಹುದು. ಈ ಕಾಯಿಲೆಯ ಲಕ್ಷಣಗಳು ಇವರಲ್ಲಿ ಹೆಚ್ಚು ಕಾಣಿಸಿಕೊಳ್ಳಬಹುದು; ಗರ್ಭಪಾತವಾಗುವ ಸಾಧ್ಯತೆಯೂ ಹೆಚ್ಚು. ಗರ್ಭಧಾರಣೆಗೆ ಮುನ್ನ ಕಾಯಿಲೆಯು ನಿಯಂತ್ರಣವಾದಲ್ಲಿ, ತಾಯಿ ಮತ್ತು ಮಗುವಿಗೆ ಹಾನಿಯಾಗುವ ಸಾಧ್ಯತೆ ಕಡಿಮೆಯಾಗುತ್ತದೆ. ರಕ್ತ ಮತ್ತು ಮೂತ್ರದ ಪರೀಕ್ಷೆಯಿಂದ ಲೂಪಸ್ ಕಾಯಿಲೆಯನ್ನು ಪತ್ತೆಹಚ್ಚಬಹುದು.

ಜನರಲ್ಲಿ ಲೂಪಸ್ ಕಾಯಿಲೆಯ ಬಗ್ಗೆ ಅರಿವನ್ನು ಮೂಡಿಸಲು ಪ್ರತಿ ವರ್ಷ ಮೇ ತಿಂಗಳನ್ನು 'ಲೂಪಸ್‌ಮಾಸ'ವನ್ನಾಗಿ ಆಚರಿಸುತ್ತೇವೆ. ಈ ಕಾಯಿಲೆಯ ಯಾವುದೇ ಲಕ್ಷಣಗಳು ಕಾಣಿಸಿಕೊಳ್ಳುತ್ತಿದ್ದಂತೆ ಹತ್ತಿರದ ಸಂಧಿವಾತತಜ್ಞರನ್ನು (ರೂಮಟಾಲಜಿಸ್ಟ್) ಸಾಧ್ಯವಾದಷ್ಟು ಶೀಘ್ರವಾಗಿ ಕಾಣಬೇಕು. ಈಗ ಈ ಕಾಯಿಲೆಗೆ ಬಹಳಷ್ಟು ಉತ್ಕೃಷ್ಟವಾದ ಔಷಧಗಳಿವೆ. ಕಾಯಿಲೆಯನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ, ಸರಿಯಾದ ಔಷಧಗಳನ್ನು ತೆಗೆದುಕೊಂಡರೆ, ರೋಗ ಉಲ್ಬಣವಾಗದಂತೆ ತಡೆಗಟ್ಟಬಹುದು. ಹೈಡ್ರಾಕ್ಸಿಕ್ಲೋರೋಕ್ವಿನ್, ಸ್ಟಿರಾಯ್ಡ್ ಹಾಗೂ ಇಮ್ಯುನೋಸಪ್ರೆಸಿವ್ ಔಷಧಗಳನ್ನು ಬಳಸಲಾಗುವುದು. ಸೂರ್ಯನ ಕಿರಣಗಳಿಂದ, ಲೂಪಸ್‌ನ ಚರ್ಮದ ದದ್ದುಗಳು ಹೆಚ್ಚಾಗುತ್ತವೆ. ರೋಗಿಗಳು ಸಾಧ್ಯವಾದಷ್ಟರ ಮಟ್ಟಿಗೆ ಬಿಸಿಲಿಗೆ ಹೋಗದಿರುವುದು ಒಳ್ಳೆಯದು. ಒಂದು ವೇಳೆ ಹೋಗಲೇಬೇಕಾದ ಸಂದರ್ಭಬಂದರೆ ಅಂಥವರು ಸನ್‌ಸ್ಕ್ರೀನ್ ಮುಲಾಮನ್ನು ಬಳಸಬೇಕು. ಬಿಸಿಲಿಗೆ ಮೈ ಒಡ್ಡುವುದನ್ನು ತಪ್ಪಿಸಿಕೊಳ್ಳಲು ಛತ್ರಿಯನ್ನು ಉಪಯೋಗಿಸಬೇಕು; ಸಾಧ್ಯವಾದಷ್ಟು ದೇಹವನ್ನು ಆವರಿಸುವಂಥ ಉಡುಗೆಗಳನ್ನು ತೊಡುವುದು ಕೂಡ ಪ್ರಯೋಜನಕಾರಿ.



ಲೂಪಸ್ ಬಗ್ಗೆ ಅರಿವಿರಲಿ; ಆದರೆ ಭಯ ಬೇಡ. ವಿಶ್ವದ ಹಲವರು ಪ್ರಸಿದ್ಧ ಕಲಾವಿದರು, ಕ್ರೀಡಾಪಟುಗಳು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಜನರಿಗೆ ಈ ಸಮಸ್ಯೆಯ ಬಗ್ಗೆ ಅರಿವನ್ನು ಮೂಡಿಸಲು ಅವರಲ್ಲಿ ಹಲವರು ತಮ್ಮ ಕಾಯಿಲೆಯ ಬಗ್ಗೆ ಬಹಿರಂಗವಾಗಿ ಸ್ವಪ್ರೇರಣೆಯಿಂದ ಘೋಷಿಸಿಕೊಂಡಿದ್ದಾರೆ. ಅಮೆರಿಕದ ಸುಪ್ರಸಿದ್ಧ ಗಾಯಕಿಯರಾದ ಸೆಲಿನಾ ಗೋಮೇಜ್, ಲೇಡಿ ಗಾಗಾ, ನಿಕ್ ಕಾನನ್, ಟೋನಿ ಬ್ರಾಕ್ಸ್‌ಟನ್; ಬ್ರಿಟನ್‌ನ ಗಾಯಕ ಸೀಲ್, ರಾಪರ್ ಟ್ರಿಕ್ ಡ್ಯಾಡಿ; ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಗಳಿಸಿದ ಕ್ರೀಡಾಪಟು ಶಾನನ್ ಬಾಕ್ಸ್; ನಟಿ ಮಾರಿಸ್ಸ ಟಾನ್‌ಚಿರಾನ್ ಹಾಗೂ ಕ್ರಿಸ್ಟೀನ್ ಜಾನ್‌ಸ್ಟನ್ – ಇವರು ತಮಗೆ ಲೂಪಸ್ ಕಾಯಿಲೆ ಇರುವ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಘೋಷಿಸಿಕೊಂಡಿದ್ದಾರೆ.

ಸಂಧಿವಾತತಜ್ಞರಿಂದ ಸರಿಯಾದ ಸಮಯಕ್ಕೆ ಚಿಕಿತ್ಸೆಯನ್ನು ಪಡೆದರೆ ಲೂಪಸ್‌ನಿಂದ ಮುಕ್ತರಾಗಬಹುದು.

❖

ಸಮಗ್ರ ಜೀವನಕ್ಕೆ ಎಲ್ಲವೂ ಬೇಕು



ಡಾ. ಪಲ್ಲವಿ ಹೆಗಡೆ

ಸೃಷ್ಟಿಯೊಂದಿಗೆ ಲಯವೂ ಖಚಿತ. ಕೊನೆಯಾಗದೇ ಮತ್ತೊಂದು ಶುರುವಾಗುವುದಾದರೂ ಹೇಗೆ? ಹೊಸ ನೀರು, ಹಳೆ ಬೇರು, ಇದ ಹೀರಿ ಬೆಳೆದ ಬದುಕು ನಮ್ಮದು. ಹುಟ್ಟು ಮತ್ತು ಸಾವು, ನಡುವೆ ಬದುಕು ಎಲ್ಲವನ್ನೂ ಅನುಭವಿಸಿ ವೃದ್ಧಿ, ಸ್ಥಿತಿ, ಹ್ರಾಸಗಳನ್ನು ಕಾಣುತ್ತದೆ. ಹಗಲಿನಲ್ಲಿ ರಾತ್ರಿಯನ್ನು ಧ್ಯಾನಿಸುವುದು, ರಾತ್ರಿಯಲ್ಲಿ ಬೆಳಕಿಗಾಗಿ ಕಾಯುವುದೂ ಜೀವಿಗಳ ಸಹಜತೆ. ಮಳೆಗಾಲದಲ್ಲಿ ಬಿಸಿಲನ್ನು ನೆನೆದರೆ, ಬೇಸಿಗೆಯಲ್ಲಿ ಚಳಿಯನ್ನು ಬಯಸುತ್ತೇವೆ.

ಸುಖವೊಂದನ್ನೇ ಬಹಳಕಾಲ ಅನುಭವಿಸುವುದಕ್ಕೂ ಮೈ ಮನ ದಣಿಯುತ್ತದೆ. ಕಷ್ಟವಿದ್ದಾಗ ಅದು ಕಳೆದರೆ ಸಾಕು, ಅದೇ ಸುಖ ಎಂದುಕೊಳ್ಳುತ್ತೇವೆ.

ಸಿಹಿಯನ್ನು ಇಷ್ಟಪಟ್ಟು ತಿಂದೂ ಹುಳಿಯನ್ನು ಕಂಡು ಬಾಯಿ ನೀರೂರಿಸುತ್ತದೆ. ಹುಳಿ ಜೊತೆಗೆ ಉಪ್ಪನ್ನು ಚಪ್ಪರಿಸುತ್ತೇವೆ. ಕಹಿ-ಒಗರು ರುಚಿಸದಿದ್ದರೂ ಔಷಧವೆಂದು ಭಕ್ತಿಯಿಂದ ಸೇವಿಸುತ್ತೇವೆ. ಖಾರವನ್ನು ತಿನ್ನಲು ನಾಲಿಗೆ ಚಾಚಿದರೂ ದೇಹಕ್ಕೆ ಬಾಧಿಸುತ್ತದೆ. ಯಾವುದೇ ಒಂದನ್ನು ಸತತವಾಗಿ ಅನುಭವಿಸಲು ನಮಗೆ ಸಾಧ್ಯವಾಗುವುದೇ ಇಲ್ಲ. ಎಲ್ಲದರಲ್ಲೂ ಅತಿಯೂ ಮಿತಿಯೂ ಇರುತ್ತದೆ. ಅತಿಯಾದರೆ ಅನಾರೋಗ್ಯ. ಮಿತಿಯಲ್ಲೇ ಇದ್ದರೆ ಸ್ವಾಸ್ಥ್ಯ.

ಅದೇ ಬೇಕು, ಇದು ಬೇಡ – ಎಂಬ ದೂರು ಅನಿವಾರ್ಯತೆಗೆ ತಳ್ಳುತ್ತದೆ. ಯಾವುದು ಅನಿವಾರ್ಯವಾಗುತ್ತದೋ ಅದಕ್ಕೆ ನಾವು ದಾಸರಾಗುತ್ತೇವೆ. ಒಂದು ವಸ್ತು ಅಥವಾ ವಿಷಯದ ಮೇಲಿನ ಅವಲಂಬನೆ, ನಮ್ಮ ಸ್ವಾತಂತ್ರ್ಯವನ್ನು ಕಸಿಯುತ್ತದೆ. ಯಾವುದಕ್ಕೋ ಬಂಧಿಯಾದರೆ ಚಡಪಡಿಕೆಯಿಂದ ಬಳಲುತ್ತೇವೆ. ಈ ರೀತಿಯಾಗಿ ಅಸ್ವಸ್ಥತೆ ಕಾಡುವಾಗ ಜೀವನ ಸುಗಮವಾಗಿ ಸಾಗುವುದಿಲ್ಲ. ಇದು ಅನಾರೋಗ್ಯದ ಮೂಲಸರಣಿ.

ಹಗಲು-ರಾತ್ರಿಗಳ ದೈನಂದಿನ ಚಕ್ರ, ಬಿಸಿಲು-ಮಳೆ-ಚಳಿ-ಗಾಳಿಗಳ ಋತುಚಕ್ರ, ಸಿಹಿ-ಹುಳಿ-ಉಪ್ಪು-ಕಹಿ-ಖಾರ-ಒಗರು ಆರು ರುಚಿಗಳ ಷಡ್ರಸಭೋಜನ, ಸುಖ-ದುಃಖಗಳ ಸಮತೋಲನ – ಹೀಗೆ ವೈವಿಧ್ಯಮಯ ಎಲ್ಲವನ್ನೂ ಮೊದಲು ಸ್ವೀಕರಿಸುವ, ಒಪ್ಪಿಕೊಳ್ಳುವ ಮನೋಭಾವ ಬೇಕು. ಎಲ್ಲವನ್ನೂ ಒಂದು ಮಿತಿಯಲ್ಲೇ ಸರಿದೂಗಿಸಿಕೊಳ್ಳುವ ಅರಿವು, ವಿವೇಚನೆಯೂ ಇರಬೇಕು. ಪ್ರತಿಯೊಂದೂ ನಮ್ಮ ಬದುಕಿನ ಮೇಲೆ ಒಂದಿಲ್ಲೊಂದು ಪರಿಣಾಮ ಬೀರುತ್ತದೆ. ಒಟ್ಟಿನಲ್ಲಿ ಎಲ್ಲವೂ ಇದ್ದಾಗ ಜೀವನ ಸುಗಮಗೊಳ್ಳುತ್ತದೆ.

ದಿನರಾತ್ರಿಯ ಜೈವಿಕ ಗಡಿಯಾರವನ್ನು ಮೀರಿ ಬದುಕುವುದು ದುಸ್ತರ. ಮನುಷ್ಯ ಮೂಲತಃ ದಿನಚರಿಜೀವಿ. ಹಗಲು ಆಹಾರ, ದುಡಿಮೆ. ರಾತ್ರಿ ಸಹಜವಾಗಿ ನಿದ್ರಿಸುವುದು ಆರೋಗ್ಯಕರ. ಈ ಗಡಿಯಾರ ಅಸ್ತವ್ಯಸ್ತವಾದರೆ ಕಾಯಿಲೆ ಉಚಿತವಾಗುತ್ತದೆ. ಸೂರ್ಯೋದಯಕ್ಕೂ ಮುನ್ನ ಎಚ್ಚರವಾಗಿ, ಶೌಚ ಮುಗಿಸಿ, ದಿನದ ಚಟುವಟಿಕೆಗಳನ್ನು ಆರಂಭಿಸುವುದು ಉತ್ತಮ ಅಭ್ಯಾಸ. ದೀರ್ಘಕಾಲದ ಆರೋಗ್ಯಪೂರ್ಣ ಬದುಕಿಗೆ ಇದೇ ಮಂತ್ರ. ಬೆಳಿಗ್ಗೆ ಬೆಳಕು ಹರಿದ ಮೇಲೂ ಮುಸುಕು ಹಾಕಿಕೊಂಡು ಮಲಗುವುದು ಸೂರ್ಯನ ಎಳೆಯ ಕಿರಣಗಳ ಚೈತನ್ಯವನ್ನು ತಿರಸ್ಕರಿಸಿದಂತೆಯೇ. 'ಆರೋಗ್ಯಂ ಭಾಸ್ಕರಾತ್ ಇಚ್ಛೇತ್' – ಎನ್ನುತ್ತದೆ, ಉಪನಿಷತ್ತು. ಆರೋಗ್ಯಕ್ಕಾಗಿ ಸೂರ್ಯಾರಾಧನೆ ಮಾಡುವ ಹಿನ್ನೆಲೆ ಏನೆಂದರೆ ಸೂರ್ಯನಮಸ್ಕಾರದೊಂದಿಗೆ ದಿನಚರಿ ಆರಂಭಗೊಂಡು, ಉದಯರವಿಕಿರಣಗಳ ಬೆಳಕಿಗೆ ಮೈಮನ ತೆರೆದುಕೊಳ್ಳಲಿ ಎಂದು. ತೇಜಸ್ಸು ಶಾಖ ನೀಡಿ ನಮ್ಮೊಳಗಿನ ಜಡತೆಯನ್ನು ಕೊನೆಗೊಳಿಸುತ್ತದೆ. ಲವಲವಿಕೆ ಚಿಮ್ಮುತ್ತದೆ. ರಕ್ತಸಂಚಾರ ಚುರುಕಾಗುತ್ತದೆ. ಮನಸ್ಸು ಹಗುರಗೊಂಡು ದಿನವಿಡೀ ಕಾರ್ಯೋತ್ಸಾಹವಿರುತ್ತದೆ. ಮಲವಿಸರ್ಜನೆ ಸಹಜವಾಗಿಯೇ ಆಗಿ ಹಸಿವು ಸಮಯಕ್ಕೆ ಕಾಣಿಸುತ್ತದೆ. ರೋಗದಿಂದ ದೂರವಿರಲು ಇವೆಲ್ಲವೂ ಬೇಕೇ ಬೇಕು. ಹೀಗೆ ಆರಂಭಗೊಂಡು ದಿನವೊಂದು ಸಕಾಲದಲ್ಲಿ ರಾತ್ರಿ ಸೂರ್ಯಾಸ್ತದೊಂದಿಗೆ ಮುಗಿಯುವುದು. ಚಂದ್ರನ ಶೀತಲಸ್ಪರ್ಶ ದೇಹಾಯಾಸವನ್ನು ಶಮನಗೊಳಿಸಿದರೆ ಮನಸ್ಸನ್ನು ಶಾಂತವಾಗಿಸುತ್ತದೆ. ಹಗಲು ಸೇವಿಸಿದ ಆಹಾರದ ಸಾರ ರಾತ್ರಿಯ ನಿದ್ರೆಯಿಂದ ಸರ್ವ ಬೆಳವಣಿಗೆಗೆ ಪೂರಕ. ಇದೊಂದು ವ್ಯವಸ್ಥಿತ ಬದುಕು. ಹೀಗೆ ಮಾಡದೆ ಹಗಲು ನಿದ್ರಿಸುವುದು, ರಾತ್ರಿ ಜಾಗರಣೆ ಮಾಡುವುದು ಹೃದಯದೊತ್ತಡ, ರಕ್ತವಿಕಾರ, ಅಜೀರ್ಣ, ತಲೆನೋವು, ಮೈ ನೋವು, ಖಿನ್ನತೆ, ಒತ್ತಡ, ಬೊಜ್ಜು, ಕ್ಷಯರೋಗಗಳಿಗೆ ಮೂಲ. ರಾತ್ರಿ ನಿದ್ರಿಸದಿದ್ದರೆ ರೋಗನಿರೋಧಕ ಶಕ್ತಿ ಹಾಳಾಗುತ್ತದೆ. ಆರೋಗ್ಯಕ್ಕಾಗಿ ಬೆಳಕನ್ನೂ ಕತ್ತಲನ್ನೂ ಹಗಲು-ರಾತ್ರಿ ಸಮವಾಗಿ ಅನುಭವಿಸುವುದು ಮುಖ್ಯ.

> ಹಗಲು-ರಾತ್ರಿಗಳ ದೈನಂದಿನ ಚಕ್ರ, ಬಿಸಿಲು-ಮಳೆ-ಚಳಿ-ಗಾಳಿಗಳ ಋತುಚಕ್ರ, ಸಿಹಿ-ಹುಳಿ-ಉಪ್ಪು-ಕಹಿ-ಖಾರ-ಒಗರು ಆರು ರುಚಿಗಳ ಷಡ್ರಸಭೋಜನ, ಸುಖ-ದುಃಖಗಳ ಸಮತೋಲನ – ಹೀಗೆ ವೈವಿಧ್ಯಮಯ ಎಲ್ಲವನ್ನೂ ಮೊದಲು ಸ್ವೀಕರಿಸುವ, ಒಪ್ಪಿಕೊಳ್ಳುವ ಮನೋಭಾವ ಬೇಕು.



ಬೇಸಿಗೆಯಲ್ಲಿ ಸೂರ್ಯನ ಕಿರಣಗಳು ತೀಕ್ಷ್ಣ. ಮಳೆ-ಚಳಿಗಾಲದಲ್ಲಿ ಮೃದು. ಇದು ಋತುಚಕ್ರ. ಇವೂ ಆರೋಗ್ಯಕ್ಕೆ ಅಗತ್ಯ. ಯಾವುದೇ ಒಂದು ಋತುವನ್ನು ಮಾತ್ರ ಅನುಭವಿಸುವುದೂ ಅನಾರೋಗ್ಯಕರ. ಋತುಗಳಿಗೆ ತಕ್ಕ ಪರಿಹಾರವನ್ನು ಮಾಡಿಕೊಳ್ಳಬೇಕಾಗುತ್ತದೆ. ಚಳಿಗಾಲದಲ್ಲಿ ದೈಹಿಕ ವೃದ್ಧಿ ವೇಗವನ್ನು ಪಡೆಯುತ್ತದೆ. ಹಸಿವು ಜಾಸ್ತಿ. ಪೋಷಕಾಂಶಯುಕ್ತ ಬಿಸಿಯಾದ ಸಿಹಿ, ಜಿಡ್ಡುಳ್ಳ ಘನಾಹಾರಗಳು ಬೇಕು. ಚಳಿಕಳೆದು ಬಿಸಿಲು ತೀವ್ರತೆ ಪಡೆಯುವಾಗ ದೇಹದೊಳಗೆ ಶೀತದಿಂದ ಗಟ್ಟಿಯಾಗಿದ್ದ ಸ್ರಾವಗಳು ಕರಗಿ ಸಂಚಾರವು ಹೆಚ್ಚುತ್ತದೆ. ಆದ್ದರಿಂದ ವಸಂತಗಾಲದಲ್ಲೆ ಕಫದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಕಫವನ್ನು ಹದಗೊಳಿಸುವ ಕಹಿ, ಖಾರ, ಒಗರಿನ ಆಹಾರ ಈ ಕಾಲದಲ್ಲಿ ಅಗತ್ಯ. ಬೇಸಿಗೆಯು ಇನ್ನೂ ತೀವ್ರ ಸ್ವರೂಪ ಪಡೆದುಕೊಂಡಿದೆ ಅನ್ನುವಾಗ ಸಿಹಿಮಿಶ್ರಿತ ಹುಳಿಯುಳ್ಳ ಹಣ್ಣು ಮುಂತಾದ ತಂಪು ದ್ರವಾಹಾರಗಳೇ ನಮ್ಮ ಬಾಯಾರಿಕೆ ತಣಿಸಿ ಬಿಸಿಲಿನಿಂದ ಬಳಲದಂತೆ ಕಾಪಾಡುತ್ತವೆ. ವಾತಾವರಣದಲ್ಲಿ ಬಿಸಿಗೆ ಆವಿಗೊಂಡ ತೇವಾಂಶ ಮೋಡ ಕಟ್ಟಿ ಮಳೆ ಹನಿಸುವಾಗ ಮತ್ತೆ ನಮ್ಮೊಳಗೆ ಉಷ್ಣತೆ ಏರುಪೇರಾಗುತ್ತದೆ. ಬಿಸಿಬಿಸಿಯಾದ ಉಪ್ಪು ಹುಳಿ ಖಾರವುಳ್ಳ ಎಲ್ಲಾ ರುಚಿಯ ಆಹಾರ ನಾಲಿಗೆಗೆ ಹಿತವೆನಿಸುತ್ತದೆ. ಮಳೆಯನ್ನು ಆನಂದಿಸುತ್ತಾ ಕೆಲಸಕ್ಕೂ ಬಿಡುವು ಕೊಡುತ್ತಾ ಬಾಯಾಡುತ್ತಾ ಈ ಕಾಲವೂ ಕಳೆಯುತ್ತದೆ. ಸಿಹಿಯನ್ನೇ ತಿಂದರೆ ದೇಹದಲ್ಲಿ ಅತಿಪೂರಣೆಯಿಂದ ಸ್ಥೌಲ್ಯ, ಪ್ರಮೇಹ, ಹೃದಯ-ನಾಳಗಳಲ್ಲಿ ಅವರೋಧ ಮುಂತಾದ ಸಂತರ್ಪಣದಿಂದ ಕಾಯಿಲೆಗಳು. ಹುಳಿ ಅತಿಯಾದರೆ ರಕ್ತ-ಪಿತ್ತದ ತೊಂದರೆಗಳು. ಉಪ್ಪು ಅತಿಯಾದರೆ ಬಲುಬೇಗ ಮುಪ್ಪು. ಕಹಿ-ಖಾರ-ಒಗರಿನಿಂದ ವಾತರೋಗ, ನೋವು. ರುಚಿಗಳೆಲ್ಲಾ ಇರುವ ತಾಜಾ ಆಹಾರದ ಅಭ್ಯಾಸ ಕಾಯಿಲೆಗಳಿಂದ ದೂರವಿರಲು ಸಹಾಯಕ.

ಮಳೆಯ ನಂತರ ಮತ್ತೆ ಬಿಸಿಲು ಮೂಡುವುದು. ಭೂಮಿಯ ಹಸಿರು ಕಣ್ಣುಗಳಿಗೆ ಸುಖ ತೋರುತ್ತದೆ. ಹೀಗೆ ಇರದೆ ಬರೀ ಚಳಿಗಾಲವೋ ಸತತ ಮಳೆಯೋ ಬರೀಬೇಸಿಗೆಯೋ ಇರುವ ಪ್ರದೇಶವನ್ನು ಗಮನಿಸಿ. ಅಲ್ಲಿ ಆರೋಗ್ಯಮಯಜೀವನ ನಡೆಸುವುದು ಸಾಕಷ್ಟು ಕಷ್ಟ. ಆದ್ದರಿಂದ ಎಲ್ಲಾ ಕಾಲಗಳೂ ಸರಿಯಾಗಿ ಬೇಕು. ಆಗಲೇ ಹದದ ಬದುಕು. ಏಕೆಂದರೆ ಪ್ರತಿ ಋತುವೂ ನಮ್ಮ ಮನಸ್ಸು ಮತ್ತು ದೇಹಗಳ ಸಮತೋಲನವನ್ನು ಕಾಯುತ್ತದೆ.

ಸುಖವೆಂದರೆ ಕೆಲಸವೇ ಇರದ ರಜಾದಿನಗಳು ಎಂದು ಹಲವರಿಗೆ ಅನಿಸುತ್ತದೆ. ದುಡ್ಡಿದ್ದರೆ ಸುಖ ಎಂದು ಮತ್ತೂ ಕೆಲವರಿಗೆ. ಆದರೆ ದೈಹಿಕ ಕೆಲಸವಿರದೆ ಬೊಜ್ಜು, ಮೇಹ ಮೊದಲಾದ ರೋಗಗಳು ಕಾಲಿಡುವಾಗ ಶಾರೀರಿಕ ಶ್ರಮಗಳೇ ಚಿಕಿತ್ಸೆ. ಗಳಿಕೆ ಅತಿಯಾದರೆ ದುಡಿಮೆ ಸಾಕು, ಕೂತು ತಿಂದುಂಡು ಹಾಯಾಗಿರುವ ಆಲಸ್ಯ ಮೈಗೂಡುತ್ತದೆ. ರೋಗದ ಮೂಲ ಇದೇ. ಆಯಾಸ, ಶ್ರಮದಾಯಕ ಕೆಲಸ ಸುಖಕರ. ಅತಿಯಾಗಿ ಶ್ರಮಪಟ್ಟು ದೇಹದಂಡನೆಯಾದರೆ ವಿರಾಮವೇ ಸುಖ. ಹೀಗೆ ಬದುಕಿಗೆ ಕಷ್ಟವೂ, ಮಾನಸಿಕ ಕ್ಲೇಶವೂ ಬೇಕು. ಸರಿದೂಗಿಸಲು ಸುಖವೂ ನಿರಾಳತೆಯೂ ಬೇಕು.

ಸಂತುಲಿತ ಸಮಗ್ರ ಜೀವನವೆಂದರೆ ಎಲ್ಲವನ್ನೂ ಕಾಲಕ್ಕೆ ಅನುಗುಣವಾಗಿ ಮಿತಿಯಲ್ಲೇ ಅನುಭವಿಸುವುದೇ ಅಲ್ಲವೇ?

❖

ಉಪವಾಸಕ್ಕೂ ಬೇಕು ಆಚಾರ ವಿಚಾರ

ಡಾ. ವಿಜಯಲಕ್ಷ್ಮಿ ಪಿ.

ನಮ್ಮ ಹೆಮ್ಮೆಯ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರೀಜಿಯವರು ವಿಪತ್ತಿನ ಸಮಯದಲ್ಲಿ ವಾರಕ್ಕೊಂದು ದಿನ ಇಡೀ ದೇಶದ ಜನತೆ ಉಪವಾಸ ಮಾಡುವಂತೆ ಕರೆ ಕೊಟ್ಟಿದ್ದರು. ವಿಪತ್ತು ಕಳೆದ ನಂತರ ಅದು ಧಾರ್ಮಿಕ ಆಚರಣೆಯಾಗಿ ಪರಿವರ್ತನೆಯಾಯಿತು. ನಿರ್ಜಲ, ಸಜಲ, ಫಲಹಾರ ಸೇವಿಸಿ, ಪಾನಕ ಸೇವಿಸಿ, ದಿನಕ್ಕೆ ಒಂದು ಕಾಲದಲ್ಲಿ ಮಾತ್ರ ಆಹಾರವನ್ನು ಸೇವಿಸಿ, ದಿನದಲ್ಲಿ ಒಂದು ಕಾಲದಲ್ಲಿ ಮಾತ್ರ ಆಹಾರವನ್ನು ಸೇವಿಸದೆ – ಹೀಗೆ ಅನೇಕ ರೀತಿಯಲ್ಲಿ ಉಪವಾಸದ ವ್ಯಾಪ್ತಿಯನ್ನು ಕಾಣುತ್ತೇವೆ. ವ್ರತನಿಯಮವಾಗಿ, ಯಾವುದೋ ಹರಕೆಗಾಗಿ, ಹಟ ಅಥವಾ ಸಿಟ್ಟಿನಿಂದ, ಸಾಮಾಜಿಕ ಹೋರಾಟಕ್ಕಾಗಿ, ಆರೋಗ್ಯ ಪ್ರಾಪ್ತಿಗಾಗಿ, ಅನಾರೋಗ್ಯ ನಿವಾರಣೆಗಾಗಿ – ಹೀಗೆ ಅನೇಕ ಕಾರಣಗಳಿಗೆ ಉಪವಾಸ ಕೈಗೊಳ್ಳುತ್ತೇವೆ. ಇವೆಲ್ಲವುಗಳ ಪರಿಣಾಮ ಒಂದೇ ಆಗಿರುತ್ತದೆಯೇ, ಎಂದರೆ 'ಇಲ್ಲಾ' ಎಂದೇ ಹೇಳಬೇಕು.

ವ್ರತನಿಯಮವಾಗಿ ಅಥವಾ ಯಾವುದೋ ಹರಕೆಗಾಗಿ ಉಪವಾಸ ಮಾಡುವವರು ಉಪವಾಸದ ಪದದ ಅರ್ಥವನ್ನು ಅನುಸರಿಸಬೇಕು. ಎಂದರೆ (ಭಗವಂತಸ್ಯ) 'ಉಪ ಸಮೀಪೇ ವಸತಿ ಇತಿ ಉಪವಾಸಃ' ಎನ್ನುವಂತೆ ಭಗವಂತನ ಸಮೀಪದಲ್ಲಿ ವಾಸ ಮಾಡುವುದು. ಎಂದರೆ ಐಹಿಕ, ಲೌಕಿಕ ಕೆಲಸಗಳನ್ನೆಲ್ಲಾ ತ್ಯಜಿಸಿ ಕೇವಲ ಭಗವಂತನ ಧ್ಯಾನದಲ್ಲಿ ನೆಲಸಿದರೆ ಉಪವಾಸಕ್ಕೊಂದು ಅರ್ಥ ಬಂದೀತು. ಇದಲ್ಲದೆ ಕೇವಲ ಆಹಾರವನ್ನು ತ್ಯಜಿಸಿ, ನಾಲಿಗೆಯಿಂದ ಹಿಡಿದು ಎಲ್ಲಾ ಇಂದ್ರಿಯಗಳಗೆ ಲಗಾಮು ಹಾಕದೆ ಬಿಟ್ಟರೆ ಇದರಿಂದ ಅನರ್ಥವೇ ಆದೀತು. 15 ದಿನಕ್ಕೊಮ್ಮೆ ಬರುವ ಏಕಾದಶಿ ತಿಥಿಯಂದು ಉಪವಾಸ ಮಾಡುವುದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿದೆ. 'ಏಕಾದಶಿ' ಹೆಸರೇ ಸೂಚಿಸುವಂತೆ ಹನ್ನೊಂದೂ ಇಂದ್ರಿಯಗಳ ಮೂಲಕ ಯಾವ ರೀತಿಯ ಆಹಾರವನ್ನೂ ಸೇವಿಸಬಾರದು ಎಂದು. ಕೇವಲ ಮುಖದಿಂದ ಆಹಾರ ಸೇವಿಸಬಾರದೆಂಬುದು ಸಾಂಕೇತಿಕವಷ್ಟೆ. ಎಲ್ಲಾ ರೀತಿಯ ಶಾರೀರಿಕ ಶ್ರಮ, (ಸತ್/ದುರ್) ವಾಚಿಕ ವ್ಯಾಪಾರಗಳು, ಕೆಟ್ಟ ಚಿಂತನೆಗಳು, ಅತಿಯಾಗಿ ಸಾಮಾಜಿಕ ಮಾಧ್ಯಮಗಳ ಬಳಕೆ – ಹೀಗೆ ಇಂದ್ರಿಯಗಳನ್ನು ಮನಸೋ ಇಚ್ಛೆ ಪವೃತ್ತವಾಗಲು ಬಿಟ್ಟು, ಕೇವಲ ಆಹಾರ ಸೇವಿಸದಿದ್ದರೆ ಅಮ್ಲಪಿತ್ತ, ಚರ್ಮವ್ಯಾಧಿ, ತಲೆನೋವು, ತಲೆಸುತ್ತು, ಜ್ವರ, ಬೆನ್ನುನೋವು, ಮಾನಸಿಕ ಖಿನ್ನತೆ – ಹೀಗೆ ಅನೇಕ ರೋಗಗಳಿಂದ ಬಳಲಬೇಕಾಗುತ್ತದೆ. ಇನ್ನು ಕೆಲವು ವ್ರತಗಳಲ್ಲಿ 15 ದಿನಗಳ ಉಪವಾಸ, ವಾರಕ್ಕೆರಡು ದಿನ ಉಪವಾಸ, ಕೆಲವು ಧರ್ಮಗಳಲ್ಲಿ 49 ದಿನಗಳ ವ್ರತ ಮಾಡುವವರೂ ಇದ್ದಾರೆ. ಯಾವುದೇ ಆದರೂ ಮೌನ, ಧ್ಯಾನಗಳೊಡನೆ ಆಚರಿಸಿದರೆ ಯಾವುದೇ ತೊಂದರೆ ಇರುವುದಿಲ್ಲ, ಇಷ್ಟೆಲ್ಲಾ ಉಪವಾಸ ಮಾಡಿದರೂ ತೊಂದರೆ ತಪ್ಪಲಿಲ್ಲ, ಭಗವಂತ ಒಲಿಯಲಿಲ್ಲ ಎನ್ನುವ ಕೊರಗೂ ಹೋಗುವುದಿಲ್ಲ. ಯಾವುದೇ ಕಾರಣಕ್ಕೂ ಹಟ, ಸಿಟ್ಟು, ದ್ವೇಷ ಭಾವನೆಗಳನ್ನು ಹೊಂದಿ ಆಹಾರ ಸೇವಿಸದಿರುವುದು ತರವಲ್ಲ. ಇದು ಉಪವಾಸದ ಗುಂಪಿಗೆ ಬರುವುದೇ ಇಲ್ಲ. ಇದು ಮನೋರೋಗಕ್ಕೆ ಕಾರಣವಾಗುವುದರ ಜೊತೆಗೆ ಯಕೃತ್ ವಿಕಾರ, ಹೃದಯಸಂಬಂಧಿ ರೋಗಗಳಿಗೆ ಕಾರಣವಾಗುತ್ತದೆ.

> ದೇಹಪ್ರಕೃತಿ, ದೇಶ-ಕಾಲ, ವಯಸ್ಸುಗಳನ್ನು ಅನುಸರಿಸಿ ಮಾಡುವ ಉಪವಾಸ ಆರೋಗ್ಯವರ್ಧಕ; ವಿವೇಚನೆ ಇಲ್ಲದೆ ಮಾಡುವ ಉಪವಾಸ ಅನರ್ಥಕ್ಕೆ ನಾಂದಿ...

ಇನ್ನು ಕೆಲವು ವ್ಯಾಧಿಗಳ ನಿವೃತ್ತಿಗಾಗಿ ಆಹಾರಸೇವನೆಯನ್ನು ಕಡಿಮೆ ಮಾಡಬೇಕಾಗುತ್ತದೆ. ವಿಪರೀತ ಅಜೀರ್ಣವಾದಾಗ ಆಹಾರ ಸೇವಿಸದಿರುವುದು ಚಿಕಿತ್ಸೆಯೇ ಆಗುತ್ತದೆ. ತಿಂದ ಆಹಾರ ಜೀರ್ಣವಾಗಿ ಹಸಿವೆ ಉತ್ಪತ್ತಿಯಾದ ಬಳಿಕ ಮೊದಲು ದ್ರವಾಹಾರ, ನಂತರ ಘನಾಹಾರ ಸೇವಿಸೇಕು. ತೂಕ ಕಡಿಮೆ ಮಾಡಬೇಕು ಆದಕ್ಕಾಗಿ ಆಹಾರ ಸೇವಿಸದಿರುವುದು ಅಥವಾ ಅತಿ ಕಡಿಮೆ ಆಹಾರ ಸೇವಿಸುವುದು, ದ್ರವಾಹಾರವನ್ನು ಮಾತ್ರ ಸೇವಿಸುವುದು – ಹೀಗೆ ಅನೇಕ ವಿಧಾನಗಳನ್ನು ಅನುಸರಿಸುತ್ತಾರೆ. ಆಯಾ ವ್ಯಕ್ತಿಯ ಆರೋಗ್ಯಕ್ಕೆ ಅನುಗುಣವಾಗಿ ಆಹಾರಸೇವನೆಯಲ್ಲಿ ವೈದ್ಯರ ಸಲಹೆಯ ಮೇರೆಗೆ ಬದಲಾವಣೆ ಮಾಡಿಕೊಳ್ಳಬೇಕು.

ನಿಸರ್ಗ ಚಿಕಿತ್ಸೆಯಲ್ಲಿ ಕೆಲವು ರೋಗಗಳಿಗೆ ಕೇವಲ ಕಲ್ಲಂಗಡಿ ಹಣ್ಣು ಅಥವಾ ಇತರೆ ಕೆಲವು ಹಣ್ಣುಗಳನ್ನು, ತರಕಾರಿಗಳನ್ನು ಮಾತ್ರ ಸೇವಿಸುವುದೇ ಚಿಕಿತ್ಸೆಯಾಗಿರುತ್ತದೆ. ಆಯಾಯ ಹಣ್ಣು-ತರಕಾರಿಗಳನ್ನು ಸೇವಿಸಲು ವಿಶೇಷವಾದ ಕ್ರಮಗಳಿರುತ್ತವೆ. ಆ ಕ್ರಮವನ್ನು ಅನುಸರಿಸಿ ಸೇವಿಸಿದರೆ ಆ ವ್ಯಾಧಿ ಗುಣವಾಗುತ್ತದೆ. ಕ್ರಮವರಿಯದೇ ಸೇವಿಸಿದ ಹಣ್ಣು, ಹಸಿ ತರಕಾರಿಗಳ ಚಿಕಿತ್ಸೆ ಅನರ್ಥವನ್ನೇ ಉಂಟು ಮಾಡಬಹುದು. ಯಾವುದೋ ಮಾಧ್ಯಮದಲ್ಲಿ ತಿಳಿಸಿದರೆಂದು ದೇಶ, ಕಾಲ, ವ್ಯಕ್ತಿಗಳ ಪ್ರಕೃತಿಯನ್ನು ಗಮನಿಸದೆ ವಿವೇಚಿಸದೆ ಹಣ್ಣು ಅಥವಾ ತರಕಾರಿಗಳನ್ನು ಸೇವಿಸಿ ರೋಗವನ್ನು ಗುಣ ಮಾಡಿಕೊಳ್ಳಲು ಹೋದರೆ ಅನರ್ಥಗಳ ಪರಂಪರೆಯನ್ನೇ ಎದುರಿಸಬೇಕಾಗುತ್ತದೆ. ಉದಾಹರಣೆಗೆ, ಕಲ್ಲಂಗಡಿ ಚಿಕಿತ್ಸೆಯಲ್ಲಿ ಹಣ್ಣನ್ನು ಸೇವಿಸಿ ನಂತರ ಬೆನ್ನಾಗಿ ನೀರು ಕುಡಿಯಬೇಕು ಎನ್ನುವ ನಿಯಮವಿದೆ. ಈ ನಿಯಮವನ್ನು ಗಾಳಿಗೆ ತೂರಿದರೆ ಚರ್ಮವ್ಯಾಧಿಯು ಹೆಚ್ಚಾಗುತ್ತದೆ; ಮೂತ್ರ ಸಂಬಂಧಿ, ಮೂತ್ರಕೋಶ ಸಂಬಂಧಿ ರೋಗಗಳಿಗೆ ನಾಂದಿ ಹಾಡುತ್ತದೆ ಕೂಡ.

ಆರೋಗ್ಯರಕ್ಷಣೆಗಾಗಿ ವಾರಕ್ಕೆ ಒಂದು ದಿನ ಅಥವಾ ಹದಿನೈದು ದಿನಕ್ಕೆ ಒಮ್ಮೆ ಉಪವಾಸ ಮಾಡುವುದು ಹಿತಕರವೇ. ಆದರೆ ಅವರವರ ಪ್ರಕೃತಿಗೆ ಅನುಗುಣವಾಗಿ, ದೇಹದಲ್ಲಿ ನೀರಿನಂಶ ಕಡಿಮೆ ಆಗದಂತೆ, ನೋಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಉಪವಾಸ ಮಾಡಿದರೆ ಮೈಕೈ ನೋವು ಬರುತ್ತದೆ ಎನ್ನುವವರು ಹಲವರು, ಇಂತಹವರು ಉಪವಾಸದ ದಿನ ಎ.ಸಿ., ಫ್ಯಾನ್‌ಗಳನ್ನು ಉಪಯೋಗಿಸದಿರುವುದು ಒಳಿತು. ತಂಪಾದ ವಾತಾವರಣ, ಮೈಗೆ ನಿರಂತರವಾಗಿ ಬಿಸುವ ಗಾಳಿ ಚರ್ಮವನ್ನು ಒಣಗಿಸಿ ಮೈನವೆ, ಮೈಕೈ ನೋವುಗಳನ್ನು ಉತ್ಪತ್ತಿ ಮಾಡುತ್ತದೆ. ಅಲರ್ಜಿ, ಚರ್ಮವ್ಯಾಧಿ, ಗಂಟು ನೋವುಗಳಿದ್ದರೆ ಅದು ಹೆಚ್ಚಾಗಲೂಬಹುದು. ಉಪವಾಸ ಮಾಡಿದಾಗ ಬೆನ್ನುನೋವು, ಹೊಟ್ಟೆಯುರಿ, ಹೊಟ್ಟೆನೋವು, ತಲೆನೋವು ಬರುತ್ತದೆ ಎಂದಾದರೆ ಅವರು ಯಾವ ಕಾರಣಕ್ಕೂ ನಿರ್ಜಲ ಉಪವಾಸ ಮಾಡಬಾರದು. ಹಸಿವೆಯಾದಾಗ, ಹಾಲನ್ನೋ ಪಾನಕವನ್ನೋ ಅಥವಾ ಹಣ್ಣಿನ ರಸವನ್ನೋ, ಇತರೆ ದ್ರವಾಹಾರಗಳನ್ನೋ ಆಹಾರಕಾಲದಲ್ಲಿ ಸೇವಿಸಲೇಬೇಕು. ಇಲ್ಲದಿದ್ದರೆ, ರಕ್ತಪಿತ್ತ, ಅತಿಸಾರ, ವಾಂತಿ ಮುಂತಾದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಕೆಲವರಿಗೆ ಉಪವಾಸ ಮಾಡಬೇಕೆಂಬ ಅಪೇಕ್ಷೆ ಇರುತ್ತದೆ, ಆದರೆ ಅವರ ನಿತ್ಯದ ಆಹಾರ ಸಮಯವನ್ನು ಮೀರಿದರೂ ಅಮ್ಲಪಿತ್ತ, ಬೆನ್ನುನೋವು ಪ್ರಾರಂಭವಾಗುತ್ತದೆ. ಅಂತಹವರು ಆಹಾರಕಾಲದಲ್ಲಿ ಸುಲಭದಲ್ಲಿ ಜೀರ್ಣವಾಗುವ ಆಹಾರಗಳನ್ನು ಸೇವಿಸುವುದು ಉಪವಾಸದ ಪರಿಣಾಮವನ್ನೇ ನೀಡುತ್ತದೆ.

ಮಿತವಾದ ಆಹಾರಸೇವನೆಯ ಕಾಲದಲ್ಲಿ, ಅತಿಯಾದ ಶಾರೀರಿಕ ಶ್ರಮ ಒಳ್ಳೆಯದಲ್ಲ. ಬೇಸಗೆಯಲ್ಲಿ ನಿರ್ಜಲ ಉಪವಾಸ ನಿಷಿದ್ಧ. ಅದರಿಂದ ದೇಹದ ನಿರ್ಜಲಿಕರಣ, ರಕ್ತದ ಒತ್ತಡ ಹೆಚ್ಚಾಗುವುದು, ತಲೆಸುತ್ತು ಕಾಣಿಸಿಕೊಳ್ಳಬಹುದು; ಇವುಗಳ ಪರಿಣಾಮವಾಗಿ ಪಕ್ಷಾಘಾತವೇ ಮೊದಲಾದ ಘೋರ ವ್ಯಾಧಿಗಳಿಗೆ ತುತ್ತಾಗಬಹುದು.

ಉಪವಾಸ ಮಾಡುವುದು ಎಷ್ಟು ಪರಿಣಾಮಕಾರಿಯೋ, ಉಪವಾಸವನ್ನು ಕೈ ಬಿಡುವಾಗಲೂ ಅಷ್ಟೇ ಜಾಗ್ರತೆ ವಹಿಸಬೇಕು. ಉಪವಾಸದ ನಂತರ ಆಹಾರವನ್ನು ಸೇವಿಸುವಾಗ ಮೊದಲು ದ್ರವಾಹಾರ ಸೇವಿಸಿ, ನಂತರ ಘನಾಹಾರ ಸೇವಿಸಬೇಕು. ದೇಹಪ್ರಕೃತಿ, ದೇಶ-ಕಾಲ, ವಯಸ್ಸುಗಳನ್ನು ಅನುಸರಿಸಿ ಮಾಡುವ ಉಪವಾಸ ಆರೋಗ್ಯವರ್ಧಕ ಮತ್ತು ರಕ್ಷಕವಾದರೆ, ವಿವೇಚನೆ ಇಲ್ಲದೆ ಮಾಡುವ ಉಪವಾಸ ಅನರ್ಥಕ್ಕೆ ನಾಂದಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

❖





ಸುಭಾಷಿತ

ಅತಿದೊಡ್ಡ ಗುರುಮಂತ್ರ ಇದು: ನಿಮ್ಮ ರಹಸ್ಯಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ, ಅದು ನಿಮ್ಮನ್ನು ನಾಶ ಮಾಡುತ್ತದೆ.

-ಚಾಣಕ್ಯ

ಐಪಿಎಲ್ ಅಂಗಳದಲ್ಲಿ ಮೂಡಿದ ಹೊಸ ಹೆಜ್ಜೆ ಗುರುತು

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹದಿನೈದನೇ ಆವೃತ್ತಿಯ ಮುಕ್ತಾಯದೊಂದಿಗೆ ಕ್ರಿಕೆಟ್ ರಂಗದಲ್ಲಿ ಹೊಸದೊಂದು ಪರ್ವ ಆರಂಭವಾಯಿತು. 63 ದಿನಗಳ ನಡೆದ ಸುದೀರ್ಘ ಟೂರ್ನಿಯಲ್ಲಿ ಈ ಸಲವೇ ಪದಾರ್ಪಣೆ ಮಾಡಿದ ಗುಜರಾತ್ ಟೈಟನ್ಸ್ ತಂಡವು ಚಾಂಪಿಯನ್ ಪಟ್ಟ ಅಲಂಕರಿಸಿತು. ಈ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಕೆಲವು ತಿಂಗಳುಗಳ ಹಿಂದಷ್ಟೇ ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರಿ ಹಿನ್ನಡೆ ಅನುಭವಿಸಿದ್ದರು. ಗಾಯದ ಸಮಸ್ಯೆಯಿಂದ ಪದೇ ಪದೇ ಬಳಲಿದ್ದರು. ಇದರಿಂದ ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿರಲಿಲ್ಲ. ಇದಲ್ಲದೆ ಇನ್ನೂ ಕೆಲವು ಕಾರಣಗಳಿಂದ ಈ ಟೂರ್ನಿಯು ಗಮನ ಸೆಳೆದಿದೆ. 2008ರಲ್ಲಿ ಐಪಿಎಲ್ ಆರಂಭವಾದಾಗ ಎಂಟು ತಂಡಗಳು ಕಣದಲ್ಲಿ ಇದ್ದವು. ಆದರೆ ಈ ಬಾರಿ ಹತ್ತು ತಂಡಗಳು ಆಡಿದವು. ಗುಜರಾತ್ ಟೈಟನ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡ ಈ ಬಾರಿ ಹೊಸದಾಗಿ ಸೇರಿದವು. ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡವು ಪ್ಲೇ ಆಫ್ ಪ್ರವೇಶಿಸಿದ್ದು ಗಮನಾರ್ಹ ಸಾಧನೆ. ಕೋವಿಡ್‌ನಿಂದಾಗಿ ಟೂರ್ನಿಯನ್ನು ಎರಡು ವರ್ಷ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸಲಾಗಿತ್ತು. ಈ ಬಾರಿ ಭಾರತದಲ್ಲಿಯೇ ನಡೆಸಲಾಯಿತು. ಲೀಗ್ ಹಂತದ 70 ಪಂದ್ಯಗಳು ಮುಂಬೈನ ವಾಂಖೆಡೆ, ಬ್ರೆಬೋರ್ನ್, ಡಿ.ವೈ. ಪಾಟೀಲ ಕ್ರೀಡಾಂಗಣ ಮತ್ತು ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಮೈದಾನದಲ್ಲಿ ನಡೆದವು. ಮೊದಲ ಕ್ವಾಲಿಫೈಯರ್ ಮತ್ತು ಎಲಿಮಿನೇಟರ್ ಪಂದ್ಯಗಳು ಕೋಲ್ಕತ್ತದಲ್ಲಿ ಆಯೋಜನೆಗೊಂಡಿದ್ದವು. ಎರಡನೇ ಕ್ವಾಲಿಫೈಯರ್ ಹಾಗೂ ಫೈನಲ್ ಪಂದ್ಯ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದವು. ಈ ಎರಡೂ ಪಂದ್ಯಗಳಿಗೆ ಒಂದು ಲಕ್ಷಕ್ಕಿಂತಲೂ ಹೆಚ್ಚು ಪ್ರೇಕ್ಷಕರು ಸೇರಿದ್ದರು. ಕೋವಿಡ್ ನಾಲ್ಕನೇ ಅಲೆಯ ಭೀತಿಯಿಂದಾಗಿ ಟೂರ್ನಿಯ ಆರಂಭಿಕ ಪಂದ್ಯಗಳಿಗೆ ಕ್ರೀಡಾಂಗಣ ಸಾಮರ್ಥ್ಯದ ಶೇ 50ರಷ್ಟು ಮಂದಿಗೆ ಅವಕಾಶ ನೀಡಲಾಗಿತ್ತು. ಆಟಗಾರರು ಮತ್ತು ಸಿಬ್ಬಂದಿಗೆ ಬಯೋಬಬಲ್ (ಜೀವಸುರಕ್ಷಾ) ವ್ಯವಸ್ಥೆಯನ್ನು ಮುಂದುವರಿಸಲಾಗಿತ್ತು. ಐಪಿಎಲ್ ಯಶಸ್ಸಿನಿಂದ ಹುರುಪುಗೊಂಡಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮುಂದಿನ ತಿಂಗಳು ತನ್ನ ಆತಿಥ್ಯದಲ್ಲಿ ನಡೆಸಲಿರುವ ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ಬಯೋಬಬಲ್ ಜಾರಿಗೊಳಿಸದಿರಲು ತೀರ್ಮಾನಿಸಿದೆ. ಇದು ಸಕಾರಾತ್ಮಕ ಸುದ್ದಿಯೇ ಸರಿ.



ಟೂರ್ನಿಯ ಎರಡನೇ ಕ್ವಾಲಿಫೈಯರ್ ಮತ್ತು ಫೈನಲ್ ಪಂದ್ಯ ನೋಡಲು ಒಂದು ಲಕ್ಷಕ್ಕಿಂತಲೂ ಹೆಚ್ಚು ಪ್ರೇಕ್ಷಕರು ಸೇರಿದ್ದರು. ಟೂರ್ನಿಯಲ್ಲಿ ಈ ಸಲ ಕೆಲವು ಅಚ್ಚರಿಗಳೂ ದಾಖಲಾದವು

ಟೂರ್ನಿಯ ಕೆಲವು ಪಂದ್ಯಗಳು ನೀರಸವೆನಿಸಿದ್ದು ಸುಳ್ಳಲ್ಲ. ಇದರಿಂದಾಗಿ ಟೂರ್ನಿಯ ಆಯೋಜನೆ ಮಾದರಿಯಲ್ಲಿ ಮಾರ್ಪಾಟುಗಳನ್ನು ಮಾಡಿ, ಪಂದ್ಯದ ದಿನಗಳನ್ನು ಕಡಿಮೆ ಮಾಡುವುದು ಸೂಕ್ತ. ಈ ಸಲ ಕೆಲವು ಅಚ್ಚರಿಗಳೂ ದಾಖಲಾದವು. ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಸತತ ಎಂಟು ಪಂದ್ಯಗಳನ್ನು ಸೋತಿತು. ಭಾರತ ತಂಡದ ನಾಯಕರೂ ಆಗಿರುವ ರೋಹಿತ್ ಶರ್ಮಾ ನೇತೃತ್ವದ ಮುಂಬೈ ತಂಡವು ಪ್ಲೇ ಆಫ್‌ಗೂ ಪ್ರವೇಶಿಸಲಿಲ್ಲ. 'ಹಿಟ್‌ಮ್ಯಾನ್' ಖ್ಯಾತಿಯ ಶರ್ಮಾ ವೈಫಲ್ಯ ಅನುಭವಿಸಿದರು. ಹೋದ ಸಲದ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಕೂಡ ಲೀಗ್ ಹಂತದಲ್ಲಿಯೇ ನಿರಾಶೆ ಅನುಭವಿಸಿತು. ಟೂರ್ನಿಯ ಆರಂಭದಲ್ಲಿ ಮಹೇಂದ್ರ ಸಿಂಗ್ ಧೋನಿ ಅವರು ನಾಯಕತ್ವವನ್ನು ರವೀಂದ್ರ ಜಡೇಜ ಅವರಿಗೆ ಹಸ್ತಾಂತರಿಸಿದ್ದರು. ಆದರೆ, ತಂಡವು ಸತತ ಸೋಲಿನ ಹಾದಿ ಹಿಡಿದ ಪರಿಣಾಮ, ಎಂಟು ಪಂದ್ಯಗಳ ನಂತರ ಧೋನಿ ಮರಳಿ ನಾಯಕತ್ವ ವಹಿಸಿಕೊಂಡರು. ಗಾಯದ ಕಾರಣ ಹೇಳಿ ಟೂರ್ನಿಯಿಂದ ಜಡೇಜ ಹೊರನಡೆದಿದ್ದು ಚರ್ಚೆಗೂ ಕಾರಣವಾಗಿತ್ತು. ಜನಪ್ರಿಯ ತಂಡವಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎರಡನೇ ಕ್ವಾಲಿಫೈಯರ್‌ನಲ್ಲಿ ಸೋತು ಹೊರಬಿತ್ತು. ಫಫ್ ಡುಪ್ಲೆಸಿ ನಾಯಕತ್ವದಲ್ಲಿ ಆಡಿದ ಈ ತಂಡದಲ್ಲಿ ಸ್ಥಾನ ಪಡೆದ ದಿನೇಶ್ ಕಾರ್ತಿಕ್ ಮಿಂಚಿದರು. ಆದರೆ 'ರನ್ ಯಂತ್ರ' ಖ್ಯಾತಿಯ ವಿರಾಟ್ ಕೊಹ್ಲಿ ವೈಫಲ್ಯ ಅನುಭವಿಸಿದರು. ಈ ಟೂರ್ನಿಯಲ್ಲಿ ಅಂಪೈರ್‌ಗಳ ಕೆಲವು ಅನುಮಾನಾಸ್ಪದ ತೀರ್ಪುಗಳೂ ಸದ್ದು ಮಾಡಿದವು. ಲೀಗ್ ಹಂತದಲ್ಲಿ ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯದಲ್ಲಿ ನೋಬಾಲ್ ತೀರ್ಪು ನೀಡದ ಅಂಪೈರ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ರಿಷಭ್ ಪಂತ್ ಪ್ರತಿಭಟಿಸಿದ್ದರು. ಇದಲ್ಲದೆ ನಿಗದಿತ ಸಮಯದಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದಿರುವುದು, ಅಶಿಸ್ತಿನ ನಡವಳಿಕೆ ಮತ್ತು ನಿಯಮ ಉಲ್ಲಂಘನೆ ಪ್ರಕರಣಗಳೂ ವರದಿಯಾದವು. ಇವು ಕ್ರೀಡಾಸ್ಫೂರ್ತಿಯ ದೃಷ್ಟಿಯಿಂದ ಒಳ್ಳೆಯದಲ್ಲ. ಬಹುಕೋಟಿ ಆದಾಯದ ವೈಭವೋಪೇತ ಟೂರ್ನಿಯು ಯುವಸಮೂಹಕ್ಕೆ ಆದರ್ಶದ ವೇದಿಕೆಯಾಗಬೇಕು. ಈ ಟೂರ್ನಿಯ ಮೂಲಕ ವೇಗದ ಬೌಲರ್ ಉಮ್ರಾನ್ ಮಲಿಕ್, ಆಯುಷ್ ಬದೋನಿ, ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ರಜತ್ ಪಾಟೀದಾರ್ ಅವರಂತಹ ಯುವಪ್ರತಿಭೆಗಳು ಗಮನ ಸೆಳೆದಿದ್ದಾರೆ. ಇನ್ನು ಮೈದಾನದ ಹೊರಗೆ ಬಹಳಷ್ಟು ಬೆಟ್ಟಿಂಗ್ ಪ್ರಕರಣಗಳು ವರದಿಯಾಗಿರುವುದು ಕಳವಳಕಾರಿ. ಇದಕ್ಕೆ ತಡೆಯೊಡ್ಡಲು ಸರ್ಕಾರ ಇನ್ನೂ ಕಠಿಣ ನಿಯಮಗಳನ್ನು ರೂಪಿಸಲು ಮುಂದಾಗಬೇಕಿದೆ. ಈ ಕೆಲಸಕ್ಕೆ ಬಿಸಿಸಿಐ ಕೂಡ ಕೈಜೋಡಿಸಬೇಕು.

ದಿನದ ಟ್ವೀಟ್

ಆಶಾದಾಯಕ ಬೆಳವಣಿಗೆ



ಯುಪಿಎಸ್‌ಸಿ ಫಲಿತಾಂಶದಲ್ಲಿ ಮಹಿಳೆಯರು ಅಗ್ರಸ್ಥಾನದಲ್ಲಿ ಇರುವುದನ್ನು ನೋಡುವುದೇ ಹೃದಯಸ್ಪರ್ಶಿ. ಇನ್ನು ಕೆಲವು ವರ್ಷಗಳಲ್ಲಿ, ನಿರ್ಧಾರ ತೆಗೆದುಕೊಳ್ಳುವ ಸ್ಥಾನಗಳಲ್ಲಿ ನಾವು ಹೆಚ್ಚಿನ ಮಹಿಳಾ ಅಧಿಕಾರಿಗಳನ್ನು ನೋಡುತ್ತೇವೆ ಎಂಬ ಆಶಾಭಾವನೆ ಇದೆ.

ವಸುಧಾ ವೇಣುಗೋಪಾಲ್, ಪತ್ರಕರ್ತೆ

ಕಿಡಿನುಡಿ



ಕಾಂಗ್ರೆಸ್ ಪಕ್ಷದ 'ಲಡಕೀ ಹೂ ಲಡ್ ಸಕ್‌ತೀ ಹೂ' ಎಂಬ ಘೋಷಣೆಯ ಕತೆ ಏನಾಯಿತು? ಕಾಂಗ್ರೆಸ್‌ನ ರಾಜ್ಯಸಭಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಬರೀ ಒಬ್ಬರೇ ಮಹಿಳೆ? ಆಘಾತಕಾರಿ ಮತ್ತು ನಾಚಿಕೆಗೇಡು!

ರುಕ್ಮಿಣಿ ಸಿಂಗ್, ಸಾಮಾಜಿಕ ಕಾರ್ಯಕರ್ತೆ

25 ವರ್ಷಗಳ ಹಿಂದೆ

ಶನಿವಾರ, 31-5-1997

• ಸೋನಿಯಾ ಒಪ್ಪಿದರೆ ಕೇಸರಿ, ಪವಾರ್ ಸ್ಪರ್ಧೆ ಇಲ್ಲ

ನವದೆಹಲಿ, ಮೇ 30 (ಯುಎನ್‌ಐ): ಸೋನಿಯಾ ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವುದಾದರೆ ತಾವು ಸ್ಪರ್ಧೆಯಿಂದ ಹಿಂದೆ ಸರಿಯುವುದಾಗಿ ಸೀತಾರಾಂ ಕೇಸರಿ ಹಾಗೂ ಶರದ್ ಪವಾರ್ ಇಬ್ಬರೂ ಇಂದು ಪ್ರಕಟಿಸುವುದರೊಂದಿಗೆ ಕಾಂಗ್ರೆಸ್ ಅಧ್ಯಕ್ಷತೆಗೆ ನಡೆದಿರುವ ಚುನಾವಣೆಗೆ ಹೊಸ ತಿರುವು ದೊರೆತಿದೆ.

ಸುದ್ದಿಗಾರರ ಜತೆ ಮಾತನಾಡಿದ ಕೇಸರಿ, 'ಪಕ್ಷವು ಜನರ ನಡುವೆ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು, ಮುಂದಿನ ಚುನಾವಣೆಯಲ್ಲಿ ಉತ್ತಮ ಸ್ಪರ್ಧೆಯನ್ನು ನೀಡಬೇಕೆಂಬುದೇ ನನ್ನ ಆಸೆ' ಎಂದರು.

ಬಳಿಕ ಶರದ್ ಪವಾರ್ ಅವರ ಚುನಾವಣೆ ವಕ್ತಾರ ಎ.ಆರ್.ಅಂತುಳೆ ಅವರು ಪತ್ರಕರ್ತರ ಜತೆ ಮಾತನಾಡಿ, 'ಸೋನಿಯಾ ಗಾಂಧಿ ಅವರು ಅಧ್ಯಕ್ಷರಾಗಬೇಕೆಂಬುದು ಮೊದಲಿನಿಂದಲೂ ನಮ್ಮ ನಿಲುವು. ಶರದ್ ಪವಾರ್ ಅವರು ಕೂಡಾ ಇದೇ ನಿಲುವು ಹೊಂದಿದ್ದಾರೆ' ಎಂದು ಪ್ರಕಟಿಸಿದರು.

• ವೇದಗಳು ವೈಜ್ಞಾನಿಕ ಜ್ಞಾನದ ಭಂಡಾರ: ಡಾ. ಶರ್ಮಾ

ಮೈಸೂರು, ಮೇ 30– ಭಾರತೀಯ ವೇದಗಳು ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನದ ಭಂಡಾರವಾಗಿವೆ ಎಂದು ರಾಷ್ಟ್ರಪತಿ ಶಂಕರ ದಯಾಳ್ ಶರ್ಮಾ ಅವರು ಇಂದಿಲ್ಲಿ ಅಭಿಪ್ರಾಯಪಟ್ಟರು.

ಇಲ್ಲಿನ ಅವಧೂತ ದತ್ತಪೀಠದ 'ವೇದ ಮಂದಿರ'ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ರಾಷ್ಟ್ರಪತಿಗಳು ಈ ವೇದ ಪಠ್ಯಗಳ ಸಮಗ್ರ ಅಧ್ಯಯನ ಮತ್ತು ಆಳ ಶೋಧ ಇಂದಿನ ಕೆಲವು ವೈಜ್ಞಾನಿಕ ಕಾಳಜಿಗಳು ಮತ್ತು ದ್ವಂದ್ವಗಳಿಗೆ ಉತ್ತರ ಕಂಡುಕೊಳ್ಳುವಲ್ಲಿ ಸ್ವಲ್ಪವಾದರೂ ನೆರವಾಗಬಹುದು ಎಂದರು.

50 ವರ್ಷಗಳ ಹಿಂದೆ

ಬುಧವಾರ, 31-5-1972

• ಸಂಸತ್ ಸಮಿತಿ ತನಿಖೆ ಇಲ್ಲ: ವಿರೋಧ ಪಕ್ಷಗಳ ತೀಕ್ಷ್ಣ ಟೀಕೆ, ಸಭಾತ್ಯಾಗ

ನವದೆಹಲಿ, ಮೇ 30– ದೆಹಲಿ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ' ಶಾಖೆಗೆ 60 ಲಕ್ಷ ರೂ. ವಂಚನೆ ಮಾಡಿದ ನಗರವಾಲಾ ಪ್ರಕರಣದ ತನಿಖೆಗೆ ಸರ್ವ ಪಕ್ಷಗಳ ಸಂಸತ್ ಸಮಿತಿ ನೇಮಿಸಬೇಕೆಂಬ ತಮ್ಮ ಒತ್ತಾಯವನ್ನು ಸರ್ಕಾರ ತಳ್ಳಿಹಾಕಿದ್ದರಿಂದ ಇಡೀ ವಿರೋಧ ಪಕ್ಷದ ಸದಸ್ಯರು ಇಂದು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು.

ಈ ವಿವಾದದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಅರ್ಥ ಸಚಿವ ವೈ.ಬಿ. ಚವಾಣ್, ತನಿಖೆಗಾಗಿ ಸಂಸತ್ ಸಮಿತಿ ರಚನೆ ಇಲ್ಲಾ... ಇಲ್ಲಾ ಎಂದು ಹೇಳಿದರು.

ನಗರವಾಲಾ ಅವರು ರಹಸ್ಯ ಸೇವಾ ವ್ಯವಸ್ಥೆಯೊಂದರ ಹರಿಕಾರರಾಗಿದ್ದರೆಂದು ಮಾರ್ಕ್ಸಿಸ್ಟ್ ಸದಸ್ಯ ಜ್ಯೋತಿರ್ಮಯಿ ಬಸು ಅವರು ಆಪಾದಿಸಿದರು.

• ಐವತ್ತೇ ಹುದ್ದೆಗೆ ಸಹಸ್ರಾರು ಅರ್ಜಿ

ನವದೆಹಲಿ, ಮೇ 30– ರಿಸರ್ವ್ ಬ್ಯಾಂಕಿನ ದೆಹಲಿ ಕಚೇರಿಯಲ್ಲಿ 50 ಮಂದಿ ಗುಮಾಸ್ತರ ಕೆಲಸಕ್ಕೆ ಸುಮಾರು ಮಂದಿ ಪದವೀಧರರು ಅರ್ಜಿ ಹಾಕಿದ್ದಾರೆ.

ರಾಜ್ಯಸಭೆಯಲ್ಲಿ ಈ ವಿಷಯವನ್ನು ತಿಳಿಸಿದ ಹಣಕಾಸು ಸಚಿವ ಚವಾಣರು 'ಸುಶಿಕ್ಷಿತರಲ್ಲಿ ಇಷ್ಟು ಬೃಹತ್ ಪ್ರಮಾಣದಲ್ಲಿರುವ ನಿರುದ್ಯೋಗ ಸಮಸ್ಯೆ' ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

ಸ್ವಾಮೀಜಿಗಳ ಮಾತಾದರೂ ಸರ್ಕಾರದ ಕಿವಿಗೆ ನಾಟುತ್ತದಲ್ಲ, ಕನ್ನಡಿಗರ ಪುಣ್ಯ!

ಬರಹಗಾರರು ಏಕೆ ಮಾತನಾಡುತ್ತಾರೆ?



ಪಡಸಾಲೆ

ರಘುನಾಥ ಚ.ಹ.

'ಮೈಕ್ ಬಿಟ್ಟು ಪೆನ್ನು ಕೈಗೆತ್ತಿಕೊಳ್ಳಲಿ.' ಪಠ್ಯಪುಸ್ತಕ ಪರಿಷ್ಕರಣೆಯ ರೀತಿನೀತಿ ಕುರಿತು ಆಕ್ಷೇಪ ಎತ್ತಿ, ತಮ್ಮ ಬರಹವನ್ನು ಪಠ್ಯದಿಂದ ಕೈಬಿಡುವಂತೆ ಸರ್ಕಾರಕ್ಕೆ ಪತ್ರ ಬರೆದಿರುವ ದೇವನೂರ ಮಹಾದೇವ ಅವರಿಗೆ ಸಂಸದ ಪ್ರತಾಪ್ ಸಿಂಹ ನೀಡಿರುವ ಸಲಹೆಯಿದು. ಪಠ್ಯ ಪರಿಷ್ಕರಣೆಯ ಓರೆಕೋರೆಗಳ ಬಗ್ಗೆ ಮಾತನಾಡಿರುವ ಮಹಾದೇವ ಹಾಗೂ ಇತರರು ಮೈಕಾಸುರರಂತೆ ವರ್ತಿಸುತ್ತಿದ್ದಾರೆ ಎನ್ನುವ ಮಾತನ್ನೂ ಆಡಿರುವ ಅವರು, ಹೊಸ ಅಸುರಪೀಳಿಗೆಯನ್ನು 'ವೈಚಾರಿಕ ನಪುಂಸಕರು' ಎಂದು ಹೆಸರಿಸಿದ್ದಾರೆ.

ಸಂಸದರ ಮಾತುಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಎರಡು ಸಾಧ್ಯತೆಗಳಿವೆ: ಒಂದು, ಸಾಹಿತ್ಯ ರಚನೆ ಮಾಡುತ್ತ ಓದುಗರನ್ನು ರಂಜಿಸುವುದಷ್ಟೇ ಬರಹಗಾರನ ಕೆಲಸ ಎಂದು ಭಾವಿಸಿರುವವರಿಗೆ ಸಾಮಾಜಿಕ ಸಂಗತಿಗಳ ಬಗ್ಗೆ ಲೇಖಕ ಮಾತನಾಡಿದಾಗ ಅಸಹನೆ ಉಂಟಾಗುವುದು. ಎರಡನೆಯದು ಹಾಗೂ ಬಹುಮುಖ್ಯವಾದುದು, ಸಾಹಿತ್ಯ ಅಥವಾ ಸೃಜನಶೀಲ ಸಂವೇದನೆಗಳಿಗೆ ಈ ನಾಡು ಪೂರ್ತಿ ಕುರುಡಾದಂತಿದೆ ಎನ್ನುವುದು.

ಕರ್ನಾಟಕದ ಜನಮಾನಸದ ಮೇಲೆ ಸಾಂಸ್ಕೃತಿಕ ಕ್ಷೇತ್ರದ ಪ್ರಭಾವ-ಪ್ರೇರಣೆಗಳ ಕುರಿತು ಮಾತನಾಡುವಾಗ, 'ನೃಪತುಂಗನೆ ಚಕ್ರವರ್ತಿ/ ಪಂಪನಿಲ್ಲಿ ಮುಖ್ಯಮಂತ್ರಿ' ಎಂದು ಕುವೆಂಪು ಅವರು ಪ್ರತಿಪಾದಿಸಿದ 'ಸಾಂಸ್ಕೃತಿಕ ಕರ್ನಾಟಕ ಪ್ರಭುತ್ವ'ದ ಪರಿಕಲ್ಪನೆಯನ್ನು ಉಲ್ಲೇಖಿಸುತ್ತೇವೆ. ಈ ಸಾಂಸ್ಕೃತಿಕ ಪ್ರಭುತ್ವ ವಾಸ್ತವದಲ್ಲಿರಲಿ, ಕನ್ನಡಿಗರ ಭಾವಕೋಶದಲ್ಲೂ ಅಸ್ತಿತ್ವದಲ್ಲಿಲ್ಲ ಎನ್ನುವುದನ್ನು ಸಂಸದರು ಕನ್ನಡ ಸಾಹಿತ್ಯಲೋಕಕ್ಕೆ ನೆನಪಿಸಲು ಹೊರಟಿರುವಂತಿದೆ. ಆದರೆ, ಹೀಗೆ ನೆನಪಿಸುವ ಶ್ರಮವನ್ನು ಅವರು ತೆಗೆದುಕೊಳ್ಳುವ ಅಗತ್ಯವಿಲ್ಲ. ನಮ್ಮ ಬಹುತೇಕ ಸಾಹಿತಿಗಳ ಪಂಚೇಂದ್ರಿಯಗಳು ವರ್ತಮಾನದ ಸ್ಥಿತಿಗತಿಯನ್ನು ಗುರ್ತಿಸಲಾಗದಷ್ಟು ದುರ್ಬಲವಾಗಿರುವುದು ಮಾತ್ರವಲ್ಲ, ಅವರ ಆತ್ಮಸಾಕ್ಷಿಯೂ ಮುಸುಕು ಹೊದ್ದುಕೊಂಡಿದೆ. ಪ್ರಭುತ್ವ ತೂಕಡಿಸಿದಾಗಲೆಲ್ಲ ಎಚ್ಚರಿಸುವ ಕೆಲಸ ಮಾಡಿರುವ ಸಾಹಿತ್ಯ ಪರಂಪರೆಗೆ ಬೆನ್ನುಹಾಕಿ, ಈಗ ಸ್ವತಃ ತಾವೇ ತೂಕಡಿಸಲು ಪ್ರಾರಂಭಿಸಿದ್ದಾರೆ. ನಿದ್ದೆಯಿಂದ ವಂಚಿತರಾದ ಮಹಾದೇವ, ಬರಗೂರರಂಥ ಕೆಲವರಷ್ಟೇ ಮಾತನಾಡುವ ಶ್ರಮ ತೆಗೆದುಕೊಳ್ಳುತ್ತಿದ್ದಾರೆ ಹಾಗೂ 'ಇದು ನಿಮ್ಮ ಕೆಲಸವಲ್ಲ' ಎಂದು ಮತ್ತೆ ಮತ್ತೆ ಪಾಠ ಹೇಳಿಸಿಕೊಳ್ಳುತ್ತಿದ್ದಾರೆ.

ನಾಡಿನ ಸಾಕ್ಷಿಪ್ರಜ್ಞೆಯ ರೂಪದಲ್ಲಿ ಸಾಹಿತಿಗಳ ಅಭಿಪ್ರಾಯಗಳನ್ನು ಸಮಾಜ ಗೌರವಿಸುತ್ತಿದ್ದುದು ಹಾಗೂ ವರ್ತಮಾನದ ಬಿಕ್ಕಟ್ಟುಗಳ ಕುರಿತು ಬರಹಗಾರರು ಮಾತನಾಡಬೇಕೆಂದು ಅಪೇಕ್ಷಿಸುತ್ತಿದ್ದುದು 'ಒಂದಾನೊಂದು ಕಾಲ'ದ ಕಥೆಯಾಯಿತು. ಈಗೇನಿದ್ದರೂ ಬರಹಗಾರರು ಮಾತನಾಡದೆ, ಸುಮ್ಮನೆ ಕಥೆ-ಕವನ ಬರೆದುಕೊಂಡಿರಬೇಕೆಂದು ಸಮಾಜ ಆಗ್ರಹಿಸುವ ಸಮಯ. 'ವೈಚಾರಿಕ ನಪುಂಸಕರು' ಎನ್ನುವ ವಿಶೇಷಣ, ಪ್ರಜಾಪ್ರತಿನಿಧಿಗಳ ಕಣ್ಣಿಗೆ ಸಾಂಸ್ಕೃತಿಕ ಕ್ಷೇತ್ರದ ಪ್ರತಿನಿಧಿಗಳು ಹೇಗೆ ಕಾಣಿಸುತ್ತಿದ್ದಾರೆ ಎನ್ನುವುದನ್ನಷ್ಟೇ ಹೇಳುತ್ತಿಲ್ಲ; ಆ ಸ್ಥಿತಿಯನ್ನು ಸಾಹಿತ್ಯಲೋಕ ಸ್ವತಃ ಸೃಷ್ಟಿಸಿಕೊಂಡಿರುವ ಸಾಧ್ಯತೆಯತ್ತಲೂ ಬೆರಳು ಮಾಡುತ್ತಿದೆ.

ಸರಿ, ಬರಹಗಾರರು ಮಾತನಾಡುವುದು ಬೇಡ. ಮುಂದಿನ ಪ್ರಶ್ನೆ ರಾಜಕಾರಣಿಗಳಿಗೆ. ಅವರು ಮೈಕಿಗೆ ಅಂಟಿಕೊಂಡರೆ ಪರವಾಗಿಲ್ಲವೆ? ಆಗೊಮ್ಮೆ ಈಗೊಮ್ಮೆ ಮಾತನಾಡುವ ಸಾಹಿತಿಗಳನ್ನು ಮೈಕಾಸುರರು ಎನ್ನುವುದಾದರೆ, ದಿನ ಬೆಳಗಾದರೆ ಮಾತಿನ ರೂಪದಲ್ಲಿ ನಂಜು ಕಾರುವ ರಾಜಕಾರಣಿಗಳನ್ನು ಏನನ್ನುವುದು? ಸಾಹಿತಿಗಳು ಮೈಕು ಪಕ್ಕಕ್ಕಿಟ್ಟು ಪೆನ್ನು ಹಿಡಿಯುವಂತೆ, ರಾಜಕಾರಣಿಗಳು– ಅಡಿಗೆರೆ ಎಳೆದು ಹೇಳುವುದಾದರೆ, ಪ್ರಜಾಪ್ರತಿನಿಧಿಗಳು ಕೂಡ ಮೈಕು ದೂರವಿರಿಸಿ, ತಂತಮ್ಮ ಕೆಲಸ ಮಾಡಬೇಕಲ್ಲವೆ? ಅಂದಹಾಗೆ, ರಾಜಕಾರಣಿಗಳು ಮಾಡಬೇಕಾದ ಕೆಲಸವೇನು? ಸಾಹಿತಿಯನ್ನು ಪೆನ್ನಿನೊಂದಿಗೆ ತಳುಕು ಹಾಕುವಂತೆ ರಾಜಕಾರಣಿಗಳನ್ನು ಯಾವುದರೊಂದಿಗೆ ಗುರ್ತಿಸುವುದು? ರಾಜಕಾರಣಿಗಳನ್ನೇ ಈ ಪ್ರಶ್ನೆ ಕೇಳಿದರೆ, ನಮ್ಮ ಬಹುತೇಕ ರಾಜಕಾರಣಿಗಳಿಗೆ ಉತ್ತರ ಹೊಳೆಯದಿರುವ ಸಾಧ್ಯತೆಯೇ ಹೆಚ್ಚು. ಚುನಾವಣೆಯಲ್ಲಿ ಗೆದ್ದ ನಂತರ ಏನು ಮಾಡಬೇಕೆನ್ನುವುದನ್ನು ಪ್ರಜಾಪ್ರತಿನಿಧಿಗಳು ಮರೆತು ದಶಕಗಳೇ ಆಗಿದೆ; ನೆನಪಿಸುವ ಕೆಲಸವನ್ನು ಪ್ರಜೆಗಳೂ ಮರೆತಿದ್ದಾರೆ.

ಪ್ರಜಾಪ್ರತಿನಿಧಿಯೊಬ್ಬ ಮಾಡಬೇಕಾದುದು ಪ್ರಜೆಗಳ ಹಿತಕ್ಕೆ ಪೂರಕವಾದ ಕೆಲಸಗಳನ್ನು. ಜನರ ಬದುಕು ಹಸನಾಗಲು ಅಗತ್ಯವಾದ ಕೆಲಸಗಳನ್ನು ಮಾಡಬೇಕಾದುದು ರಾಜಕಾರಣಿಗಳ ಕರ್ತವ್ಯ. ಆದರೆ, ಇಂದಿನ ರಾಜಕಾರಣಿಗಳು ಧರ್ಮದ ಮೂಲಕವಷ್ಟೇ ಜನರ ಬದುಕನ್ನು ಹಸನಾಗಿಸಲು ಹೊರಟಿದ್ದಾರೆ. ಕುಡಿಯಲು ನೀರು, ಹೊಟ್ಟೆ ತುಂಬಿಸಲು ಆಹಾರ, ದುಡಿಮೆಗೆ ಕೆಲಸ ಇಲ್ಲದಿದ್ದರೂ ಚಿಂತೆಯಿಲ್ಲ; ಧರ್ಮದ ಮೂಲಕ ಜನರನ್ನು 'ಸಂತೋಷ'ವಾಗಿರಿಸಲು ಪ್ರಯತ್ನಿಸುತ್ತಿದ್ದಾರೆ. ಸಾಂವಿಧಾನಿಕವಾಗಿ ತಾವು ಮಾಡಬೇಕಾದ ಕೆಲಸವನ್ನು ಪಕ್ಕಕ್ಕಿಟ್ಟು, ಮಾತಿನ ತುರಿಕೆಯಲ್ಲಿ ತೊಡಗಿರುವ ಈ ರಾಜಕಾರಣಿಗಳಿಗೆ ತಮ್ಮ ಕೆಲಸವನ್ನು ನೆನಪಿಸಲು ಹೊರಟರೆ, ಅದು ದೇಶದ್ರೋಹವೋ ಧರ್ಮದ್ರೋಹವೋ ಆಗಿ ಅವರ ಕಣ್ಣಿಗೆ ಕಾಣಿಸಿದರೆ ಆಶ್ಚರ್ಯವೇನೂ ಇಲ್ಲ.

ಬರಹಗಾರರು ಬರವಣಿಗೆಗಷ್ಟೇ ಸೀಮಿತಗೊಳ್ಳಬೇಕು ಎಂದು ರಾಜಕಾರಣಿಗಳು ಅಪೇಕ್ಷಿಸುವಂತೆ, ರಾಜಕಾರಣಿಗಳು ತಮ್ಮ ಕೆಲಸವನ್ನಷ್ಟೇ ಮಾಡಬೇಕು ಎಂದು ಸಾಹಿತಿಗಳು ಬಯಸುವಂತಿಲ್ಲ. ಮೈಕು ಪಕ್ಕಕ್ಕಿಟ್ಟು ಪೆನ್ನು ಕೈಗೆತ್ತಿಕೊಂಡು ದಂತಗೋಪುರದಲ್ಲಿ ಅಡಗಿಕೊಳ್ಳುವುದು ಇಂದಿನ ಬರಹಗಾರನಿಗೆ ಸುಲಭ. ಆದರೆ, ವರ್ತಮಾನದ ರಾಜಕಾರಣಿಗೆ, 'ಮಾತು ಬಿಟ್ಟು ಕೆಲಸ ಮಾಡು' ಎಂದು ಹೇಳಿದರೆ ಅನಾಹುತವೇ ಉಂಟಾದೀತು. ಮಾತನ್ನು ನಿಷೇಧಿಸಿದರೆ, ಅನೇಕರ ಮಾನಸಿಕಸ್ಥಿಮಿತವೇ ತಪ್ಪಿ, ಶಾಸಕಾಂಗಸೌಧಗಳ ತುಂಬ ಖಿನ್ನತೆಗೊಳಗಾದವರೇ ತುಂಬಿಕೊಳ್ಳಬಹುದು. ವರ್ತಮಾನದ ಬಿಕ್ಕಟ್ಟುಗಳಿಗೆ ಮೂಕರಾಗಿ ಕುಳಿತಿರುವ ಲೇಖಕರನ್ನು ನೋಡಿದರೆ, 'ಕೆಲಸ ಮಾಡದಿದ್ದರೂ ಪರವಾಗಿಲ್ಲ, ನಮ್ಮ ರಾಜಕಾರಣಿಗಳು ಮಾತನಾಡಿಕೊಂಡು ಆರೋಗ್ಯದಿಂದಿರಲಿ' ಎನ್ನುವ ಜೀವಪರ ನಿಲುವಿನಿಂದ ಅವರು ರಾಜಕಾರಣಿಗಳ ಸುದ್ದಿಗೆ ಹೋಗದಿರುವ ಸಾಧ್ಯತೆಯೂ ಇದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣಿಗಳಿಂದ ಮೈಕು (ಮಾತು) ಕಿತ್ತುಕೊಳ್ಳುವ ಅಧಿಕಾರ ಬರಹಗಾರರಿಗಿಲ್ಲ. ಆದರೆ, ಬರಹಗಾರರನ್ನು ಮೌನವಾಗಿಸುವ ಸಾಧ್ಯತೆ ರಾಜಕಾರಣಿಗಳ ಕೈಯಲ್ಲೇ ಇದೆ. ಮತ್ತೇನಿಲ್ಲ, ಸಂವಿಧಾನದ ಅನುಸಾರವಾಗಿ ರಾಜಕಾರಣಿಗಳು ಏನೆಲ್ಲ ಕೆಲಸಗಳನ್ನು ಮಾಡಬೇಕೋ ಅಷ್ಟನ್ನು ಮಾಡಿಬಿಟ್ಟರಾಯಿತು. ಆಗ ಬಡ ಬರಹಗಾರನಿಗೆ ಮಾತನಾಡುವ ಅವಕಾಶವೇ ಇಲ್ಲ. ಕುವೆಂಪು ಪ್ರತಿಪಾದಿಸಿದ 'ಸಾಂಸ್ಕೃತಿಕ ಸಂವಿಧಾನ'ವನ್ನು ಕಡೆಗಣಿಸಿದರೂ ಪರವಾಗಿಲ್ಲ, ಅಂಬೇಡ್ಕರ್ ಪ್ರಣೀತ ಸಂವಿಧಾನಕ್ಕಾದರೂ ಅವರು ನಿಷ್ಠರಾಗಿರಬೇಕಲ್ಲವೆ? ಈಗಲೂ ಅಲ್ಲೊಬ್ಬ ಇಲ್ಲೊಬ್ಬ ಬರಹಗಾರ ಮಾತನಾಡುತ್ತಿರುವುದಕ್ಕೆ ಕಾರಣ, ರಾಜಕಾರಣಿಗಳು ತಾವು ಮಾಡಬೇಕಾದ ಕೆಲಸವನ್ನು ಮರೆತಿರುವುದೇ ಆಗಿದೆ.


'ಸಾಂಸ್ಕೃತಿಕ ಕರ್ನಾಟಕ ಪ್ರಭುತ್ವ' ಗೌರವ ಕಳೆದುಕೊಂಡಿರುವ ಸಂದರ್ಭದಲ್ಲಿ, ಈಗ ಕಿಮ್ಮತ್ತು ಉಳಿಸಿಕೊಂಡಿರುವ ಪ್ರಭುತ್ವ ಯಾವುದು ಎನ್ನುವ ಪ್ರಶ್ನೆ ಎದುರಾಗುತ್ತದೆ? ಇದಕ್ಕೆ ಉತ್ತರ ಕಂಡುಕೊಳ್ಳಲು ಹೆಚ್ಚಿನ ಬುದ್ಧಿವಂತಿಕೆಯೇನೂ ಬೇಕಿಲ್ಲ. ನಾಡಗೀತೆಯನ್ನು ತಿರುಚುವ ಮೂಲಕ ಕುವೆಂಪು ಅವರಿಗೆ ಅವಮಾನ ಮಾಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆದಿಚುಂಚನಗಿರಿ ಸ್ವಾಮೀಜಿ ಅವರು ಹೇಳಿರುವುದು ಸರ್ಕಾರದ ಕಿವಿಗೆ ಬಿದ್ದಿದೆ. ಅದರ ಪರಿಣಾಮ ಏನಾಗುತ್ತದೆನ್ನುವುದು ಬೇರೆ ಮಾತು. ಆದರೆ, ಈಗ ಸರ್ಕಾರದ ಕಿವಿಗೆ ಯಾರ ಮಾತಾದರೂ ನಾಟುತ್ತದೆ ಎನ್ನುವುದಾದರೆ ಅದು ಸ್ವಾಮೀಜಿಗಳ ಮಾತು ಮಾತ್ರ ಎನ್ನುವುದಂತೂ ಸ್ಪಷ್ಟ.

ಇಷ್ಟೆಲ್ಲ ಜಿಜ್ಞಾಸೆಯ ನಂತರ ಉಳಿಯುವ ಪ್ರಶ್ನೆ: ದೇವನೂರ ಅವರಿಗೆ ಪೆನ್ನು ನೆನಪಿಸುವ ಜಾಣರು, ಅದೇ ಮಾತನ್ನು ಸ್ವಾಮೀಜಿಗೆ ಹೇಳಬಲ್ಲರೆ?

'ಎದೆಗೆ ಬಿದ್ದ ಅಕ್ಷರ' ದೇವನೂರರ ಕೃತಿಯ ಹೆಸರು, ಪಠ್ಯವಾಗಿರುವ ಬರಹದ ಶೀರ್ಷಿಕೆಯೂ ಹೌದು. ಮಕ್ಕಳ ಎದೆಗೆ ಅಕ್ಷರಗಳನ್ನು ಬೀಳಿಸುವುದು ಶಿಕ್ಷಣದ ಉದ್ದೇಶ. ಸಮಾಜದ ಎದೆಗೂ ಅಕ್ಷರರೂಪದಲ್ಲಿ ಮಾನವೀಯತೆಯ ಬೀಜಗಳು ಬೀಳಬೇಕು ಎನ್ನುವುದು ಸಾಹಿತ್ಯದ ಜೀವಶಕ್ತಿಯ ಬಗ್ಗೆ ನಂಬುಗೆಯುಳ್ಳ ಎಲ್ಲರ ಹಂಬಲ. ಇಂದಿನ ಸಾಮಾಜಿಕ ಚಲನೆಯನ್ನು ಗಮನಿಸಿದರೆ – ಕೆಲವರ ಎದೆಗಷ್ಟೇ ಅಕ್ಷರ ಬೀಳುತ್ತದೆ. ಮತ್ತೆ ಕೆಲವರ ಎದೆಗೆ, ಜಾತಿ ಮತ್ತು ಧರ್ಮ ನಾಟುತ್ತದೆ. ಮತ್ತೆ ಕೆಲವರಿಗೆ, ತಮ್ಮ ಎದೆಗೆ ಬಿದ್ದಿರುವುದೇನು ಎನ್ನುವುದಕ್ಕಿಂತ ಬೇರೆಯವರ ಎದೆಯಲ್ಲಿರುವುದೇನು ಎನ್ನುವುದರ ಬಗ್ಗೆ ಆಸಕ್ತಿ.



ಚುರುಮುರಿ



ಜೈಲು ವಿ.ವಿ.

• ಲಿಂಗರಾಜು ಡಿ.ಎಸ್.

ತುರೇಮಣೆ ಮನೆಮುಂದೆ ಮಕವ ಇಳೆಬುಟ್ಕಂದು ಕಾವಿಗೆ ಕುಂತಿರ ಕೋಳಿಯಂಗೆ ಕೊರಗುಟ್ಟುತಿದ್ದರು. 'ಇದ್ಯಾಕ್ಸಾ?' ಅಂದೆ.

'ಇನ್‌ಕಂಟ್ಯಾಕ್ಸು ಕಟ್ಟಿ ಪಿಂಚಣಿ ಕಾಸೆಲ್ಲಾ ಖಾಲಿಯಾಗೋಗ್ಯದೆ ಕನೋ. ಸಾಲ ಮಾಡಿಕ್ಯಂಡು ಉಣ್ಣುವ ಬದ್ಲು ಜೈಲಿಗೋಗಿ ಜುಮ್ ಅಂತ ಇರದು ಬೇಸು!' ಅಂದ್ರು.

'ಸಾ, ಈಗ ಸರ್ಕಾರದ ವಿರೋಧಿಗಳನ್ನ ಮಾತ್ರ ಜೈಲಿಗಾಕದು. ಅಲ್ದೇ ಜೈಲಲ್ಲಿ ಅಂತ ಮಜ ಏನದೆ?' ನನ್ನ ಅನುಮಾನಕ್ಕೆ ತುರೇಮಣೆ ಉತ್ತರಿಸಿದರು.

'ಸಿಕ್ಸರ್ ಸಿದ್ದ ಜೈಲಿಗೋದ್ರೂ ಗುಮಾಸ್ತನ ಚಾಕರಿ ಮಾಡಿಕ್ಯಂದು ದಿನಕ್ಕೆ 90 ರುಪಾಯಿ ಕೂಲಿ ತಗತಾವ್ನಂತೆ! ಡಾಗುಟ್ರು ಸರ್ಟಿಪಿಕೇಟ್ ಕೊಟ್ರೆ ಮೂರೊತ್ತೂ ಜ್ಯೂಸು, ಬಾದಾಮಿ ಹಾಲು, ಕಣ್ಣಿಗೆ ಬೇಕಾದ ಊಟ, ಟೀವಿ, ಮಂಚ, ಎಣ್ಣೆ, ಡ್ರಗ್ಸು ಕೊಟ್ಟಾರಂತೆ! ಅದ ನೆನಸಿಗ್ಯಂಡೇ ನನಗೆ ಬಾಯಿನೀರು ಕಡೀತಾ ಅದೆ. ಬುದುವಂತ ಕಾಪಿಕ್ಯಾಟುಗಳು ಜೈಲಾಸ್ಪತ್ರೆ ಸೇರಿ ಮಜವಾಗಿಲ್ವಾ? ಈವತ್ತಿನ ಜೈಲುಗಳು ಮೊದಲಿನಂಗಿಲ್ಲ ವಿಸ್ವವಿದ್ಯಾಲಯ ಆಗೋಗ್ಯವೆ ಅಣ್ತಮ್ಮಾ. ಸಕಲೆಂಟು ವಿದ್ಯೆಗಳೂ ಅಲ್ಲಿ ಪಾಠಾಯ್ತವೆ ಕನೋ. ಜೈಲಿಗೆ ಹೋಗಿ ಬಂದೋರು ನೋಡು ಈವತ್ತು ಹ್ಯಂಗೆ ದಿಂಡುಗುಳ ಆಗ್ಯವರೆ' ಅಂತ ತಯಾರಾದ್ರು.

'ಸರಿ ಸಾ, ಜೈಲಿಗೋಗಕೆ ಏನಾದರು ಕಾರಣ ಬೇಕಲ್ಲವಾ?' ಅಂತಂದೆ.

'ತಪ್ಪು ಮಾಡಿದೋವು ಮಾತ್ರ ಜೈಲಿಗೋಗದು ಅನ್ಕಂದಿದೀಲಾ? ಈಗ ಹೊಸಾ ಕಾನೂನು ಬಂದದೆ. ಸರ್ಕಾರವ ಬೋದ್ರೆ ಅದು ದೇಶದ್ರೋಹ ಅಂತ ಜೈಲಿಗಾಕಾರಂತೆ! ಮೋದಿ ಮಾವಾರನ್ನ ತಾರಾಮಾರ ಬೋದ್ರಾಯ್ತಪ್ಪ. ಆಗ ದೇಸದ್ರೋಹಿ ಅಂತ ಜೈಲಿಗೆ ಕಳಿಸೇ ಕಳುಸ್ತರೆ. ಅಲ್ಲಿ ಬೂವಕ್ಕೇನೂ ತೊಂದರಿಲ್ಲ. ಹ್ಯಂಗದೆ ನನ್ನ ಹುನ್ನಾರು' ಅಂತ ಬಾಗಾಡಿದ್ರು.

'ನಮ್ಮನೆ ಊಟ್ದೇಲಿ ಉಪ್ಪು-ಸಕ್ಕರೆ, ಎಣ್ಣೆ ಇಲ್ದೆ ಬಾಯಿ ಬರಗೆಟ್ಟೋಗ್ಯದೆ. ನೀನೊಬ್ನೆ ಹೋದೀಯೇನೋ? ತಡ್ಲಾ ನಾನೂ ನಿನ್ನ ಜೊತೆಗೇ ಬಂದೇನು' ಅಂತ ಯಂಟಪ್ಪಣ್ಣನೂ ಎದ್ದಾಗ ಇವರ ತರದೂದು ನೋಡಿ, ಇವೂ ಸರ್ಕಾರಿ ವ್ಯವಸ್ಥೆ ಥರಾ ಕುಲಗೆಟ್ಟೋಗ್ಯವೆ ಅಂತ ಖಾತರಿಯಾಯ್ತು.

ಸಂಗತ

ಸ್ವಚ್ಛತಾ ಸಮರಕ್ಕೆ ಎಳೆಯ ಸೇನಾನಿಗಳು

ನೈರ್ಮಲ್ಯದ ಕುರಿತು ವಯಸ್ಕರಿಗೆ ಹೇಳಿದ್ದನ್ನೇ ಹೇಳುತ್ತಾ ಸಮಯ, ಶ್ರಮ ವ್ಯರ್ಥ ಮಾಡುವುದಕ್ಕಿಂತ ಈ ವಿಚಾರಗಳನ್ನು ಬಿತ್ತಬೇಕಿರುವುದು ಚಿಣ್ಣರ ಹದದ ಮನದಂಗಣದಲ್ಲಿ

• ಡಾ. ಮುರಳೀಧರ ಕಿರಣಕೆರೆ

ಆ ಬಾಲಕ ನನ್ನ ಸಮೀಪ ಸಂಬಂಧಿಯ ಮಗ. ವಯಸ್ಸು ಇನ್ನೂ ಐದು ವರ್ಷ. ಉದ್ಯೋಗ ನಿಮಿತ್ತ ಅಮೆರಿಕದಲ್ಲಿರುವ ಕುಟುಂಬ ಕಳೆದ ತಿಂಗಳು ರಜೆಯ ಮೇಲೆ ತವರಿಗೆ ಬಂದಿತ್ತು. ನನಗೆ ತುಂಬಾ ವಿಶೇಷವೆನಿಸಿದ್ದು ಆ ಪುಟ್ಟನ ನೈರ್ಮಲ್ಯ ಪ್ರಜ್ಞೆ. ಕಸ-ಕಡ್ಡಿ ಬಿದ್ದಿದ್ದರೆ ಚಪ್ಪಲಿ ಮೆಟ್ಟದೆ ಅಂಗಳಕ್ಕೆ ಇಳಿಯುತ್ತಿರಲಿಲ್ಲ. ಯಾವುದಾದರೂ ವಸ್ತುವನ್ನು ತೆಗೆಯುವಾಗ ದೂಳು ಮೆತ್ತಿದರೆ ಮುಖ ಕಿವುಚುತ್ತಾ ಕೈ ತೊಳೆದುಕೊಳ್ಳಲು ನಲ್ಲಿ ಹುಡುಕುತ್ತಿದ್ದ. ಸ್ವಚ್ಛವಾಗಿ ತೊಳೆದುಕೊಂಡ ನಂತರವೇ ಆ ಎಳೆಯ ಮೊಗದಲ್ಲಿ ಸಮಾಧಾನದ ಗೆರೆಗಳು. ಸಣ್ಣ ಪ್ರವಾಸವೊಂದರಲ್ಲಿ ದೇವಸ್ಥಾನದ ಪುಷ್ಕರಿಣಿ ಬಳಿ ಹೋಗಲು ಒಪ್ಪಲೇ ಇಲ್ಲ, ನೀರಿನಲ್ಲಿ ಹಿಂಡು ಹಿಂಡು ಮೀನುಗಳ ಆಕರ್ಷಣೆಯಿದ್ದರೂ! ಕಾರಣ ಆ ಸ್ಥಳ ಸರಿಯಾದ ನಿರ್ವಹಣೆಯಿಲ್ಲದೆ ಗಲೀಜಾಗಿತ್ತು. ದೈವ ಸನ್ನಿಧಿಯಾದ್ದರಿಂದ ಚಪ್ಪಲಿ ಧರಿಸಲು ನಿರ್ಬಂಧವಿತ್ತು. ಎತ್ತಿಕೊಂಡೇ ಇರುತ್ತೇವೆ ಎಂಬ ವಾಗ್ದಾನದ ನಂತರವಷ್ಟೇ ಅವನು ಒಳಬರಲು ಒಪ್ಪಿದ್ದು!

ನನ್ನ ಕಾರಿನ ಸ್ಟಿಯರಿಂಗ್‌ಗೆ ಅಂಟಿಸಿದ್ದ ಸ್ಟಿಕ್ಕರ್ ಗಮ್ ಹೋಗಿ ಎದ್ದಿತ್ತು. ಪಟ್ಟನೆ ಅದನ್ನು ಕಿತ್ತವನೇ ಕಸ ಎಲ್ಲಿ ಹಾಕಬೇಕೆಂದು ತೋಚದೆ ನನ್ನ ಮುಖವನ್ನೇ ದಿಟ್ಟಿಸತೊಡಗಿದ್ದ. ಬೇರೆ ಮಕ್ಕಳಾಗಿದ್ದರೆ ತಮಾಷೆಗೆಂದು ಎಳೆದರೂ ಕಾರೊಳಗೊ ಇಲ್ಲಾ ರಸ್ತೆಗೊ ಬಿಸಾಡುತ್ತಿದ್ದರು. ನಮ್ಮೊಡನಿದ್ದ ಎರಡು–ಮೂರು ದಿನಗಳಲ್ಲಿ ಸ್ವಲ್ಪವೂ ರಾಜಿಯಾಗದ ಸ್ವಚ್ಛತೆಯ ಆ ಕಾಳಜಿ ಕಂಡು ನಿಜಕ್ಕೂ ಬೆರಗಾಗಿದ್ದೆ!

ಇದೆಲ್ಲಾ ಅಲ್ಲಿನ ಕೆ.ಜಿ ಶಾಲೆಯಲ್ಲಿ ಕಲಿತ ಪಾಠ. ವಿಷಯವನ್ನು ಎಳೆಯರ ಮನಸ್ಸಿಗೆ ನಾಟಿಸಿದರೆ ಫಲಿತಾಂಶ ಹೇಗಿರಬಹುದು ಎಂಬುದಕ್ಕೆ ಸಾಕ್ಷಿಯಾಗಿತ್ತು ಈ ವರ್ತನೆ. ನಮ್ಮ ಶಾಲಾ ಪಠ್ಯದಲ್ಲಿ ಏನಿರಬೇಕು, ಏನಿರಬಾರದು ಎಂದು ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಾ ವಿವಾದದ ಕಿಡಿ ಹೊತ್ತಿರುವ ಈ ಹೊತ್ತಿನಲ್ಲಿ, ಬದುಕಿನ ಪಾಠಗಳ ಮಹತ್ವವರಿತು ಪರಿಣಾಮಕಾರಿಯಾಗಿ ಬೋಧಿಸಿದರೆ ಸಕಾರಾತ್ಮಕ ಪರಿವರ್ತನೆ ಸಾಧ್ಯ ಎಂಬುದಕ್ಕೆ ನಿದರ್ಶನ ಸಿಕ್ಕಿದ್ದು ಆ ಬಾಲಕನ ಸಾಂಗತ್ಯದಲ್ಲಿ.

ಕಸದ ನಿರ್ವಹಣೆ, ಆರೋಗ್ಯ, ನೈರ್ಮಲ್ಯ, ಸ್ವಚ್ಛತೆಯ ಕುರಿತಾಗಿ ವಯಸ್ಕರಿಗೆ ಪದೇ ಪದೇ ಹೇಳಿದ್ದನ್ನೇ ಹೇಳಿ ಸಮಯ, ಶ್ರಮ ವ್ಯರ್ಥವಾಗಿಸುವುದಕ್ಕಿಂತ ಈ ವಿಚಾರಗಳನ್ನು ಬಿತ್ತಬೇಕಿರುವುದು ಚಿಣ್ಣರ ಹದದ ಮನದಂಗಣದಲ್ಲಿ. ಶಾಲೆಯಲ್ಲಿ ಗುರುಗಳ ಮೂಲಕ ಮನದಟ್ಟು ಮಾಡಿಸಿದ್ದು ಖಂಡಿತವಾಗಿಯೂ ಸಕಾರಾತ್ಮಕ ಫಲಿತಾಂಶ ತರಬಲ್ಲದು. ಈ ಮಕ್ಕಳೇ ತಮ್ಮ ತಮ್ಮ ಮನೆಯಲ್ಲಿ ಶಿಕ್ಷಕರಾಗಿ ಪೋಷಕರಿಗೆ ತಿಳಿಹೇಳುತ್ತಾ ಅವರ ವರ್ತನೆಯನ್ನು ಬದಲಾಯಿಸಬಲ್ಲರು.

ಹವಾಮಾನದ ಏರುಪೇರಿನಿಂದಾಗಿ ಸಾಂಕ್ರಾಮಿಕ ಕಾಯಿಲೆಗಳಿಗೀಗ ಸುಗ್ಗಿ. ರೋಗಾಣುಗಳಿಗಿದು ಸುವರ್ಣ ಕಾಲ. ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವ ನಡವಳಿಕೆಯಿಂದಾಗಿ ಸೊಳ್ಳೆ, ನೊಣಗಳಂತಹ ಕೀಟಗಳ ಸಂತಾನೋತ್ಪತ್ತಿ ಹೆಚ್ಚುತ್ತಿದೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಡೆಂಗಿ ಜ್ವರದ ಪ್ರಕರಣಗಳು ದಾಖಲೆಯ ಮಟ್ಟಕ್ಕೆ ಏರುತ್ತಿವೆ. ಚಿಕೂನ್‌ಗುನ್ಯಾ ರೋಗಿಗಳ ಸಂಖ್ಯೆಯೂ ಮೇಲ್ಮುಖವಾಗಿದೆ.

ಎರಡು ವರ್ಷಗಳಿಂದ ಕೊರೊನಾ ಪಿಡುಗಿನ ಕಾರಣ ದೊಡ್ಡ ಸಭೆ, ಸಮಾರಂಭ, ಕಾರ್ಯಕ್ರಮಗಳಿಗೆ ತುಸು ಬ್ರೇಕ್ ಬಿದ್ದಿತ್ತು. ಸ್ವಚ್ಛತೆ, ಸರಳ ಜೀವನದ ಜೊತೆಗೆ ಸಾಂಪ್ರದಾಯಿಕ ಆಹಾರಪದ್ಧತಿ, ಮನೆಮದ್ದುಗಳ ಮಹತ್ವವನ್ನು ಸಾಂಕ್ರಾಮಿಕ ಸಾರಿತ್ತು. ಈಗ ಕಾಯಿಲೆ ತುಸು ಹಿಂದೆ ಸರಿಯುತ್ತಿದ್ದಂತೆಯೇ ಎಲ್ಲೆಂದರಲ್ಲಿ ಉಗುಳುವ, ಗಲೀಜು ಮಾಡುವ ಮನಃಸ್ಥಿತಿ ಮರುಕಳಿಸಿದೆ. ಮದುವೆ, ಮುಂಜಿ, ಗೃಹಪ್ರವೇಶ, ನಾಮಕರಣ, ಹರಕೆಯಾಟ, ಹೋಮ, ಹವನ, ಜೀರ್ಣೋದ್ಧಾರವೆಂದೆಲ್ಲ ಸಮಾರಂಭಗಳ ಭರಾಟೆ ಏರಿದೆ. ಕಾರ್ಯಕ್ರಮ ಮುಗಿದ ಮೇಲೆ ಆ ಸ್ಥಳದಲ್ಲಿ ಸಾಕ್ಷಾತ್ ನರಕ ದರ್ಶನ! ಪ್ಲಾಸ್ಟಿಕ್ ಬಾಟಲ್, ಲೋಟ, ಕವರ್‌ಗಳು, ಐಸ್‌ಕ್ರೀಮ್ ಕಪ್‌ಗಳು ಚೆಲ್ಲಾಪಿಲ್ಲಿಯಾಗಿ ಬೀಸುವ ಗಾಳಿಗೆ ಚದುರುವ ದೃಶ್ಯ ಈಗ ಹಳ್ಳಿ ಹಳ್ಳಿಯಲ್ಲೂ ಸಾಮಾನ್ಯ. ಅವಶೇಷಗಳಲ್ಲಿ ಅಳಿದುಳಿದ ಸಿಹಿಯ ಆಸೆಗಾಗಿ ತ್ಯಾಜ್ಯ ನುಂಗುವ ಅಮಾಯಕ ಜಾನುವಾರುಗಳ ಜೀವಕ್ಕೇ ಕುತ್ತು. ನೀರು ಸೇರುವ ಅಪಾಯಕಾರಿ ಕಸದಿಂದಾಗಿ ಜಲಚರಗಳಿಗೂ ಕಂಟಕ.



ಎಷ್ಟೇ ಸ್ವಚ್ಛತಾ ಆಂದೋಲನಗಳನ್ನು ಮಾಡಿದರೂ, ಶುದ್ಧಿ ಕಾರ್ಯಕ್ಕಾಗಿ ಸಾವಿರಾರು ಕೋಟಿಗಳನ್ನು ವ್ಯಯಿಸಿದರೂ, ದಂಡ, ಶಿಕ್ಷೆಯ ಕಾಯ್ದೆಗಳನ್ನು ರೂಪಿಸಿದರೂ ಫಲಿತಾಂಶ ಕಳಪೆಯೇ. ಆಗಬೇಕಿರುವುದು ಮನಃಪರಿವರ್ತನೆ. ಬೆಳೆದವರ ನಡವಳಿಕೆ ಬದಲಾಯಿಸುವುದು ಖಂಡಿತಾ ಕಷ್ಟ. ಬಾಲ್ಯಾವಸ್ಥೆಯಲ್ಲಿಯೇ ಮೌಲ್ಯಗಳನ್ನು ಬಿತ್ತಬೇಕು. ಅಂಗನವಾಡಿ, ನರ್ಸರಿಯಿಂದ ಪ್ರೌಢಶಾಲಾ ಹಂತದವರೆಗೆ ಪ್ರತಿವರ್ಷವೂ ಇಂತಹ ಪಠ್ಯಗಳು ವಿವಿಧ ರೂಪದಲ್ಲಿ ಬರಬೇಕು. ಎಳೆಯ ಮನಗಳಲ್ಲಿ ಬಿತ್ತುವ ಬೀಜಗಳು ಮೊಳಕೆಯೊಡೆದು ಪೈರಾದಾಗ ಮಾತ್ರ ಭವಿಷ್ಯ ಸಹನೀಯವಾದೀತು.

ಹೊಸ ಹೊಸ ಕಾಯಿಲೆಗಳು ಅವತರಿಸುತ್ತಿರುವ, ಹಳೆಯ ಪಿಡುಗುಗಳು ಹೊಸ ರೂಪದಲ್ಲಿ ಕಾಡುತ್ತಿರುವ ಈ ಹೊತ್ತಿನಲ್ಲಿ ಪರಿಸರದ ಶುಚಿತ್ವ ಕಾಪಾಡಿಕೊಳ್ಳುವುದು ಬಲು ಮುಖ್ಯ. ಮಕ್ಕಳನ್ನು ಮುಂದಿಟ್ಟುಕೊಂಡು ಮಾಲಿನ್ಯದ ವಿರುದ್ಧದ ಯುದ್ಧ ಗೆಲ್ಲುವಂತಹ ಅನಿವಾರ್ಯ ಎದುರಾಗಿರುವುದು ನಿಜಕ್ಕೂ ದುರದೃಷ್ಟಕರ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಹಳೆಯ ಪಠ್ಯಪುಸ್ತಕದ ಕಥನಕ್ಕೆ ಸವಾಲು

ಸಿದ್ದರಾಮಯ್ಯನವರ ಇತ್ತೀಚಿನ ಮಾತು (ಪ್ರ.ವಾ., ಮೇ 29) ಓದಿದೆ. ವಿಷಯಗಳನ್ನು ಬೆರೆಸುವುದು ರಾಜಕಾರಣಿಗಳ ಹಳೇ ತೆವಲು. ಪಠ್ಯಪುಸ್ತಕ, ಆರ್‌ಎಸ್‌ಎಸ್, ನೆಹರೂ, ಕುವೆಂಪು ಇವುಗಳ ಮಧ್ಯೆ ಆರ್ಯ-ದ್ರಾವಿಡ ಏಕೆ ಬಂತೋ ಗೊತ್ತಾಗುತ್ತಿಲ್ಲ. ಆರ್ಯನ್ ಖಾನ್- ರಾಹುಲ್ ದ್ರಾವಿಡ್ ಅವರನ್ನೂ ಎಳೆದುತಂದರೆ ಆಶ್ಚರ್ಯವಿಲ್ಲ! ದ್ರಾವಿಡರು ಭಾರತದ ಮೂಲನಿವಾಸಿಗಳು, ಆರ್ಯರು ಹೊರಗಿನಿಂದ ವಲಸೆ ಬಂದವರು ಎಂಬ ಹಳೆಯ ಪಠ್ಯಪುಸ್ತಕದ ಕಥನಕ್ಕೆ ಕೆಲವು ಪುರಾತತ್ವಶಾಸ್ತ್ರಜ್ಞರು, ಇತಿಹಾಸ ಅಧ್ಯಯನಕಾರರು ಸವಾಲು ಎಸೆದಿದ್ದಾರೆ.

ಆರ್ಯ ಪದಕ್ಕೆ ಗೌರವಾರ್ಹ ಎಂಬುದರ ಜತೆಗೆ ಬೇರೆ ಅರ್ಥಗಳೂ ಇವೆ. ಆರ್ಯಪುತ್ರ ಪತಿಯನ್ನು ಸಂಬೋಧಿಸುವ ಪರಿಯಾಗಿತ್ತು. ಆರ್ಯಾವರ್ತ ಹಿಮಾಲಯದಿಂದ ಹಿಡಿದು ವಿಂಧ್ಯ ಪರ್ವತಗಳವರೆಗಷ್ಟೆ ಇತ್ತು. ಆರ್ಯ, ಆರಾಧ್ಯ ಒಂದು ಪಂಗಡ (ಸರ್‌ನೇಮ್) ಕೂಡ. ಮಾನವನ ಜೀನೋಮ್ ಪೂರ್ಣ ಡೀಕೋಡ್ ಆಗಿದ್ದು ಕಳೆದ ವರ್ಷವಷ್ಟೆ. ಈ ಬಗೆಯ ವಿಶ್ಲೇಷಣೆ ಸಿಂಧೂ ಕಣಿವೆ ನಾಗರಿಕತೆಯ ಬಗೆಗಿದ್ದ ಕೆಲವು ಕಲ್ಪನೆಗಳನ್ನು ಮರುಪರಿಶೀಲಿಸಲು ಪ್ರೇರೇಪಿಸಿದೆ. ದಾಖಲಿತ ಇತಿಹಾಸದಲ್ಲೂ ತೆರಪುಗಳು ಇರುತ್ತವೆ. ಉದಾಹರಣೆಗೆ, ಮೌರ್ಯ ಹಾಗೂ ಗುಪ್ತರ ಕಾಲದ ನಡುವೆ ಡೆಕ್ಕನ್ (ದಖ್ಖನ್) ಅರಸರು ಪ್ರಬಲರಾಗಿದ್ದುದು ಹೈಲೈಟ್ ಆಗಿಲ್ಲ. ಒಟ್ಟಾರೆ ಇಂತಹ ಐಡೆಂಟಿಟಿ ಚಾಲೆಂಜ್‌ಗಳನ್ನು ರಾಜಕಾರಣಿಗಳು ಯಾವುದೋ ಬೇರೆ ವಿವಾದಗಳ ನಡುವೆ ತರುವುದು ತರವಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಯಾರ ಇತಿಹಾಸ ಎಂದು ಕೇಳಬೇಕಾಗುತ್ತದೆ

'ನಮ್ಮ ದೇಶದ ಬಹುಸಂಖ್ಯಾತ ಜನಸಮುದಾಯದಲ್ಲಿ ಆಗಿಂದಾಗ್ಗೆ ಜಾತಿ ಜಾತಿಗಳ ನಡುವೆ ಸಣ್ಣಪುಟ್ಟ ಜಗಳಗಳು ನಡೆಯುತ್ತ ಬಂದಿದ್ದರೂ ಒಟ್ಟಾರೆ ಎಲ್ಲರೂ ಎಲ್ಲರ ಜತೆ ಸೌಹಾರ್ದಯುತವಾಗಿ ಬದುಕುತ್ತ ಬಂದಿರುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ' ಎಂಬ ಡಾ. ಆರ್.ಲಕ್ಷ್ಮೀನಾರಾಯಣ ಅವರ ನುಡಿಗಳನ್ನು (ಸಂಗತ, ಮೇ 30) ಓದಿ ಅಚ್ಚರಿಯ ಜತೆಗೆ ಆಘಾತವಾಯಿತು. ಇಂಡಿಯಾ ದೇಶದ ಇತಿಹಾಸದ ಉದ್ದಕ್ಕೂ ಇಂದಿನ ತನಕವೂ ದುಡಿಯುವ ವರ್ಗದ ಕೋಟಿಗಟ್ಟಲೆ ಜನರು ಜಾತಿಯೊಂದರ ಕಾರಣದಿಂದಲೇ ಅನ್ನ, ಬಟ್ಟೆ, ವಸತಿ, ವಿದ್ಯೆ ಮತ್ತು ಆರೋಗ್ಯದಿಂದ ವಂಚಿತರಾಗಿ ಹಸಿವು, ಬಡತನ ಮತ್ತು ಜಾತಿನಿಂದನೆಯ ಅಪಮಾನದಲ್ಲಿ ಬೇಯುತ್ತಿದ್ದಾರೆ. 'ಸೌಹಾರ್ದಯುತವಾಗಿ ಬದುಕುವುದು ಎಂದರೆ ದುರ್ಬಲ ಜಾತಿಯ ಜನರು ತಮ್ಮ ದೀನಸ್ಥಿತಿಯನ್ನು ಒಪ್ಪಿಕೊಂಡು, ತಮ್ಮ ಜಾತಿ ಸಮುದಾಯಗಳಿಗೆ ಹಾಕಿರುವ ವಿಧಿನಿಷೇಧಗಳನ್ನು ಮೀರದೆ, ಮೌನದಿಂದಲೇ ಎಲ್ಲ ಬಗೆಯ ಸಂಕಟಗಳನ್ನೂ ಅನುಭವಿಸುವುದು' ಎಂದು ಅರ್ಥ.

ಜಾತಿಯ ಕಟ್ಟುಪಾಡುಗಳ ಎಲ್ಲೆಯನ್ನು ಮೀರಿದರೆಂಬ ಕಾರಣಕ್ಕಾಗಿ ದೇಶದ ಉದ್ದಗಲದಲ್ಲಿ ಪ್ರಭಾವಿ ಜಾತಿಯವರು ದುರ್ಬಲ ಜಾತಿಯವರ ಮೇಲೆ ಹಲ್ಲೆ, ಅತ್ಯಾಚಾರ, ಕೊಲೆ, ಸುಲಿಗೆಯನ್ನು ಮಾಡುತ್ತಿರುವ ವರದಿಗಳು ನಿರಂತರವಾಗಿ ವರದಿಯಾಗುತ್ತಲೇ ಇವೆ. ಕಣ್ಣ ಮುಂದೆ ಇಷ್ಟೆಲ್ಲಾ ನಡೆಯುತ್ತಿರುವುದನ್ನು ನೋಡುತ್ತ, ಕಿವಿಯಿಂದ ಕೇಳುತ್ತ, ಮತ್ತೆ ಮತ್ತೆ 'ಭಾರತೀಯರಾದ ನಾವು ಸೌಹಾರ್ದಯುತವಾಗಿ ಬದುಕುತ್ತಿದ್ದೇವೆ' ಎಂದರೆ ಅದನ್ನು ಯಾರ ಇತಿಹಾಸ ಎಂದು ಕೇಳಬೇಕಾಗುತ್ತದೆ.

ಸಿ.ಪಿ. ನಾಗರಾಜ, ಬೆಂಗಳೂರು

ವೈಯಕ್ತಿಕ ಟೀಕೆ ಎಷ್ಟು ಸರಿ?

ಪಠ್ಯಪುಸ್ತಕ ವಿವಾದ ಇತ್ತೀಚೆಗೆ ತಾರಕಕ್ಕೇರಿ, ಮಕ್ಕಳ ಪುಸ್ತಕಗಳನ್ನು ಹೊಕ್ಕ ಹೊಲಸು ರಾಜಕೀಯ ರಾಡಿ ಎಬ್ಬಿಸುತ್ತಿದೆ. ಇಲ್ಲಿ ಪಠ್ಯಪುಸ್ತಕ ಪರಿಷ್ಕರಣೆ, ಪುನರ್‌ಪರಿಷ್ಕರಣೆಯು ಆಳುವ ಪಕ್ಷಗಳು ಬದಲಾದಂತೆ ಘಟಿಸುವ ಸಾಮಾನ್ಯ ವಿದ್ಯಮಾನಗಳಾಗುತ್ತಿವೆ. ಹಾಗಾಗಿ ಅವುಗಳನ್ನು ಮುಂದಿನ ದಿನಗಳಲ್ಲಿ ಪಠ್ಯಪುಸ್ತಕಗಳು ಎನ್ನಬೇಕೋ ಪಕ್ಷ ಪ್ರಣಾಳಿಕೆಗಳು ಎನ್ನಬೇಕೋ ತಿಳಿಯುತ್ತಿಲ್ಲ. ಈ ಪಠ್ಯಪುಸ್ತಕದ ವಾದ ವಿವಾದಗಳೇನೇ ಇರಲಿ ಅದರದ್ದೇ ಆದ ಚೌಕಟ್ಟಿನ ಒಳಗೆ ಅದನ್ನು ಬಗೆಹರಿಸಿಕೊಳ್ಳಬೇಕಿದ್ದುದು ಸರ್ಕಾರದ ಘನತೆಯಾಗಿತ್ತು. ಆ ಘನತೆಯನ್ನು ಗಾಳಿಗೆ ತೂರಿದ ಸರ್ಕಾರ, ಅದನ್ನು ಹಾದಿ ಬೀದಿಯ ಜಗಳವನ್ನಾಗಿಸಿ, ಈ ನಾಡಿನ ಪ್ರಜ್ಞಾವಂತ ಆಸ್ತಿಯೊಂದನ್ನು ಕೇವಲವಾಗಿ ನಡೆಸಿಕೊಳ್ಳುತ್ತಾ ಅಕ್ಷರಶಃ ಬಾಲಿಶತನವನ್ನು ಮೆರೆಯುತ್ತಿದೆ. ಬರಗೂರು ರಾಮಚಂದ್ರಪ್ಪ ಅವರು ತಾವಾಗಿಯೇ ಪಠ್ಯ ಪರಿಷ್ಕರಣೆಗೆ ಮುಂದಾದವರಲ್ಲ. ಸರ್ಕಾರವೊಂದರ ಕೋರಿಕೆಯ ಮೇಲೆ 172 ಜನ ತಜ್ಞರನ್ನೊಳಗೊಂಡ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಸರ್ವಾಧ್ಯಕ್ಷರಾದವರು. ಇದನ್ನು ಅವರು ಆರಂಭದಲ್ಲೇ ಸ್ಪಷ್ಟಪಡಿಸಿದ್ದಾರೆ. ಆದಾಗ್ಯೂ ಅವರನ್ನು ಗುರಿಯನ್ನಾಗಿಸಿಕೊಂಡು ವೈಯಕ್ತಿಕವಾಗಿ ಟೀಕಿಸುತ್ತಿರುವುದು ಎಷ್ಟು ಸಮಂಜಸ?

ಡಾ. ಆಶಾರಾಣಿ ಕೆ., ತುಮಕೂರು

ಕೋವಿಡ್: ಎಲ್ಲ ಸಮಸ್ಯೆಗಳಿಗೆ ನೇರ ಹೊಣೆಯೇ?

ಕೋವಿಡ್‌ನಿಂದಾಗಿ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ತಗ್ಗಿದೆ, ಅಶಿಸ್ತು ಮತ್ತು ಆಕ್ರಮಣಕಾರಿ ಪ್ರವೃತ್ತಿ ಹೆಚ್ಚಾಗಿದೆ ಹಾಗೂ ಕೋವಿಡ್ ನಂತರ ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚಿವೆ ಎಂದು ವರದಿಯಾಗಿದೆ (ಪ್ರ.ವಾ., ಮೇ 29). ಬಹಳ ಮಂದಿ ತಿಳಿದಿರುವಂತೆ ಮಕ್ಕಳ ಈ ಸಮಸ್ಯೆಗಳಿಗೆ ನೇರ ಹೊಣೆ ಕೋವಿಡ್ ಅಲ್ಲ, ಈ ಹೊಣೆಯನ್ನು ಮೊಬೈಲ್ ಹೊರಬೇಕಾಗುತ್ತದೆ. ಯಾವ ಮೊಬೈಲ್‌ಗಳು ಮಕ್ಕಳ ಕೈಗೆ ಸಿಗದಂತೆ ಮನೆಯಲ್ಲಿ ಪೋಷಕರು ಹಾಗೂ ಶಾಲೆ- ಕಾಲೇಜುಗಳಲ್ಲಿ ಶಿಕ್ಷಕರು ಎಚ್ಚರ ವಹಿಸಿದ್ದರೋ ಅದೇ ಮೊಬೈಲನ್ನು ಕೋವಿಡ್‌ನಿಂದ ಆನ್‌ಲೈನ್ ತರಗತಿಗಳು ಪ್ರಾರಂಭವಾದ ಕಾರಣದಿಂದ ಮಕ್ಕಳ ಕೈಗೆ ಕೊಡುವುದು ಅನಿವಾರ್ಯವಾಯಿತು. ಇದರಿಂದ ಮಕ್ಕಳು ಮೊಬೈಲ್‌ಗಳನ್ನು ನಿರಾತಂಕವಾಗಿ ಬಳಸುವ ಅವಕಾಶ ಪಡೆದರು, ಜೊತೆಗೆ ಅವುಗಳನ್ನು ಬಳಸಲು ಬಹಳಷ್ಟು ಸಮಯವೂ ಅವರಿಗೆ ದೊರೆಯಿತು.

ಅತ್ಯಂತ ಅದ್ಭುತ ವೈಜ್ಞಾನಿಕ ಆವಿಷ್ಕಾರವಾದ ಮೊಬೈಲ್‌ನ ಸದ್ಬಳಕೆಯಿಂದ ಜ್ಞಾನ ವೃದ್ಧಿಸಿಕೊಳ್ಳುವ ಎಲ್ಲ ಅವಕಾಶಗಳು ಇದ್ದಾಗ್ಯೂ ಅದನ್ನು ಕೆಲ ಮಕ್ಕಳು, ಯುವಕ–ಯುವತಿಯರು ದುರ್ಬಳಕೆ ಮಾಡಿಕೊಂಡಿರುವುದೇ ಹೆಚ್ಚು. ಮೊಬೈಲ್ ಬಳಕೆ ಮಕ್ಕಳನ್ನೂ ಒಳಗೊಂಡಂತೆ ಎಲ್ಲರಿಗೂ ಒಂದು ಚಟವಾಗಿ ಪರಿಣಮಿಸಿರುವುದರಿಂದ ಅದರಿಂದ ಯಾರಿಗೂ ಬಿಡುಗಡೆಯಂತೂ ಇಲ್ಲ. ಹಾಗಾಗಿ ದುರ್ಬಳಕೆಯಿಂದ 'ಶಾಪ'ವಾಗಿರುವ ಮೊಬೈಲನ್ನು ಸದ್ಬಳಕೆಯಿಂದ 'ವರ'ವಾಗಿ ಪರಿವರ್ತಿಸಿಕೊಳ್ಳುವುದೊಂದೇ ಈಗ ಉಳಿದಿರುವ ದಾರಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಧಾರ್ ದತ್ತಾಂಶ ರಕ್ಷಣೆ
ಮತ್ತೆ ಮೂಡಿದೆ ದಿಗಿಲು

ಪ್ರಜಾವಾಣಿ ವಾರ್ತೆ

ಭಾರತೀಯ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಆಧಾರ್ ಪ್ರತಿಯನ್ನು ಹಂಚಿಕೊಳ್ಳುವ ವಿಚಾರದಲ್ಲಿ ಎರಡೇ ದಿನದಲ್ಲಿ ನಿಲುವು ಬದಲಾಯಿಸಿಕೊಂಡು ಸುದ್ದಿಯಲ್ಲಿದೆ. ಆಧಾರ್ ಪ್ರತಿಯನ್ನು ಎಲ್ಲ ಸಂಸ್ಥೆಗಳಿಗೆ ನೀಡಬೇಡಿ, ಅದು ದುರುಪಯೋಗವಾಗುವ ಅಪಾಯ ಇದೆ ಎಂದು ಯುಐಡಿಎಐ ಶುಕ್ರವಾರ ಎಚ್ಚರಿಸಿತ್ತು. ಆದರೆ, ಈ ಎಚ್ಚರಿಕೆಯನ್ನು ಯುಐಡಿಎಐ ಭಾನುವಾರ ಹಿಂದಕ್ಕೆ ಪಡೆದಿದೆ. ಮೊದಲು ನೀಡಿದ್ದ ಎಚ್ಚರಿಕೆಯು ತಪ್ಪು ಗ್ರಹಿಕೆಗೆ ಕಾರಣವಾಗಬಹುದು ಎಂಬುದು ಎಚ್ಚರಿಕೆಯನ್ನು ಹಿಂದಕ್ಕೆ ಪಡೆಯಲು ಕಾರಣ ಎಂದು ಹೇಳಿದೆ.

ಯುಐಡಿಎಐನ ಕ್ರಮವು ಆಧಾರ್ ದತ್ತಾಂಶದ ಸುರಕ್ಷತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದೆ. ಭಾರತದಲ್ಲಿ ಸಶಕ್ತ ಮತ್ತು ಪರಿಣಾಮಕಾರಿಯಾದ ವೈಯಕ್ತಿಕ ದತ್ತಾಂಶ ರಕ್ಷಣಾ ವ್ಯವಸ್ಥೆಯಾಗಲಿ ಕಾಯ್ದೆಯಾಗಲಿ ಇಲ್ಲ. ಹಾಗಿದ್ದರೂ ದೇಶದ ಬಹುತೇಕ ಎಲ್ಲ ಜನರ ದತ್ತಾಂಶವನ್ನು ಯುಐಡಿಎಐ ಸಂಗ್ರಹಿಸಿದೆ. ದತ್ತಾಂಶದ ಸುರಕ್ಷತೆಯ ಕುರಿತು ಆಧಾರ್ ಅನುಷ್ಠಾನಗೊಳ್ಳುವ ಮೊದಲೇ ದೇಶದಲ್ಲಿ ಭಾರಿ ಚರ್ಚೆ ನಡೆದಿತ್ತು. ಖಾಸಗಿತನದ ಹಕ್ಕಿನ ಹೋರಾಟಗಾರರು ಕಳವಳ ವ್ಯಕ್ತಪಡಿಸಿದ್ದರು.

ಆದಾಯ ತೆರಿಗೆ ಇಲಾಖೆಯ ಕಾಯಂ ಖಾತೆ ಸಂಖ್ಯೆಯ (ಪ್ಯಾನ್) ಜತೆಗೆ ಆಧಾರ್ ಸಂಖ್ಯೆಯ ಜೋಡಣೆ ಕಡ್ಡಾಯಗೊಳಿಸಲಾಗಿದೆ. ಬ್ಯಾಂಕ್ ಖಾತೆ, ದೂರವಾಣಿ ಸಂಖ್ಯೆಯ ಜತೆಗೆ ಆಧಾರ್ ಸಂಖ್ಯೆ ಜೋಡಿಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವವನ್ನೂ ಸರ್ಕಾರ ಹೊಂದಿತ್ತು. ಆದರೆ, ಇದನ್ನು ಕಡ್ಡಾಯ ಮಾಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಮತದಾರರ ಗುರುತು ಚೀಟಿಯ ಜತೆಗೆ ಆಧಾರ್ ಜೋಡಣೆಯ ಬಗೆಗಿನ ಚರ್ಚೆ ಈಗ ಕಾವು ಪಡೆದುಕೊಂಡಿದೆ.

ಹೋಟೆಲ್‌ನಲ್ಲಿ ಕೊಠಡಿ ಕಾಯ್ದಿರಿಸುವುದರಿಂದ ಹಿಡಿದು ಪ್ರತಿಯೊಂದಕ್ಕೂ ಆಧಾರ್ ಪ್ರತಿಯನ್ನು ಕೇಳುವ ಪರಿಪಾಟ ಇದೆ. ಪೇಮೆಂಟ್ಸ್ ಬ್ಯಾಂಕ್‌ಗಳಿಗೂ 'ನಿಮ್ಮ ಗ್ರಾಹಕರನ್ನು ತಿಳಿಯಿರಿ' (ಕೆವೈಸಿ) ದಾಖಲೆಯಾಗಿ ಆಧಾರ್ ಅನ್ನು ಕೇಳಲಾಗುತ್ತಿದೆ. ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಮತ್ತು ಪ್ಯಾನ್‌ಗೆ ಮಾತ್ರ ಆಧಾರ್ ಕಡ್ಡಾಯ. ಗುರುತಿನ ದಾಖಲೆಯಾಗಿ ಇತರೆಡೆಯೂ ಆಧಾರ್ ನೀಡಬಹುದು. ಆಧಾರ್ ದತ್ತಾಂಶ ಅತ್ಯಂತ ಸುರಕ್ಷಿತ ಎಂದು ಯುಐಡಿಎಐ ಹೇಳಿಕೊಂಡು ಬಂದಿದೆ. ಆದರೆ, ಶುಕ್ರವಾರದ ಎಚ್ಚರಿಕೆಯು ಜನರಲ್ಲಿ ಕಳವಳ ಮೂಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಜನರು ತಮ್ಮ ಆತಂಕ ತೋಡಿಕೊಂಡಿದ್ದಾರೆ.

'ಆಧಾರ್ ದತ್ತಾಂಶದ ಬಹುದೊಡ್ಡ ಕಳ್ಳತನ ನಡೆದಿರುವ ಕಾರಣಕ್ಕೆ ಸರ್ಕಾರ ಎಚ್ಚರಿಕೆ ನೀಡಿರಬೇಕು. ಸರ್ಕಾರವು ತನ್ನ ಅತ್ಯಂತ ದೊಡ್ಡ ಮತ್ತು ಅತ್ಯಂತ ನೆಚ್ಚಿನ ಯೋಜನೆಯ ಬಗ್ಗೆ ಇಂತಹ ಎಚ್ಚರಿಕೆ ನೀಡುವುದನ್ನು ಊಹಿಸಿಕೊಳ್ಳಲೇ ಆಗದು' ಎಂದು ಆರ್. ಬಾಲಕೃಷ್ಣನ್ ಎಂಬವರು ಟ್ವೀಟ್ ಮಾಡಿದ್ದಾರೆ.

'ಪ್ರತಿಯೊಂದು ಸೇವೆಗೂ ಆಧಾರ್ ಅನ್ನು ಕಡ್ಡಾಯ ಮಾಡಿದ ಬಳಿಕ, ಯಾವುದೇ ಸಂಸ್ಥೆಯ ಜತೆಗೆ ಆಧಾರ್ ಪ್ರತಿ ಹಂಚಿಕೊಳ್ಳಬೇಡಿ, ಅದು ದುರುಪಯೋಗ ಆಗಬಹುದು ಎಂದು ಸರ್ಕಾರ ಹೇಳಿದೆ. ನಂದನ್ ನಿಲೇಕಣಿ ಅವರು ಹಲವು ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ' ಎಂದು ಸಮೀರ್ ರಾಯ್ ಎಂಬವರು ಟ್ವೀಟ್ ಮಾಡಿದ್ದಾರೆ.

'ಹೋಟೆಲ್ ರಿಸೆಪ್ಶನ್‌ನಿಂದ ಹಿಡಿದು ಆಸ್ಪತ್ರೆವರೆಗೆ ಎಲ್ಲರೂ ಆಧಾರ್ ಕೇಳುತ್ತಿದ್ದಾಗ ಯುಐಡಿಎಐ ನಿದ್ದೆ ಮಾಡುತ್ತಿತ್ತು. ಕಾರ್ಡ್‌ನ ಭದ್ರತೆಯ ವಿಚಾರದಲ್ಲಿ ಬಹುದೊಡ್ಡ ರಾಜಿ ಮಾಡಿಕೊಳ್ಳಲಾಗಿದೆ ಮತ್ತು ಕಾರ್ಡ್ ಈಗ ನಿರುಪಯುಕ್ತ ಎಂಬುದನ್ನು ಒಪ್ಪಿಕೊಳ್ಳಬೇಕು' ಎಂದು ಮಿಹಿರಾ ಸೂದ್ ಎಂಬವರು ಟ್ವೀಟ್ ಮಾಡಿದ್ದಾರೆ.

ಯಾವುದಕ್ಕೆ ಆಧಾರ್ ಕಡ್ಡಾಯ?

ಗರೀಬ್ ಕಲ್ಯಾಣ್, ಸಬ್ಸಿಡಿ ರೂಪದಲ್ಲಿ ಆಹಾರ ಧಾನ್ಯ ಪಡೆಯಲು, ಬೆಳೆ ವಿಮೆ ಸೇರಿದಂತೆ ಸರ್ಕಾರದ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಲಾಭ ಪಡೆದುಕೊಳ್ಳುವ ಫಲಾನುಭವಿಗಳಿಗೆ ಆಧಾರ್ ಗುರುತಿನ ಪತ್ರವನ್ನು ಕಡ್ಡಾಯ ಮಾಡಲಾಗಿದೆ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಪ್ಯಾನ್ ಕಾರ್ಡ್‌ಗೆ ಆಧಾರ್ ಜೊತೆ ಜೋಡಿಸಬೇಕು ಎಂಬ ನಿಯಮ ಮಾಡಲಾಗಿದೆ. ಬ್ಯಾಂಕ್ ಖಾತೆ ತೆರೆಯಲು, ಸಿಮ್ ಕಾರ್ಡ್ ಖರೀದಿಸಲು ಆಧಾರ್ ಕಡ್ಡಾಯವಲ್ಲ. ಖಾಸಗಿ ಕಂಪನಿಗಳು, ಶಾಲಾ ದಾಖಲಾತಿ, ಪ್ರವೇಶ ಪರೀಕ್ಷೆಗಳಿಗೆ ಆಧಾರ್ ಕಡ್ಡಾಯ ಅಲ್ಲ.

ದತ್ತಾಂಶ ರಕ್ಷಣೆ ತೊಡಕು



ಬಯೊಮೆಟ್ರಿಕ್ ಸೇರಿದಂತೆ ಆಧಾರ್ ಕಾರ್ಡ್‌ದಾರರ ವೈಯಕ್ತಿಕ ದತ್ತಾಂಶಗಳನ್ನು ಸಂಗ್ರಹಿಸಲು 2016ರ ಆಧಾರ್ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. 2018ರಲ್ಲಿ ಅದಕ್ಕೆ ಕೆಲವೊಂದು ತಿದ್ದುಪಡಿಗಳನ್ನೂ ತರಲಾಗಿದೆ. ಆದರೆ, ಕಾಯ್ದೆಯಲ್ಲಿ ಖಾಸಗಿತನವನ್ನು ರಕ್ಷಿಸಬಲ್ಲ ಅಂಶಗಳ ಕೊರತೆಯಿದೆ ಎಂಬ ಆರೋಪವಿದೆ. ಆಧಾರ್ ಮೂಲಕ ಸಂಗ್ರಹಿಸಲಾದ ಬಯೊಮೆಟ್ರಿಕ್ ದತ್ತಾಂಶಗಳ ಸುರಕ್ಷತೆ ಹಾಗೂ ಖಾಸಗಿತನ ಉಲ್ಲಂಘನೆ ಬಗ್ಗೆ ತೀವ್ರ ಕಳವಳ ವ್ಯಕ್ತವಾಗಿದ್ದರೂ, ಆಧಾರ್ ಕಾಯ್ದೆಯನ್ನು 2016ರಲ್ಲಿ ಜಾರಿಗೆ ತರಲಾಗಿತ್ತು. ಆದರೆ ಇದಕ್ಕೂ ಮುನ್ನ ಜಾರಿಗೆ ಬಂದ ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದಲ್ಲಿರುವ ದತ್ತಾಂಶ ಸುರಕ್ಷತೆಗೆ ಸಂಬಂಧಿಸಿದ ಕೆಲವು ನಿಯಮಗಳು ಮತ್ತು ಆಧಾರ್ ಕಾಯ್ದೆಯ ನಿಯಮಗಳ ನಡುವೆ ವಿರೋಧಾಭಾಸವಿದೆ.

ಐಟಿ ಕಾಯ್ದೆಯ 5(4)ನೇ ನಿಯಮದ ಪ್ರಕಾರ, ಯಾವ ಉದ್ದೇಶಕ್ಕೆ ವ್ಯಕ್ತಿಯ ಖಾಸಗಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆಯೋ, ಆ ಉದ್ದೇಶ ಈಡೇರುವ ಸಮಯದವರೆಗೆ ಮಾತ್ರ ಅದನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಆದರೆ ಆಧಾರ್ ಕಾಯ್ದೆಯು ಈ ವಿಚಾರದಲ್ಲಿ ಮೌನ ವಹಿಸಿದೆ. ಸಂಸ್ಥೆಗಳು ಎಷ್ಟು ದಿನಗಳವರೆಗೆ ವೈಯಕ್ತಿಕ ಮಾಹಿತಿಗಳನ್ನು ಇಟ್ಟುಕೊಳ್ಳಬಹುದು ಎಂಬುದನ್ನು ಕಾಯ್ದೆಯಲ್ಲಿ ಉಲ್ಲೇಖಿಸಿಲ್ಲ. ಸಂಗ್ರಹಿಸಲಾದ ದತ್ತಾಂಶವನ್ನು ಉದ್ದೇಶ ಈಡೇರಿದ ಬಳಿಕ ನಾಶಪಡಿಸಬೇಕು ಎಂದು ಐಟಿ ಕಾಯ್ದೆ ಹೇಳುತ್ತದೆ. ಆದರೆ ಎಲೆಕ್ಟ್ರಾನಿಕ್ ರೂಪದಲ್ಲಿ ಸಂಗ್ರಹಿಸಿದ ಈ ಮಾಹಿತಿಗಳನ್ನು ಸಂಪೂರ್ಣವಾಗಿ ನಾಶಪಡಿಸಲು ಸಾಧ್ಯವಾಗುವುದಿಲ್ಲ ಎಂಬ ಬಗ್ಗೆ ದೊಡ್ಡ ಚರ್ಚೆ ನಡೆದಿತ್ತು.

ಆಧಾರ್ ಬಳಕೆದಾರರ ಮಾಹಿತಿಯನ್ನು ಬಳಸಿಕೊಳ್ಳಲು ಇಚ್ಛಿಸುವ ಕಂಪನಿಯು ಹೆಸರು, ವಿಳಾಸ, ಉದ್ದೇಶವನ್ನು ನೀಡಬೇಕು ಎಂದು ಐಟಿ ಕಾಯ್ದೆಯ ನಿಯಮ 5(3) ಉಲ್ಲೇಖಿಸುತ್ತದೆ. ಆದರೆ ಆಧಾರ್ ಕಾಯ್ದೆಯು ಈ ಬಗ್ಗೆ ಮೌನವಾಗಿದೆ. ಕಾನೂನುಬದ್ಧ ಉದ್ದೇಶಕ್ಕೆ ಹಾಗೂ ಉದ್ದೇಶದ ಈಡೇರಿಕೆಗೆ ಅತ್ಯಗತ್ಯ ಎಂದಾದಲ್ಲಿ ಮಾತ್ರವೇ ಸೂಕ್ಷ್ಮ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಲು ಐಟಿ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಆದರೆ ಆಧಾರ್ ಕಾಯ್ದೆಯ 3(1) ನಿಯಮವು, ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಬಯೊಮೆಟ್ರಿಕ್ ಮಾಹಿತಿಯನ್ನು ನೀಡಿ ಆಧಾರ್ ಕಾರ್ಡ್ ಪಡೆದುಕೊಳ್ಳಬಹುದು ಎಂದು ತಿಳಿಸುತ್ತದೆ.

ಯಾವ ಉದ್ದೇಶಕ್ಕೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂಬ ವಿಚಾರವನ್ನು ಸಂಬಂಧಪಟ್ಟವರಿಗೆ ಬರಹ ಅಥವಾ ಫ್ಯಾಕ್ಸ್ ಮೂಲಕ ನೀಡಬೇಕು ಎಂದು ಐಟಿ ಕಾಯ್ದೆ ಪ್ರತಿಪಾದಿಸುತ್ತದೆ. ಆದರೆ ಸಂಬಂಧಿಸಿದ ವ್ಯಕ್ತಿಗೆ ಸಂಸ್ಥೆಯು ಮಾಹಿತಿ ನೀಡಬೇಕು ಎಂದು ಆಧಾರ್ ಕಾಯ್ದೆಯ ಸೆಕ್ಷನ್ 8 ಹೇಳುತ್ತದಾದರೂ, ಅದು ಬರಹ ಅಥವಾ ಇನ್ನಾವ ಸ್ವರೂಪದಲ್ಲಿರಬೇಕು ಎಂದು ಸ್ಪಷ್ಟವಾಗಿ ಉಲ್ಲೇಖಿಸುವುದಿಲ್ಲ.

ವ್ಯಕ್ತಿಗಳಿಂದ ಸಂಗ್ರಹಿಸಿದ ಖಾಸಗಿ ಮಾಹಿತಿಯನ್ನು ನಿರ್ವಹಣೆ ಮಾಡುವಲ್ಲಿ ಸಂಸ್ಥೆಯು ವಿಫಲವಾದರೆ ಅಥವಾ ಮಾಹಿತಿಯನ್ನು ಸೋರಿಕೆ ಮಾಡಿದರೆ, ಐದು ಕೋಟಿ ರೂಪಾಯಿಗೆ ಮೀರದಂತೆ ದಂಡ ವಿಧಿಸಬಹುದು ಎಂದು ಐಟಿ ಕಾಯ್ದೆ ಹೇಳುತ್ತದೆ. ಆಧಾರ್ ಕಾಯ್ದೆಯಲ್ಲಿ ದಂಡ ವಿಧಿಸುವ ಹಾಗೂ ಶಿಕ್ಷೆ ವಿಧಿಸುವ ಬಗ್ಗೆ ಉಲ್ಲೇಖವಿದೆ. ಆದರೆ, ವ್ಯಕ್ತಿಗೆ ಆಗಿರುವ ಹಾನಿಯ ಪ್ರಮಾಣದ ಬಗ್ಗೆ ಆಧಾರ್ ಕಾಯ್ದೆ ಮಾತನಾಡುವುದಿಲ್ಲ.

ಐಟಿ ಕಾಯ್ದೆಯ ಪ್ರಕಾರ, ಯಾವ ಉದ್ದೇಶಕ್ಕೆ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆಯೋ, ಅದೇ ಉದ್ದೇಶಕ್ಕೆ ಮಾತ್ರ ದತ್ತಾಂಶಗಳನ್ನು ಬಳಸಿಕೊಳ್ಳಬೇಕು. ಆದರೆ ಆಧಾರ್ ಕಾಯ್ದೆಯ 57ನೇ ಸೆಕ್ಷನ್‌ನಲ್ಲಿ ಈ ನಿಯಮ ಉಲ್ಲಂಘನೆಯಾಗಿತ್ತು. ಆಧಾರ್‌ನಡಿ ಸಂಗ್ರಹಿಸಿದ ವೈಯಕ್ತಿಕ ದತ್ತಾಂಶಗಳನ್ನು ಸರ್ಕಾರ ಅಥವಾ ಇತರರು ಬಳಸಿಕೊಳ್ಳುವುದಕ್ಕೆ ಅವಕಾಶ ನೀಡಿದ್ದ ಈ ಸೆಕ್ಷನ್ ಅನ್ನು ನಂತರ ಕೈಬಿಡಲಾಗಿದೆ.

133 ಕೋಟಿ	30,092	890
ಈವರೆಗೆ ಆಧಾರ್ ನೋಂದಣಿ ಮಾಡಿಕೊಂಡವರ ಸಂಖ್ಯೆ	ಆಧಾರ್ ನೋಂದಣಿ ಕೇಂದ್ರಗಳು	ಸಕ್ರಿಯ ನೋಂದಣಿ ಏಜೆನ್ಸಿಗಳು

ಇ-ಕೆವೈಸಿಯಲ್ಲಿ ಆಧಾರ್ ದುರ್ಬಳಕೆ?

ಆಧಾರ್ ಮಾಹಿತಿಯು ಇ-ಕೆವೈಸಿ ಹೆಸರಿನಲ್ಲಿ ದುರ್ಬಳಕೆಯಾದ ಕೆಲವು ನಿದರ್ಶನಗಳು ಇವೆ. 2017ರಲ್ಲಿ ಏರ್‌ಟೆಲ್ ದೂರಸಂಪರ್ಕ ಕಂಪನಿಯು 31 ಲಕ್ಷ ಗ್ರಾಹಕರ ₹190 ಕೋಟಿ ಎಲ್‌ಪಿಜಿ ಸಬ್ಸಿಡಿ ಹಣವನ್ನು ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್‌ಗೆ ವರ್ಗಾಯಿಸಿತ್ತು. ಗ್ರಾಹಕರ ಬ್ಯಾಂಕ್ ಖಾತೆಗೆ ಹೋಗಬೇಕಾದ ಹಣವು, ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್‌ಗೆ ಹೋಗಿದ್ದು ಗ್ರಾಹಕರಲ್ಲಿ ಅಚ್ಚರಿ ಮೂಡಿಸಿತ್ತು. ಏರ್‌ಟೆಲ್ ಸಿಮ್ ಬಳಕೆದಾರರ ಆಧಾರ್ ಮಾಹಿತಿಯನ್ನು ಕೆವೈಸಿ ಮೂಲಕ ಸಂಗ್ರಹಿಸಿದ್ದ ಸಂಸ್ಥೆಯು, ಗ್ರಾಹಕರ ಗಮನಕ್ಕೆ ತಾರದೇ, ಅವರ ಹೆಸರಿನಲ್ಲಿ ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್‌ನಲ್ಲಿ ಖಾತೆ ತೆರೆದಿತ್ತು. ಈ ವಿಚಾರ ಗಮನಕ್ಕೆ ಬರುತ್ತಿದ್ದಂತೆಯೇ, ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಿದ್ದ ಇ-ಕೆವೈಸಿ ಪರವಾನಗಿಯನ್ನು ಯುಐಡಿಎಐ ತಾತ್ಕಾಲಿಕವಾಗಿ ರದ್ದುಗೊಳಿಸಿತ್ತು. ಜೊತೆಗೆ ₹2.5 ಕೋಟಿ ದಂಡವನ್ನೂ ವಿಧಿಸಿತ್ತು.

ಮತದಾರರ ಪಟ್ಟಿಯಲ್ಲಿ ಹೆಸರು ಕಣ್ಮರೆ

ಆಧಾರ್ ಜೊತೆ ಮತದಾರರ ಗುರುತಿನ ಚೀಟಿಗಳನ್ನು ಸಂಯೋಜಿಸುವ ವಿಚಾರವು, ಆಧಾರ್ ಬಳಕೆದಾರರ ದತ್ತಾಂಶ ಸೋರಿಕೆ ಬಗ್ಗೆ ಆತಂಕ ಹುಟ್ಟುಹಾಕಿತ್ತು. 2015ರಲ್ಲಿ ದೇಶದಾದ್ಯಂತ ಸುಮಾರು 30 ಕೋಟಿ ಮತದಾರರ ಗುರುತಿನ ಚೀಟಿಗಳನ್ನು ಆಧಾರ್ ಜೊತೆ ಸಂಯೋಜಿಸಲಾಗಿತ್ತು. 2018ರಲ್ಲಿ ಚುನಾವಣೆಯಲ್ಲಿ ಇದರ ಪರಿಣಾಮ ಕಂಡುಬಂದಿತ್ತು. ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಸುಮಾರು 55 ಲಕ್ಷ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿವೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು. ಈ ಆರೋಪಗಳಿಗೆ ಚುನಾವಣಾ ಆಯೋಗ ಸ್ಪಷ್ಟನೆ ನೀಡಿತ್ತಾದರೂ, ಆಧಾರ್ ದತ್ತಾಂಶವನ್ನು ಜೋಡಣೆ ಮಾಡಿದ್ದರಿಂದ ಹೀಗಾಗಿದೆ ಎಂದು ಆರೋಪಿಸಲಾಗಿತ್ತು.

ದತ್ತಾಂಶ ರಕ್ಷಣೆ ವ್ಯವಸ್ಥೆಯೇ ಇಲ್ಲ

ವೈಯಕ್ತಿಕ ದತ್ತಾಂಶ ರಕ್ಷಣಾ ಮಸೂದೆ-2019 ಅನ್ನು ಲೋಕಸಭೆಯಲ್ಲಿ 2019ರ ಡಿಸೆಂಬರ್‌ನಲ್ಲಿ ಮಂಡಿಸಲಾಗಿದೆ. ಪೌರರ ವೈಯಕ್ತಿಕ ದತ್ತಾಂಶಗಳಿಗೆ ರಕ್ಷಣೆ ಕೊಡುವುದು ಮತ್ತು ದತ್ತಾಂಶ ರಕ್ಷಣಾ ಪ್ರಾಧಿಕಾರ ರಚಿಸುವುದು ಮಸೂದೆಯಲ್ಲಿದ್ದ ಮುಖ್ಯ ವಿಚಾರಗಳು. ಪರಿಶೀಲನೆಗೆ ಒಳಪಡಿಸುವುದಕ್ಕಾಗಿ ಮಸೂದೆಯನ್ನು ಪಿ.ಪಿ.ಚೌಧರಿ ನೇತೃತ್ವದ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) 2019ರ ಡಿಸೆಂಬರ್‌ನಲ್ಲಿ ಒಪ್ಪಿಸಲಾಯಿತು. ಎರಡು ವರ್ಷಗಳ ವಿಸ್ತೃತ ಚರ್ಚೆಯ ಬಳಿಕ ಸಮಿತಿಯು 2021ರ ಡಿಸೆಂಬರ್ 16ರಂದು ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದೆ. ಜಂಟಿ ಸಂಸದೀಯ ಸಮಿತಿಯು ಹಲವು ಶಿಫಾರಸುಗಳನ್ನು ಮಾಡಿದೆ.

ಮಸೂದೆಯ ವ್ಯಾಪ್ತಿಯು ವಿಸ್ತಾರವಾಗಿದೆ. ವೈಯಕ್ತಿಕ ಮತ್ತು ವೈಯಕ್ತಿಕವಲ್ಲದ ದತ್ತಾಂಶ ರಕ್ಷಣೆಯೂ ಈ ಮಸೂದೆಯ ವ್ಯಾಪ್ತಿಯಲ್ಲಿಯೇ ಬರುವುದರಿಂದ ಮಸೂದೆಯ ಹೆಸರನ್ನು 'ದತ್ತಾಂಶ ರಕ್ಷಣೆ ಮಸೂದೆ' ಎಂದು ಬದಲಾಯಿಸಬೇಕು ಎಂಬುದು ಸಮಿತಿಯ ಶಿಫಾರಸುಗಳಲ್ಲಿ ಒಂದಾಗಿದೆ.

ಅಧಿಸೂಚನೆಯ ಬಳಿಕ, ಕಾಯ್ದೆಯ ಅನುಷ್ಠಾನಕ್ಕೆ ಕಾಲಮಿತಿಯನ್ನು ಹಾಕಿಕೊಂಡಿಲ್ಲ ಎಂಬುದನ್ನು ಸಮಿತಿಯು ಗುರುತಿಸಿದೆ. ಕಾಯ್ದೆಯನ್ನು ಹಂತ ಹಂತವಾಗಿ ಜಾರಿಗೆ ತರಬೇಕು. ಕಾಯ್ದೆಯ ವಿವಿಧ ಅಂಶಗಳ ಅನುಷ್ಠಾನ ಆತುರಾತುರವಾಗಿ ಆಗಬಾರದು. ಹಾಗಂತ, ಅತ್ಯಂತ ದೀರ್ಘ ಸಮಯವನ್ನೂ ತೆಗೆದುಕೊಳ್ಳಬಾರದು ಎಂಬುದು ಸಮಿತಿಯ ಶಿಫಾರಸುಗಳಲ್ಲಿ ಒಂದು.

ಆದರೆ, ಸಮಿತಿಯ ವರದಿ ಸಲ್ಲಿಕೆಯಾಗಿ ಐದು ತಿಂಗಳು ಕಳೆದರೂ ಮಸೂದೆಯನ್ನು ಅಂಗೀಕರಿಸುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಬದಲಿಗೆ, ಈ ಮಸೂದೆಯನ್ನೇ ಕೈ ಬಿಟ್ಟು ಹೊಸ ಮಸೂದೆ ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎಂದು ವರದಿಯಾಗಿದೆ. ಈ ಮಸೂದೆಯು ಭಾರತದ ತಂತ್ರಜ್ಞಾನ ಮತ್ತು ನವೋದ್ಯಮ ಕ್ಷೇತ್ರಕ್ಕೆ ಹಾನಿಕಾರಕ ಆಗಬಹುದು ಎಂಬುದು ಮಸೂದೆಯನ್ನು ಕೈಬಿಡುವ ಚಿಂತನೆಗೆ ಕಾರಣ ಎನ್ನಲಾಗಿದೆ.

'ಇದು ಜೆಪಿಸಿ ಕರಡು ಮಸೂದೆ ಆಗಿರುವುದರಿಂದ ಅದನ್ನು ಸಂಪೂರ್ಣವಾಗಿ ಬದಲಾಯಿಸಲು ಅವಕಾಶ ಇಲ್ಲ. ಹಾಗಾಗಿ, ಈಗಿನ ವಾಸ್ತವಕ್ಕೆ ಅನುಗುಣವಾಗಿ ಹೊಸ ಮಸೂದೆ ರೂಪಿಸುವುದೇ ಸೂಕ್ತ' ಎಂದು ಕೇಂದ್ರದ ಅಧಿಕಾರಿಯೊಬ್ಬರು ಹೇಳಿದ್ದಾಗಿ ವರದಿಯಾಗಿದೆ.

ಹಾಗಾಗಿ, ದತ್ತಾಂಶ ರಕ್ಷಣಾ ಮಸೂದೆ ಸದ್ಯಕ್ಕೆ ಜಾರಿಗೆ ಬರುವ ಸಾಧ್ಯತೆ ಇಲ್ಲ.

ಆಧಾರ: ವೈಯಕ್ತಿಕ ದತ್ತಾಂಶ ರಕ್ಷಣಾ ಕಾಯ್ದೆ 2019 ಕುರಿತ ಜಂಟಿ ಸಂಸದೀಯ ಸಮಿತಿ ವರದಿ, ಆಧಾರ್ ಕಾಯ್ದೆ 2016, ಐಟಿ ಕಾಯ್ದೆ 2000, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 134

ಶಿವನ ಮೋಹಕ್ಕೆ ಬ್ರಹ್ಮಸಂಕಲ್ಪ

ಸಂಧ್ಯೆಯ ಚರಿತ್ರೆಯನ್ನು ಕೇಳಿ ಸಂತೋಷಗೊಂಡ ನಾರದಮುನಿಯು ಸಕಲ ಪಾಪಗಳನ್ನೂ ನಾಶಮಾಡುವಂತಹ ಶಿವನ ಮಂಗಳಮಯವಾದ ಚರಿತ್ರೆಯನ್ನು ಹೇಳು ಎಂದು ಬ್ರಹ್ಮನಲ್ಲಿ ವಿನಂತಿಸುತ್ತಾನೆ. ಆಗ ಬ್ರಹ್ಮ 'ಎಲೈ ನಾರದ! ಶಿವನ ಲೀಲಾಮಯವಾದ ಶುಭಚರಿತ್ರೆಯನ್ನು ಹೇಳುವೆನು ಕೇಳು. ಹಿಂದೆ ನಾನು ಸಂಧ್ಯೆಯಲ್ಲಿ ಮೋಹಗೊಂಡು ಯಾವಾಗ ಅಂತರ್ಧಾನನಾದೆನೋ, ಆಗ ಶಂಕರನು ಆಡಿದ ಕುಹಕ ಮಾತುಗಳನ್ನು ನೆನೆದು ಚಿಂತಿಸತೊಡಗಿದೆ. ಹಾಗೆ ಬಹಳ ಹೊತ್ತು ಚಿಂತಿಸುತ್ತಾ, ಶಿವನ ಮಾಯೆಯಿಂದ ಮೋಹಗೊಂಡು, ಶಿವನಲ್ಲಿ ಅಸೂಯೆಯುಳ್ಳವನಾದೆ. ಅದರಿಂದ ಮುಂದೆ ನಾನೇನು ಮಾಡಿದೆನೆಂಬುದನ್ನು ಹೇಳುವೆನು ಕೇಳು' ಎಂದು ಶಿವನ ಮತ್ತೊಂದು ಕಥೆ ಹೇಳತೊಡಗಿದ.


ಶಿವನಲ್ಲಿ ಅಸೂಯೆಯುಳ್ಳವನಾದ ಬ್ರಹ್ಮನು ದಕ್ಷಬ್ರಹ್ಮ ಮತ್ತಿತರರು ಇರುವಲ್ಲಿಗೆ ಹೋದ. 'ಎಲೈ ದಕ್ಷ ಮತ್ತು ಮರೀಚಿಯೇ ಮೊದಲಾದ ಪುತ್ರರೇ! ನನ್ನ ಕಷ್ಟಪರಿಹಾರಕ್ಕಾಗಿ ಏನಾದರೊಂದು ಉಪಾಯವನ್ನು ಯೋಚಿಸಿ ಹೇಳಿ. ಹಿಂದೆ ನಮಗೆ ಕೇವಲ ಸ್ತ್ರೀಯಲ್ಲಿ ಉಂಟಾದ ಕಾಮೇಚ್ಛೆಯನ್ನು ನೋಡಿ ಶಂಕರ ದೂಷಿಸಿದ. ಶಿವನ ತುಚ್ಛವಾದ ಮಾತುಗಳನ್ನು ಕೇಳಿ ತುಂಬಾ ದುಃಖವಾಗಿ ಮನಃಶಾಂತಿ ಕಳೆದುಕೊಂಡು ಚಿಂತಿತನಾಗಿದ್ದೇನೆ. ಆದುದರಿಂದ ಮಹಾಯೋಗಿಯಾದ ಶಿವನೂ ಕಾಮಾಭಿಲಾಷೆಯಿಂದ ತಾನೇ ಕಾಂತೆಯನ್ನು ಸ್ವೀಕರಿಸುವಂತೆ ನಾವುಗಳು ಮಾಡಲೇಬೇಕು. ಇದಕ್ಕೆ ಸರಿಯಾದ ಉಪಾಯ ನನಗೆ ತಿಳಿಸಿ' ಎಂದ.

ಶಿವನು ಪತ್ನಿಯನ್ನು ಪರಿಗ್ರಹಿಸಿದರೆ ನಾನು ದುಃಖವಿಲ್ಲದೇ ಸುಖಿಯಾಗುವೆನು. ಆದರೆ ವಿಚಾರ ಮಾಡಿದರೆ ಮಾಯಾಯೋಗಿಯಾದ ಶಿವನು ಸ್ತ್ರೀಯನ್ನು ಸ್ವೀಕರಿಸುವುದು ಅಸಾಧ್ಯವೆಂದೇ ತೋರುವುದು. ನಮ್ಮಲ್ಲಿ ಕೇವಲ ಕಾಮವಿಕಾರ ಮೂಡಿದ್ದಕ್ಕೆ ಮುನಿಗಳ ಎದುರಿನಲ್ಲಿ ನಮ್ಮನ್ನು ನಿಂದಿಸಿದ ಶಿವ ಹೇಗೆ ತಾನೇ ಸ್ತ್ರೀಯನ್ನು ಪರಿಗ್ರಹಿಸುತ್ತಾನೆ? ಮೂರು ಲೋಕದಲ್ಲಿ ಯಾವ ಸ್ತ್ರೀಯೂ ಶಿವನನ್ನು ಮೋಹಗೊಳಿಸಲಾರಳು. ಮಹಾವಿರಕ್ತ ಯೋಗಿಯಾದ ಅವನು ಸ್ತ್ರೀಯರ ಹೆಸರೆತ್ತಿದರೂ ಸಹಿಸುವುದಿಲ್ಲ. ಹರನು ಪತ್ನಿಯನ್ನು ಪರಿಗ್ರಹಿಸದಿದ್ದಲ್ಲಿ ಸೃಷ್ಟಿಯು ಬೆಳೆಯಲಾರದು, ಮತ್ತದರ ಪಾಲನೆಯು ಆಗಲಾರದು. ಕೊನೆಯಲ್ಲಿ ಪ್ರಳಯವೂ ಆಗದು. ಪ್ರಳಯವನ್ನು ಶಿವನೇ ಮಾಡಬೇಕಾಗಿರುವುದರಿಂದ ಶಿವನ ಉಪಸ್ಥಿತಿ ಅಗತ್ಯವಾಗಿಬೇಕು. ಏಕೆಂದರೆ, ಭೂಲೋಕದಲ್ಲಿ ಹಲವು ರಾಕ್ಷಸರು ಜನಿಸುವರು. ಅವರಲ್ಲಿ ಕೆಲವರನ್ನು ನಾನು, ಕೆಲವರನ್ನು ವಿಷ್ಣು, ಇನ್ನೂ ಕೆಲವರನ್ನು ಶಂಕರನೂ ಸಂಹರಿಸಬೇಕಾಗುವುದು. ಶಂಕರನು ಸಂಸಾರದಲ್ಲಿ ಆಸಕ್ತಿಯಿಲ್ಲದವನಾಗಿ ವೈರಾಗ್ಯದಿಂದ ಯೋಗಮಾರ್ಗದಲ್ಲಿ ನಿರತನಾಗಿದ್ದರೆ, ಅವನು ಧ್ಯಾನ ಹೊರತು ಇನ್ನಾವ ಕಾರ್ಯವನ್ನೂ ಮಾಡಲಾರ ಎಂದು ಬ್ರಹ್ಮ ತನ್ನ ಪುತ್ರರಾದ ದಕ್ಷ ಮೊದಲಾದ ಮಾನಸಪುತ್ರರಿಗೆ ಹೇಳಿದ. ಆಗ ರತಿಯೊಡನಿರುವ ಮನ್ಮಥನನ್ನು ನೋಡಿದ ಬ್ರಹ್ಮನಿಗೆ ಒಂದು ಉಪಾಯ ಹೊಳೆಯಿತು. ಆನಂದೋತ್ಸಾಹದಿಂದ ಮನ್ಮಥನಿಗೆ ಹೇಳಿದ 'ದಕ್ಷನಂತೆ ನೀನು ಸಹ ನನ್ನ ಪುತ್ರ. ತಂದೆಯಾದ ನನ್ನಲ್ಲಿ ನಿನಗೆ ಭಕ್ತಿ ಇದ್ದರೆ ನನ್ನ ಮಾತನ್ನು ನಿನ್ನ ಪತ್ನಿಯೊಡನೆ ಕೇಳಿ ನಡೆಸಿಕೊಡು. ಲಕ್ಷ್ಮಿಯಿಂದ ಹರಿಯು, ಹರಿಯಿಂದ ಲಕ್ಷ್ಮಿಯು ಹೇಗೆ ಶೋಭಿಸುವರೋ, ರಾತ್ರಿಯಿಂದ ಚಂದ್ರನು ಚಂದ್ರನಿಂದ ರಾತ್ರಿಯು ಹೇಗೆ ಶೋಭಿಸುವುದೋ, ಅದರಂತೆ ನಿಮ್ಮೀರ್ವರ ಪತಿಪತ್ನಿ ಭಾವವು ಉತ್ತಮವಾಗಿದೆ. ನೀನು ಜಗತ್ತಿಗೇ ಅಲಂಕಾರಪ್ರಾಯನಾಗಿರುವೆ. ಈಗ ನಾನು ಹೇಳುವ ಮಾತನ್ನು ಕೇಳು. ಜಗತ್ತಿನ ಕ್ಷೇಮಕ್ಕಾಗಿ ಶಂಕರನನ್ನು ಮೋಹಗೊಳಿಸು. ಅವನು ಸಂಸಾರಸುಖದಲ್ಲಿ ಮನಸ್ಸುಳ್ಳವನಾಗಿ ಪತ್ನಿಯನ್ನು ಪರಿಗ್ರಹಿಸುವಂತೆ ಮಾಡು. ನಿರ್ಜನವಾದ ಪ್ರದೇಶ, ಸುಂದರವಾದ ಪ್ರದೇಶ, ಪರ್ವತ ಮತ್ತು ರಮಣೀಯವಾದ ಸರಸ್ಸಿನ ತೀರ ಮೊದಲಾದ ಯಾವಯಾವ ಸ್ಥಳಗಳಿಗೆ ಶಿವನು ಹೋಗುವನೋ, ಅಲ್ಲೆಲ್ಲಾ ನೀನು ರತಿಯೊಡನೆ ಹಿಂಬಾಲಿಸು. ಜಿತೇಂದ್ರಿಯನಾದ ಶಿವನನ್ನು ಮೋಹಗೊಳಿಸು. ನಿನ್ನ ಹೊರತು ಅವನನ್ನು ಮೋಹಗೊಳಿಸುವವರು ಯಾರೂ ಇಲ್ಲ. ಈಶ್ವರ ಸ್ತ್ರೀಯನ್ನು ಪರಿಗ್ರಹಿಸಿದರೆ ನಿನಗೆ ನಾನು ನೀಡಿದ ಶಾಪ ನಿವಾರಣೆಯಾಗುವುದು. ಶಿವನು ಅನುರಾಗವುಳ್ಳವನಾಗಿ ಅನುರೂಪಳಾದ ಸುಂದರಿಯನ್ನು ವರಿಸಲು ಅಪೇಕ್ಷಿಸಿದಾಗ ನಿನ್ನ ಶಾಪ ನಿವೃತ್ತಿಯಾಗುವುದು' ಎಂದು ಬ್ರಹ್ಮನು ಮನ್ಮಥನ ಮನವೊಲಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರಾಖಂಡದ ಪ್ರಮುಖ ಪ್ರವಾಸಿ ತಾಣ ನೈನಿತಾಲ್‌ನದ್ದು ಎನ್ನಲಾದ ಎರಡು ಚಿತ್ರಗಳ ಕೊಲಾಜ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮೊದಲ ಚಿತ್ರವು ನೈನಿ ಸರೋವರಕ್ಕೆ ಹೊಂದಿಕೊಂಡಿರುವ ರಸ್ತೆಯದ್ದಾಗಿದೆ. ಈ ಚಿತ್ರಕ್ಕೆ 'ನೈನಿತಾಲ್ 2010' ಎಂಬ ಅಡಿಬರಹ ನೀಡಲಾಗಿದೆ. ಈ ಚಿತ್ರದಲ್ಲಿ ರಸ್ತೆ ಮೇಲೆ ಕಡಿಮೆ ಜನರಿದ್ದಾರೆ. ಎರಡನೇ ಚಿತ್ರಕ್ಕೆ 'ನೈನಿತಾಲ್ 2022' ಎಂದು ಅಡಿಬರಹ ನೀಡಲಾಗಿದೆ. ಇದು ಮುಸ್ಲಿಮರು ರಸ್ತೆ ಮೇಲೆ ನಮಾಜು ಮಾಡುತ್ತಿರುವ ಚಿತ್ರವಾಗಿದೆ. 12 ವರ್ಷಗಳಲ್ಲಿ ನೈನಿತಾಲ್‌ನಲ್ಲಿ ಮುಸ್ಲಿಮರ ಜನಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂಬ ವಿವರವನ್ನು ಈ ಚಿತ್ರದ ಜೊತೆ ನೀಡಲಾಗಿದೆ.



ವೈರಲ್ ಆಗಿರುವ ಮಾಹಿತಿಯು ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ವೈರಲ್ ಆಗಿರುವ ಕೊಲಾಜ್‌ನಲ್ಲಿರುವ ಎರಡನೇ ಚಿತ್ರವು ಬಾಂಗ್ಲಾದೇಶದ ವಾರ್ಷಿಕ 'ಬಿಸ್ವಾ ಇಜ್ತೆಮಾ' ಆಚರಣೆಯ ಚಿತ್ರವಾಗಿದೆ. ಈ ಕುರಿತ ವರದಿಯು ಚಿತ್ರ ಸಮೇತ 'ಅಲ್ ಜಝೀರಾ' ವೆಬ್‌ಸೈಟ್‌ನಲ್ಲಿ 2018ರ ಜನವರಿಯಲ್ಲಿ ಪ್ರಕಟವಾಗಿದೆ. ಮೊದಲನೇ ಚಿತ್ರವು ನೈನಿತಾಲ್‌ನ ಉಪ್ಪರ್ ಮಾಲ್ ರೋಡ್‌ನದ್ದು. ಈ ಚಿತ್ರವನ್ನು 2019ರ ಜೂನ್ 16ರಂದು 'ವಿಕಿಮೀಡಿಯ' ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಚಿತ್ರಗಳು ಒಂದೇ ಸ್ಥಳದ್ದಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮೋಹವಿಲ್ಲದ ಭೋಗ

ಮುಗ್ಧನಾಗದೆ ಭುಜಿಸು ಭುಜಿಸಲಿಹುದನು ಜಗದಿ |
ಮಾಧ್ವೀಕ ಭಯವಿರದು ಜಾಗರೂಕನಿಗೆ ||
ದೃಗ್ದೃಶ್ಯಚಿತ್ರಪ್ರಪಂಚದಲಿ ಸೇರಿ ನೀಂ |
ಮುಗ್ಧನಾಗದೆ ಸುಖಿಸು – ಮಂಕುತಿಮ್ಮ || 639 ||

ಪದ-ಅರ್ಥ: ಮುಗ್ಧನಾಗದೆ = ಮೋಹಗೊಳ್ಳದೆ, ಭುಜಿಸು = ಭೋಗಿಸು, ಭುಜಿಸಲಿಹುದನು = ಭುಜಿಸಲು + ಇಹುದನು (ಇದ್ದುದನ್ನು), ಮಾಧ್ವೀಕ = ಮಧುಸಂಬಂಧವಾದ, ನಶೆ ಉಂಟುಮಾಡುವ, ದೃಗ್ದೃಶ್ಯಚಿತ್ರಪ್ರಪಂಚದಲಿ = ದೃಕ್(ನೋಡುವವನು) + ದೃಶ್ಯ (ನೋಡುವಂಥದ್ದು) + ಚಿತ್ರ + ಪ್ರಪಂಚದಲಿ.

ವಾಚ್ಯಾರ್ಥ: ಮೋಹಗೊಳ್ಳದೆ ಪ್ರಪಂಚದಲ್ಲಿ ಸುಖಿಸಬಹುದಾದದ್ದನ್ನು ಸುಖಿಸು. ಎಚ್ಚರದಿಂದ ಇರುವವನಿಗೆ ಅಹಂಕಾರದ ಅಮಲು ಏರುವ ಭಯವಿಲ್ಲ. ನೋಡುವ, ನೋಡಿಸಿಕೊಳ್ಳುವ ಈ ಅದ್ಭುತ ಚಿತ್ರಪ್ರಪಂಚದಲ್ಲಿ ಸೇರಿಕೊಂಡು ಮೋಹಗೊಳ್ಳದೆ ಸಂತೋಷವಾಗಿರು.

ವಿವರಣೆ: ಸಾಮಾನ್ಯವಾಗಿ ಮುಗ್ಧ ಎಂಬ ಪದಕ್ಕೆ ನಿಷ್ಕಪಟ, ಅಕೃತ್ರಿಮ, ಮಗುವಿನಂಥ ಮನಸ್ಸು ಎಂಬ ಅರ್ಥಗಳು ಬರುತ್ತವೆ. ಆದರೆ ಈ ಕಗ್ಗದಲ್ಲಿ ಮುಗ್ಧ ಪದದ ಇನ್ನೊಂದು ಅರ್ಥ, ಮೋಹ ಅಥವಾ ಭ್ರಮೆಯಲ್ಲಿ ಬಿದ್ದಿರುವ, ಎಂಬುದನ್ನು ಬಳಸಿದ್ದಾರೆ.

ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ ಎಂದುಕೊಂಡು ಈ ಜೀವನವನ್ನು ನಿರಾಕರಿಸುತ್ತ, ಪರಲೋಕದಲ್ಲಿ ಸಂತೋಷವನ್ನು ಬಯಸುತ್ತ, ದೇಹ, ಮನಸ್ಸುಗಳನ್ನು ದಂಡಿಸುವುದಕ್ಕಿಂತ ಜಗತ್ತಿನಲ್ಲಿ ಯಾವುದನ್ನು ಸುಖಿಸಬಹುದೋ ಅದನ್ನು ಸುಖಿಸು. ಆದರೆ ಅದರ ಬಗ್ಗೆ ಮೋಹ ಬೇಡ. ಯಾವುದೇ ವಸ್ತುವಿನ ಬಗ್ಗೆ, ವಿಷಯದ ಬಗ್ಗೆ ಮೋಹ ಬಂದುಬಿಟ್ಟರೆ ಅದು ತೀರದ ಬಯಕೆಯಾಗುತ್ತದೆ, ಕೋಪದ, ಕಾಮದ ಅಮಲು ಏರಿಸುತ್ತದೆ. ಆದ್ದರಿಂದ ಪ್ರಪಂಚ ವ್ಯವಹಾರದಲ್ಲಿ ಜಾಗರೂಕರಾಗಿರಬೇಕು. ಎರಡು ವಿಷಯಗಳಲ್ಲಿ ಜಾಗರೂಕತೆ ಬೇಕು. ಮೊದಲನೆಯದು, ಭುಜಿಸುವ ವಸ್ತುವಿನ ಬಗ್ಗೆ ಮೋಹ ಇರದಂತೆ ನೋಡಿಕೊಳ್ಳುವುದು. ಎರಡನೆಯದು, ಈ ಪ್ರಪಂಚ ಈಶ್ವರನದು, ನನ್ನದಲ್ಲ. ಭಗವಂತ ಕರುಣೆಯಿಂದ ನನಗೆ ಕೆಲವು ವಸ್ತುಗಳನ್ನು ಬಳಸುವುದಕ್ಕೆ ಕೊಟ್ಟಿದ್ದಾನೆ. ಈ ಪ್ರಪಂಚ ಅವನ ಬೃಹತ್ ಲೀಲೆ. ಆ ಲೀಲೆಯಲ್ಲಿ ನಾನೊಬ್ಬ ಪಾತ್ರಧಾರಿ. ಪಾತ್ರಕ್ಕೆ ತಕ್ಕ ವೇಷ, ತಕ್ಕ ಮಾತು ಮತ್ತು ತಕ್ಕ ಅವಧಿ, ಇವಿಷ್ಟೇ ನನ್ನ ಜವಾಬ್ದಾರಿ. ನಿರ್ದೇಶಕ ಅವನೇ. ಯಾವುದೂ ನನ್ನದಲ್ಲ, ನನ್ನ ಬಳಕೆಗೆ ಕೊಟ್ಟಿದ್ದು ಎಂದಾಗ ವಸ್ತು ನನ್ನದೇ ಎಂಬ ಮೋಹ, ಅಹಂಕಾರ ಬರುವುದಿಲ್ಲ.

ಹಾಗೆಂದುಕೊಂಡು, ನನಗೆ ಯಾವುದೂ ಸಂಬಂಧವಿಲ್ಲವೆಂದು ಕುಳಿತುಕೊಳ್ಳುವಂತಿಲ್ಲ. ಲೀಲೆಯಲ್ಲಿ ನಾನೊಂದು ಪಾತ್ರವಾದ್ದರಿಂದ ನಟನೂ ನಾನೇ, ನೋಡುವವನೂ ನಾನೇ. ಅದನ್ನು ಕಗ್ಗ "ದೃಗ್ದೃಶ್ಯ ಚಿತ್ರಪ್ರಪಂಚ" ಎಂದು ಕರೆಯುತ್ತದೆ. ದೃಕ್ ಎಂದರೆ ಕಾಣುವವನು, ದೃಶ್ಯ ಎಂದರೆ ಕಂಡದ್ದು. ಹೀಗೆ ಕಾಣುವವನಾದ ನಾನು ಕಂಡಂತಹ ಪ್ರಪಂಚ, ಅದೂ ಚಿತ್ರಪ್ರಪಂಚದಲ್ಲಿ ಸೇರಿ ಭಾಗವಹಿಸಬೇಕು. ಚಿತ್ರಪ್ರಪಂಚಕ್ಕೆ ಇನ್ನೊಂದು ಆಯಾಮವೂ ಇದೆ. ಇದು ಮಾಯೆಯ ಚಿತ್ರ. ಇದ್ದಂತೆ ತೋರುತ್ತದೆ, ಆದರೆ ಅದು ಇಲ್ಲ. ಇಂಥ ಇದ್ದೂ ಇಲ್ಲದ ಪ್ರಪಂಚದಲ್ಲಿ, ನನ್ನ ಪಾತ್ರವನ್ನು ಕ್ಷಮತೆಯಿಂದ, ನಿರ್ಮೋಹದಿಂದ ನಿರ್ವಹಿಸುತ್ತ, ದೊರಕಿದ್ದನ್ನು ಪ್ರಸಾದವೆಂದು ಸ್ವೀಕರಿಸುತ್ತಾ ಸುಖಿಯಾಗಿರುವುದೇ ನಮಗಿರುವ ಕಾರ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 31, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ – ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪ್ರತಿಪದ್ ಗಂ. 19-19 ನಕ್ಷತ್ರ: ರೋಹಿಣಿ ಗಂ. 10-01 ಯೋಗ: ಧೃತಿ ಗಂ. 24-33, ಕರಣ: ಕಿಂಸ್ತುಘ್ನ ಗಂ. 06-08, ವೃಷಭ ಮಾಸದ 16 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 29 ಶವ್ವಾಲ್
ಅದೃಷ್ಟ ಸಂಖ್ಯೆ : 6, 11

ಮೇಷ: ನಿಮ್ಮ ಅಭಿಪ್ರಾಯಗಳಿಗೆ ಮನ್ನಣೆ ಇದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಂಡು ಹಿತವಚನ ಹೇಳಿ. ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು.

ವೃಷಭ: ಖರ್ಚುವೆಚ್ಚಗಳು ನಿಯಂತ್ರಣದಲ್ಲಿ ಇರಲಿಕ್ಕಾಗಿ ಹರಸಾಹಸ. ಮನೆಯಲ್ಲಿ ಅಲಂಕಾರಿಕ ವಸ್ತುಗಳ ಖರೀದಿಗಾಗಿ ಅಧಿಕ ಖರ್ಚು ಬಂದೀತು. ಸಣ್ಣ ವಿಚಾರದಲ್ಲಿ ಅಶಾಂತಿ, ದಾಂಪತ್ಯದಲ್ಲಿ ಕಿರಿಕಿರಿ ಎನಿಸುವುದು.

ಮಿಥುನ: ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯ ತೋರಿಬರಲಿದೆ. ನಿವೇಶನ ಕೊಳ್ಳುವ ಬಗ್ಗೆ ಮನೆಯವರ ಸಲಹೆ ಅಗತ್ಯ. ಸಾರ್ವಜನಿಕ ಸಂಘ-ಸಂಸ್ಥೆಗಳ ವ್ಯವಹಾರದಲ್ಲಿ ಯಶಸ್ಸು ಪ್ರಾಪ್ತಿ.

ಕರ್ಕಾಟಕ: ಬ್ಯಾಂಕ್ ಉದ್ಯೋಗಿಗಳಿಗೆ ಶುಭಸುದ್ದಿ. ಕಚೇರಿಯ ಕೆಲಸದಲ್ಲಿ ಎಲ್ಲರ ಮಾತನ್ನು ತಾಳ್ಮೆಯಿಂದ ಕೇಳಿ. ಮನೆಯಲ್ಲಿ ನೆಮ್ಮದಿಯ ವಾತಾವರಣ. ವನಸ್ಪತಿ ವ್ಯಾಪಾರಿಗಳಿಗೆ ಲಾಭ. ಮಕ್ಕಳಲ್ಲಿ ಅನಾರೋಗ್ಯ.

ಸಿಂಹ: ಇಂದು ಯಾವುದೇ ರೀತಿಯ ವಿದೇಶಿ ಒಪ್ಪಂದಗಳನ್ನು ಮಾಡಿಕೊಳ್ಳದಿರಿ. ದೇವರಲ್ಲಿನ ನಿಮ್ಮ ಶ್ರದ್ಧಾ ಭಕ್ತಿ ಅಧಿಕ ಗೊಳ್ಳುವುದು. ಹಣ ಕಾಸು ಸ್ಥಿತಿ ಉತ್ತಮವಾಗಿರುವುದು.

ಕನ್ಯಾ: ಮದುವೆಯ ಬಗ್ಗೆ ತಂದೆ ತಾಯಿಯ ಜೊತೆ ಮಾತನಾಡಿ. ಲಕ್ಷ್ಮೀ ವೆಂಕಟೇಶ್ವರನನ್ನು ಭಕ್ತಿಯಿಂದ ಆರಾಧಿಸಿ ದಾರಿದ್ರ್ಯ ದೂರ ಮತ್ತು ಸಾಮಾಜಿಕವಾಗಿ ಗೌರವ ಇಮ್ಮಡಿಗೊಳ್ಳಲಿದೆ. ಕೆಂಪು ಬಣ್ಣವು ಜಯ ತರಲಿದೆ.

ತುಲಾ: ಅದೃಷ್ಟ ದೇವತೆ ನಿಮ್ಮ ಕೈ ಹಿಡಿದಿದ್ದಾಳೆ. ವ್ಯಾಪಾರ ವ್ಯವಹಾರಗಳು ಅಧಿಕ ವರಮಾನ ತರಲಿವೆ. ಮಗನಿಂದ ಶುಭ ಸುದ್ದಿ. ಮಕ್ಕಳಿಗೆ ಓದಿನಲ್ಲಿ ಏಕಾಗ್ರತೆ ಹೆಚ್ಚುವುದು. ಹೊಟ್ಟೆಗೆ ಸಂಬಂಧಿಸಿದ ಅನಾರೋಗ್ಯ ನಿರ್ಲಕ್ಷಿಸಬೇಡಿ.

ವೃಶ್ಚಿಕ: ಕೌಟುಂಬಿಕ ವಿಚಾರಗಳ ಹೊಸ ಚಿಂತನೆಗೆ ಈ ದಿನ ಪೂರಕವಾಗಿರಲಿದೆ. ತಾಂತ್ರಿಕ ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಪರಿಶ್ರಮ ಹಾಕಿದರೂ ಸಹ ಅದೃಷ್ಟ ಕೈ ಕೊಡಲಿದೆ. ಸಹೋದರಿಗೆ ಕಂಕಣ ಭಾಗ್ಯ.

ಧನು: ಸಾವಧಾನದಿಂದ ದಿನದ ಕೆಲಸಗಳನು ಮಾಡಿ ಮುಗಿಸುವಿರಿ. ಮದುವೆಯ ವಿಷಯದಲ್ಲಿ ಮಗನೊಡನೆ ಮುಕ್ತ ಮನಸ್ಸಿನ ಮಾತು ಕತೆ. ಆರೋಗ್ಯ ಉತ್ತಮವಾಗಿರುವುದು. ವಿಲಾಸೀ ಜೀವನದ ಸುಖ ಅನುಭವ.

ಮಕರ: ಕಳುವಾಗಿದ್ದ ವಸ್ತುಗಳು ಪುನಃ ದೊರೆತು ಸಂತಸವಾಗಲಿದೆ. ಲೇಖನ ಬರೆಯುವುದರಿಂದ ಜನ ಸಂಪರ್ಕ ಅಭಿವೃದ್ಧಿ. ನಿಮ್ಮ ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋವಿಸುವುದು, ಆದ್ದರಿಂದ ಮಾತಿನಲ್ಲಿ ಹಿಡಿತವಿರಲಿ.

ಕುಂಭ: ಮದುವೆ ನಿಮಿತ್ತ ಒಡವೆಗಳ ಖರೀದಿ. ಸುಗಂಧ ವ್ಯಾಪಾರದಿಂದ ಲಾಭ. ಧೈರ್ಯದಿಂದ ಮುನ್ನಡೆದಲ್ಲಿ ಕಾರ್ಯಸಾಧನೆ. ರಾಜಕೀಯ ಮಹಿಳೆಯರು ಅನೇಕ ರೀತಿಯಲ್ಲಿ ಬಲಾಢ್ಯರಾಗಿ ಅಧಿಕಾರ ಪಡೆಯುವಂತಾಗಲಿದೆ.

ಮೀನ: ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುಲು ತಂದೆಯಿಂದ ಎಚ್ಚರಿಕೆಯ ಮಾತು ಕೇಳಿ ಬರಲಿದೆ. ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ತಾಯಿಯ ಮನವೊಲಿಸುವಲ್ಲಿ ಯಶಸ್ವಿಯಾಗುವಿರಿ. ಧಾನ್ಯ ವರ್ತಕರಿಗೆ ಉತ್ತಮ ಲಾಭ.

ಪದಬಂಧ 4974 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯುದ್ಧದ ನಗಾರಿಯಿದು (4)
3.ವಾಡಿಕೆಂತೆ ಹಾಕಿರುವ ಹತೋಟಿ (4)
5.ಪುರದಲ್ಲಿ ಕಾರು ಇಟ್ಟವ ಹೇಳಿದ ದೂರು! (3)
6.ಬೆಟ್ಟದ ಮಗ್ಗುಲು (3)
8.ಪ್ರತಿವಾಹಕದ ಹತ್ತಿರ ನೆರೆ ಬಂದಿದೆಯಲ್ಲಾ? (3)
9.ಸೀತೆಯ ತಂದೆ (3)
10.ಹಣೆಗಿರಿಸುವ ಬೊಟ್ಟು (3)
12.ದನವಿರುವ ಮನೆ (3)
14.ಹೆದರಿಕೆಯನ್ನುಂಟು ಮಾಡುವುದು (4)
15.ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1. ಈತ ಸೂರ್ಯನ ಮಗ (4)
2.ಕುದುರೆಯನ್ನೇರುವ ಬಳೆ (3)
3.ಕಾರನ್ನೇರಿದವ ಮಾಡಿದ ಒಪ್ಪಂದ (3)
4.ತಿರುಗಿದಾಗ ಈ ಗೊಂದಲ ಕಾಣಿಸಿತಲ್ಲಾ! (4)
7.ಈತ ಜಿಪುಣ (3)
8.ಪ್ರತಿಯಲ್ಲಿರುವ ಏಳಿಗೆ! (3)
9.ಗೆಲುವಿನ ನೆನಪಿಗಾಗಿ ನೆಡುವ ಕಂಬ (4)
11.ನಮ್ಮ ಹೆಮ್ಮೆಯ ನಾಡಿದು (4)
12.ಮರದ ಹತ್ತಿರ ನಡೆದ ಕಾಳಗ (3)
13.ನೃತ್ಯವನ್ನು ಹೀಗೆ ಹೇಳಿ (3)

1			2	■	3			4
	■	■		■		■	■	
	■	■	5			■	■	
6		7	■	■	■	8		
■	■		■	■	■		■	■
9			■	■	■	10		11
	■	■	12		13	■	■	
	■	■		■		■	■	
14				■	15			

4973ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಫಲಕ 3.ಅಡವಿ
5.ಪಾತರಗಿತ್ತಿ 6.ಶವ
8.ಪಾಶ 9.ಮರ
10.ಕಸ 14.ನಯವಂಚಕ
15.ರಿಕಾಪು 16.ಕಲಹ

ಮೇಲಿಂದ ಕೆಳಕ್ಕೆ:
1.ಫಲಿತಾಂಶ 2.ಕಪಾಳ
3.ಅತ್ತಿಗೆ 4.ವಿದ್ಯುತ್ಕೋಶ
7.ವರಾರ 8.ಪಾತಕ
9.ಮಧುಕರಿ 11.ಸತ್ಯಾಗ್ರಹ
12.ಒನಪು 13.ವಕಕ

ಸುಡೊಕು 5360

				3		1		6
		9						
	1	8	7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5359 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ ನಿಯಮಕ್ಕೆ ತಿದ್ದುಪಡಿ • ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

ಕೆಪಿಎಸ್‌ಸಿ: ರಿಕ್ತ ಹುದ್ದೆಗಳಿನ್ನು ಹೊಸ ಹುದ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ 'ಎ' ಮತ್ತು 'ಬಿ' ಗ್ರೂಪ್ ಹುದ್ದೆಗಳಿಗೆ ನೇಮಕಾತಿ ಆದೇಶ ಪಡೆದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದೇ ಹುದ್ದೆಗಳು ಖಾಲಿ ಉಳಿದರೆ ಅವುಗಳನ್ನು ಹೊಸ ಖಾಲಿ ಹುದ್ದೆಗಳು ಎಂದು ಪರಿಗಣಿಸಲಾಗುವುದು ಮತ್ತು ಮುಂದಿನ ನೇಮಕಾತಿಯಲ್ಲಿ ಅಂತಹ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಈ ಸಂಬಂಧ ಸೋಮವಾರ ನಡೆದ ಸಚಿವ ಸಂಪುಟ ಸಭೆ 'ಕರ್ನಾಟಕ ಗೆಜೆಟೆಡ್ ಪ್ರೊಬೆಷನರುಗಳ ನೇಮಕಾತಿ(ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು', 1997 ನಿಯಮಕ್ಕೆ 11ಕ್ಕೆ ತಿದ್ದುಪಡಿ ಮಾಡಲು ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆಯ ಪ್ರಕ್ರಿಯೆ ಮುಗಿದ ನಂತರ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳಿಗೆ ಆಯ್ಕೆಯಾದ ಕೆಲವು ಅಭ್ಯರ್ಥಿಗಳು ಕಾರಣಾಂತರಗಳಿಂದ ತಾವು ಆಯ್ಕೆಯಾದ ಹುದ್ದೆಗೆ ವರದಿ ಮಾಡಿಕೊಳ್ಳುವುದಿಲ್ಲ. ಆದರೆ, ಅದೇ ನೇಮಕಾತಿಯಲ್ಲಿ ಬೇರೆ ಹುದ್ದೆಗೆ ಆಯ್ಕೆಯಾದ ಅಥವಾ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆಯದೆ ಇರುವ ಇತರೆ ಅಭ್ಯರ್ಥಿಗಳು ವರದಿ ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಹುದ್ದೆಗೆ ತಮ್ಮನ್ನು ಪರಿಗಣಿಸಬೇಕೆಂದು ನ್ಯಾಯಾಲಯಕ್ಕೆ ಮೊರೆ ಹೋಗುತ್ತಿದ್ದಾರೆ. ವರದಿ ಮಾಡಿಕೊಳ್ಳದೇ ಇರುವ ರಿಕ್ತ ಸ್ಥಾನಗಳಿಗೆ ಅಂತಹವರನ್ನು ಪರಿಗಣಿಸಿದರೆ, ಇಡೀ ಆಯ್ಕೆ ಪಟ್ಟಿಯೇ ಬದಲಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ತಿದ್ದುಪಡಿಗೆ ಸಂಪುಟ ಒಪ್ಪಿಗೆ ನೀಡಿದೆ.

ಈ ತಿದ್ದುಪಡಿಗೆ ಸಂಬಂಧಿಸಿದಂತೆ 15 ದಿನಗಳ ಒಳಗೆ ಆಕ್ಷೇಪಣೆ ಆಹ್ವಾನಿಸಲು ನಿರ್ಧರಿಸಲಾಗಿದೆ. ಅಷ್ಟರೊಳಗೆ ಯಾವುದೇ ಆಕ್ಷೇಪಣೆ, ಸಲಹೆಗಳು ಸ್ವೀಕೃತವಾಗದೇ ಇದ್ದರೆ, ಪುನಃ ಸಚಿವ ಸಂಪುಟದ ಅನುಮೋದನೆಗೆ ಮಂಡಿಸದೇ ಅಂತಿಮವಾಗಿ ಪ್ರಕಟಿಸಲು ತೀರ್ಮಾನಿಸಲಾಗಿದೆ.

ಸಂಪುಟದ ಇತರ ತೀರ್ಮಾನಗಳು:

- ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು ಬನ್ನೂರಿನ ಆನೆಮಜಲು ಎಂಬಲ್ಲಿ 2 ನೇ ಹಂತದ ನ್ಯಾಯಾಲಯ ಸಂಕೀರ್ಣ ಕಾಮಗಾರಿಯನ್ನು ₹26.90 ಕೋಟಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ.
- ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ಚಿಕ್ಕಮಾದಿನಾಳ್ ಹಾಗೂ ಇತರೆ 11 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಒಟ್ಟು ಮೊತ್ತ ₹18.85 ಕೋಟಿ ಅನುದಾನ ನೀಡಲು ಒಪ್ಪಿಗೆ.
- 2022–23ನೇ ಸಾಲಿನಲ್ಲಿ 'ಶ್ರವಣದೋಷ ಮುಕ್ತ ಕರ್ನಾಟಕ ಯೋಜನೆ ಯೋಜನೆ' ಅನುಷ್ಠಾನಕ್ಕಾಗಿ ಶ್ರವಣ ದೋಷ ಫಲಾನುಭವಿಗಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸಾ ಸೇವೆಗಳು ಮತ್ತು ಶ್ರವಣಯಂತ್ರ ಸಾಧನಗಳನ್ನು ಒದಗಿಸಲು ಹಾಗೂ ಶಸ್ತ್ರಚಿಕಿತ್ಸೆಯನ್ನು ನೀಡಲು ಆಡಳಿತಾತ್ಮಕ ಅನುಮೋದನೆ.

ಮೇಕೆದಾಟು: ನಿರ್ಣಯಕ್ಕೆ ಒಪ್ಪಿಗೆ

ಮೇಕೆದಾಟು ಕುಡಿಯುವ ನೀರು ಯೋಜನೆಗೆ ಅನುಮೋದನೆ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ವಿಧಾನಮಂಡಲದ ಉಭಯ ಸದನಗಳ ನಿರ್ಣಯಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಕಣಿವೆ ರಾಜ್ಯಗಳ ನ್ಯಾಯಸಮ್ಮತ ಪಾಲನ್ನು ನಿರ್ಧರಿಸುವವರೆಗೆ ಗೋದಾವರಿ– ಕೃಷ್ಣಾ– ಪೆನ್ನಾರ್–ಕಾವೇರಿ– ವೈಗೈ– ಗುಂಡಾರ್ ನದಿ ಜೋಡಣೆ ಯೋಜನೆಯ ಡಿಪಿಆರ್ ಅನ್ನು ಅನುಮೋದಿಸಬಾರದು ಎಂಬ ವಿಧಾನಮಂಡಲದ ನಿರ್ಣಯಕ್ಕೆ ಅನುಮೋದನೆ ನೀಡಿ ಕೇಂದ್ರಕ್ಕೆ ಕಳುಹಿಸಲು ಸಭೆಯಲ್ಲಿ ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಲಾಯಿತು ಎಂದು ಮೂಲಗಳು ಹೇಳಿವೆ.

'ಬ್ರಿಟನ್ ಎಚ್‌ಪಿಐ ಹೊಸ ವೀಸಾ: ಭಾರತೀಯರಿಗೆ ಅನುಕೂಲ'

ಲಂಡನ್ (ಪಿಟಿಐ): ಭಾರತೀಯ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪದವೀಧರರು ಹೊಸ ಹೈ ಪೊಟೆನ್ಶಿಯಲ್ ಇಂಡಿವಿಜುವಲ್ (ಎಚ್‌ಪಿಐ) ವೀಸಾದಡಿ ಬ್ರಿಟನ್‌ಗೆ ವಲಸೆ ಬಂದು ನೌಕರಿ ಮಾಡುವ ಅವಕಾಶದ ಯೋಜನೆಯನ್ನು ಸೋಮವಾರ ಲಂಡನ್‌ನಲ್ಲಿ ಪ್ರಾರಂಭಿಸಲಾಯಿತು.

ಬ್ರಿಟನ್ ಹೊರತಾಗಿ ಭಾರತ ಸೇರಿ ವಿಶ್ವದ ಅಗ್ರ 50 ವಿಶ್ವವಿದ್ಯಾಲಯಗಳ ಪದವೀಧರರು ಎಚ್‌ಪಿಐ ವೀಸಾ ಮೂಲಕ ಬ್ರಿಟನ್‌ಗೆ ಪ್ರಯಾಣಿಸಬಹುದಾಗಿದೆ. ಬ್ರೆಕ್ಸಿಟ್ ನಂತರದ ಪಾಯಿಂಟ್-ಆಧಾರಿತ ಉತ್ತೇಜಕ ವರ್ಗದ ಎಚ್‌ಪಿಐ ವೀಸಾ ವ್ಯವಸ್ಥೆಯು ಯಾವುದೇ ರಾಷ್ಟ್ರೀಯತೆ ಲೆಕ್ಕಿಸದೇ ವಿಶ್ವದಾದ್ಯಂತದ ಅತ್ಯುತ್ತಮ ಮತ್ತು ಉಜ್ವಲ ಪ್ರತಿಭೆಗಳನ್ನು ದೇಶಕ್ಕೆ ಆಕರ್ಷಿಸುವ ಗುರಿ ಹೊಂದಿದೆ ಎಂದು ಭಾರತೀಯ ಮೂಲದ ಬ್ರಿಟನ್ ಸಂಪುಟ ಸಚಿವರಾದ ರಿಷಿ ಸುನಕ್ ಮತ್ತು ಪ್ರೀತಿ ಪಟೇಲ್ ಹೇಳಿದರು.

'ಅರ್ಹ ಪದವೀಧರರಿಗೆ 2 ವರ್ಷಗಳ ಕೆಲಸದ ವೀಸಾ ನೀಡಲಾಗುತ್ತದೆ. ಪಿಎಚ್.ಡಿ ಹೊಂದಿರುವವರಿಗೆ 3 ವರ್ಷಗಳ ವೀಸಾ ನೀಡಲಾಗುತ್ತದೆ. ಈ ಹೊಸ ವೀಸಾ ಕೊಡುಗೆಯು ಬ್ರಿಟನ್‌ಗೆ ವಿಶ್ವದೆಲ್ಲೆಡೆಯಿಂದ ಪ್ರತಿಭೆಗಳನ್ನು ಆಕರ್ಷಿಸುವುದನ್ನು ಮುಂದುವರಿಸಲಿದೆ' ಎಂದು ರಿಷಿ ಸುನಕ್ ಹೇಳಿದರು.

'ನಮ್ಮ ಅಂಕ ಆಧರಿತ ವಲಸೆ ವ್ಯವಸ್ಥೆಯ ಭಾಗವಾಗಿ ಈ ಹೊಸ ಅವಕಾಶವನ್ನು ಪ್ರಾರಂಭಿಸಿದ್ದು ಹೆಮ್ಮೆ ಎನಿಸುತ್ತದೆ. ಇದರಲ್ಲಿ ಸಾಮರ್ಥ್ಯ ಮತ್ತು ಪ್ರತಿಭೆಗೆ ಮೊದಲ ಅವಕಾಶ, ಯಾರು ಎಲ್ಲಿಂದ ಬರುತ್ತಾರೆ ಎನ್ನುವುದು ಮುಖ್ಯವಲ್ಲ' ಪ್ರೀತಿ ಪಟೇಲ್ ಹೇಳಿದರು.

ಕುವೆಂಪುಗೆ ಅವಮಾನ: ವಿರೋಧದ ಅಲೆ

ಒಂದನೇ ಪುಟದಿಂದ

'ಕುವೆಂಪು ಹಾಗೂ ನಾಡಗೀತೆಗೆ ಅವಮಾನ ಮಾಡಿರುವ ವಿಷಯ ಅತ್ಯಂತ ಸೂಕ್ಷ್ಮವಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಅವಹೇಳನ ಮಾಡಿದವರ ವಿರುದ್ಧ ಕ್ರಮ ಜರುಗಿಸಿದ್ದರೆ ಇಷ್ಟು ದೊಡ್ಡಮಟ್ಟಕ್ಕೆ ಹೋಗುತ್ತಿರಲಿಲ್ಲ. ಜಾಲತಾಣಗಳಲ್ಲಿ ಅವಹೇಳನ ಮಾಡಿದವರ ವಿರುದ್ಧ ಕ್ರಮ ಜರುಗಿಸುವುದು ಮೊದಲ ಆದ್ಯತೆಯಾಗಬೇಕು' ಎಂದು ಸ್ವಾಮೀಜಿ ಅವರು ನಿಷ್ಠುರವಾಗಿಯೇ ಸಚಿವರಿಗೆ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

'ನಾಡಗೀತೆಯನ್ನು ವ್ಯಂಗ್ಯವಾಡಿ ತಿರುಚಿದ್ದ ಪದ್ಯಭಾಗವೊಂದನ್ನು ಚಕ್ರತೀರ್ಥ ಅವರು 2017ರಲ್ಲಿ ತಮ್ಮ ಫೇಸ್‌ಬುಕ್ ಪುಟದಲ್ಲಿ ಹಾಕಿಕೊಂಡಿದ್ದರು. ನಾಡಗೀತೆಯನ್ನು ಒಳ ಉಡುಪಿಗೆ ಹೋಲಿಸಿ ಕಟಕಿಯಾಡಿದ್ದರು' ಎಂದು ಆಪಾದಿಸಲಾಗಿದೆ. 'ಅದು ತಾವು ಬರೆದಿದ್ದಲ್ಲ, ಯಾರೋ ಬರೆದಿದ್ದನ್ನು ಹಂಚಿಕೊಂಡಿದ್ದೆ' ಎಂದು ಚಕ್ರತೀರ್ಥ ಈಗ ಸ್ಪಷ್ಟನೆ ಕೊಟ್ಟಿದ್ದಾರೆ.

ಮೇ 28ರಂದು ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿದ್ದ ನಿರ್ಮಲಾನಂದನಾಥ ಸ್ವಾಮೀಜಿ, 'ಈ ವ್ಯಕ್ತಿಯ ವಿರುದ್ಧ ಸರ್ಕಾರವು ಸೈಬರ್ ಕ್ರೈಂ ಕಾಯ್ದೆಯಡಿ ಕ್ರಮ ಜರುಗಿಸುತ್ತದೆ ಎಂಬ ಭರವಸೆ ಇದೆ' ಎಂದು ಹೇಳಿದ್ದರು.

ಮರುದಿನ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಸ್ವಾಮೀಜಿಗಳ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಸಚಿವರ ಜತೆಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿದ್ದರು.

ರೋಹಿತ್ ಬೆಂಬಲಕ್ಕೆ ಬಿಜೆಪಿ: ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿದ ಬಿಜೆಪಿ ನಾಯಕರು, ರೋಹಿತ್ ಬೆಂಬಲಕ್ಕೆ ನಿಲ್ಲುವುದಾಗಿ ಪ್ರಕಟಿಸಿದ್ದಾರೆ.

ಸಂಸದ ಡಿ.ವಿ. ಸದಾನಂದಗೌಡ, ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಸೇರಿದಂತೆ ಬಿಜೆಪಿ ನಾಯಕರು, ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದರು.

ಕ್ರಮಕ್ಕೆ ಕಸಾಪ ಆಗ್ರಹ

ಕುವೆಂಪು ಅವರನ್ನು ನಿಂದಿಸಿ, ನಾಡಗೀತೆಯನ್ನು ತಿರುಚಿ ಬರೆದವರ ವಿರುದ್ಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಆಗ್ರಹಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಕಸಾಪ ರಾಜ್ಯ ಘಟಕದ ಅಧ್ಯಕ್ಷ ಮಹೇಶ್ ಜೋಶಿ, 'ಕುವೆಂಪು ಅವರ 'ಜಯಭಾರತ ಜನನಿಯ ತನುಜಾತೆ' ಕವಿತೆಯನ್ನು 'ನಾಡಗೀತೆ' ಮಾಡಬೇಕೆಂದು ಮೊದಲು ನಿರ್ಧರಿಸಿದ ಕಸಾಪ, 1971ರಲ್ಲಿ ಕುವೆಂಪು ಅವರ ಸಮ್ಮತಿ ಪಡೆದು ತನ್ನ ಎಲ್ಲ ಕಾರ್ಯಕ್ರಮಗಳಲ್ಲೂ ಅದನ್ನು ಹಾಡಿಸುತ್ತಿತ್ತು. 2004ರಲ್ಲಿ ಈ ಸಂಬಂಧ ಕರ್ನಾಟಕ ಸರ್ಕಾರ ನಾಡಗೀತೆಯನ್ನಾಗಿ ನಿಗದಿಪಡಿಸಿ ಆದೇಶ ಹೊರಡಿಸಿತು.

'ದಾರ್ಶನಿಕ ಕವಿ ಕುವೆಂಪು ಅವರನ್ನು ಅರ್ಥೈಸಿಕೊಂಡಿಲ್ಲದಿರುವವರು ಮಾತ್ರ ನಾಡಗೀತೆ ಮತ್ತು ಕುವೆಂಪು ವಿರುದ್ಧ ಟೀಕಿಸುವಂತಹ ಅಡ್ಡದಾರಿ ಹಿಡಿಯುತ್ತಾರೆ. ಇಂತಹ ವ್ಯಕ್ತಿಗಳ ನಡೆಯನ್ನು ಕಸಾಪದ ಎಲ್ಲ ಹಂತಗಳ ಘಟಕಗಳೂ ಒಕ್ಕೊರಲಿನಿಂದ ಖಂಡಿಸುತ್ತವೆ' ಎಂದೂ ಅವರು ತಿಳಿಸಿದ್ದಾರೆ.

ಚಕ್ರತೀರ್ಥ ಸಮಿತಿ ರದ್ದು: ಡಿಕೆಶಿ ಆಗ್ರಹ

ಬೆಂಗಳೂರು: ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆಗೆ ನೇಮಿಸಿರುವ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

'ಕುವೆಂಪು ಮತ್ತು ನಾಡಗೀತೆಯನ್ನು ಅವಮಾನಿಸಿದ್ದ ವ್ಯಕ್ತಿಯೇ ಪಠ್ಯಪುಸ್ತಕಗಳ ಪರಿಷ್ಕರಣೆ ಹೆಸರಿನಲ್ಲಿ ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿಸಲು ಹೊರಟಿದ್ದಾರೆ. ರೋಹಿತ್ ಚಕ್ರತೀರ್ಥ ಅವರಿಗೆ ಕನ್ನಡ ಭಾಷೆ, ಕನ್ನಡ ಬಾವುಟ, ನಾಡಗೀತೆಗಳ ಕುರಿತು ಗೌರವವೇ ಇಲ್ಲ. ಇಂತಹ ವ್ಯಕ್ತಿಯ ನೇತೃತ್ವದ ಸಮಿತಿ ಪರಿಷ್ಕರಣೆ ಮಾಡಿರುವ ಪಠ್ಯವನ್ನು ಮಕ್ಕಳಿಗೆ ಬೋಧಿಸಬಾರದು. ತಕ್ಷಣವೇ ಹೊಸ ಪಠ್ಯ ಪುಸ್ತಕಗಳನ್ನು ಹಿಂಪಡೆದು, ಹಳೆಯ ಪಠ್ಯವನ್ನೇ ಬೋಧಿಸಬೇಕು' ಎಂದು ಸೋಮವಾರ ಹೇಳಿದರು.

'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಬಿಜೆಪಿ ಸರ್ಕಾರದಿಂದ ರಾಜ್ಯದಲ್ಲಿ ಪಠ್ಯಪುಸ್ತಕಗಳ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದೆ. ಈ ವಿಚಾರದಲ್ಲಿ ಕಾಂಗ್ರೆಸ್‌ನವರು ಮಾತನಾಡುವುದು ಪಕ್ಕ ಕ್ಕಿಡಿ. ಬಿಜೆಪಿ ಶಾಸಕರಾದ ಎಚ್.ವಿಶ್ವನಾಥ್ ಏನು ಹೇಳಿದ್ದಾರೆ ಎಂದು ನೋಡಿ. ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ವಿಶ್ವನಾಥ್ ಅವರ ಹೇಳಿಕೆಗೆ ಉತ್ತರ ನೀಡಲಿ. ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯ ರಚನೆಯೇ ಸರಿಯಿಲ್ಲ. ಆ ಸಮಿತಿಯ ಮುಖ್ಯಸ್ಥರೇ ಸರಿ ಇಲ್ಲ' ಎಂದರು.

ಟಿಕಾಯತ್‌ಗೆ ಏಟು: 'ಮೋದಿಗೆ ಜೈ'



ಬೆಂಗಳೂರಿನ ಗಾಂಧಿ ಭವನದಲ್ಲಿ ರೈತ ಮುಖಂಡರು ಹಾಗೂ ಭಾರತ್ ರಕ್ಷಣಾ ವೇದಿಕೆ ಕಾರ್ಯಕರ್ತರ ನಡುವೆ ನಡೆದ ಮಾರಾಮಾರಿ. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಒಂದನೇ ಪುಟದಿಂದ

ಮುಖಂಡರ ಹೆಸರಿನಲ್ಲಿ ಹಣ ಕೇಳಿದ್ದ ಕೋಡಿಹಳ್ಳಿ ಜೊತೆಗಿನ ಒಡನಾಟದ ಬಗ್ಗೆ ಪತ್ರಕರ್ತರು ಕವಿತಾಗೆ ಪ್ರಶ್ನೆ ಕೇಳಿದ್ದರು. ಅದಕ್ಕೆ ಕವಿತಾ, ಹಿಂದಿಯಲ್ಲಿ ಉತ್ತರಿಸಿದ್ದರು. ಆಕ್ಷೇಪ ವ್ಯಕ್ತಪಡಿಸಿದ್ದ ಕೆಲವರು, ಕನ್ನಡದಲ್ಲಿ ಮಾತನಾಡುವಂತೆ ಹೇಳಿದ್ದರು. 'ನನಗೆ ಕನ್ನಡ ಅರ್ಥ ಆಗುತ್ತೆ. ಆದರೆ, ಮಾತನಾಡಲು ಬರುವುದಿಲ್ಲ' ಎಂದು ಕವಿತಾ ಸ್ಪಷ್ಟಪಡಿಸಿದ್ದರು. ನಂತರ, ಇಂಗ್ಲಿಷ್‌ನಲ್ಲಿ ಮಾತು ಮುಂದುವರಿಸಿದ್ದರು.

ಏಕಾಏಕಿ ವೇದಿಕೆ ಏರಿದ್ದ ಆರೋಪಿ ಶಿವಕುಮಾರ್, ಸುದ್ದಿವಾಹಿನಿಯೊಂದರ ಮೈಕ್‌ನಿಂದ ಟಿಕಾಯತ್ ಅವರಿಗೆ ಹೊಡೆದಿದ್ದ. ಅದೇ ಸಮಯಕ್ಕೆ ಮತ್ತೊಬ್ಬ ಆರೋಪಿ ದಿಲೀಪ್, ವೇದಿಕೆಗೆ ನುಗ್ಗಿ ರಾಕೇಶ್ ಮುಖಕ್ಕೆ ಮೇಲೆ ಮಸಿ ಎರಚಿದ್ದ. ಅಕ್ಕ–ಪಕ್ಕದಲ್ಲಿ ಕುಳಿತಿದ್ದವರಿಗೂ ಮಸಿ ತಾಗಿತು. ಆಗ, ರೈತ ಸಂಘಟನೆ ಪದಾಧಿಕಾರಿಗಳು, ಇಬ್ಬರನ್ನೂ ಹಿಡಿದು ವೇದಿಕೆಯಿಂದ ಕೆಳಗೆ ಎಳೆದುತಂದು ಥಳಿಸಿದರು.

ವೇದಿಕೆ ಮುಂಭಾಗದಲ್ಲಿದ್ದ ಭರತ್ ಶೆಟ್ಟಿ ಹಾಗೂ ಇತರೆ ಆರೋಪಿಗಳು, ಪ್ರಧಾನಿ ನರೇಂದ್ರ ಮೋದಿ ಭಾವಚಿತ್ರವಿದ್ದ ಪೋಸ್ಟರ್ ಪ್ರದರ್ಶಿಸಿ, 'ಮೋದಿ... ಮೋದಿ....' ಎಂದು ಘೋಷಣೆ ಕೂಗಿದರು. ಪದಾಧಿಕಾರಿಗಳ ಮೇಲೆ ಕುರ್ಚಿಯಿಂದ ಹಲ್ಲೆ ಮಾಡಿದರು. ಕೆಲ ನಿಮಿಷ ಮಾರಾಮಾರಿಯೇ ನಡೆಯಿತು.

ರೈತರ ಮನವಿ ಮೇರೆಗೆ ಪೊಲೀಸರೆಲ್ಲರೂ ಸಭಾಭವನದ ಹೊರಗೆ ನಿಂತಿದ್ದರು. ಗಲಾಟೆ ನಡೆಯುತ್ತಿದ್ದಂತೆ ಒಳಪ್ರವೇಶಿಸಿದ ಪೊಲೀಸರು, ಮೂವರೂ ಆರೋಪಿಗಳನ್ನು ವಶಕ್ಕೆ ಪಡೆದು ಗಸ್ತು ವಾಹನದಲ್ಲಿ ಠಾಣೆಗೆ ಕರೆದೊಯ್ದರು. ಈ ವೇಳೆಯೂ ಆರೋಪಿಗಳು, 'ನಕಲಿ ರೈತ ಹೋರಾಟಗಾರರಿಗೆ ಧಿಕ್ಕಾರ' ಹಾಗೂ 'ಮೋದಿ...ಮೋದಿ' ಎಂಬ ಘೋಷಣೆ ಕೂಗಿದರು.



ಶಾಸಕ ಬಿ.ಎಸ್. ಯಡಿಯೂರಪ್ಪ ಹಾಗೂ ವಿಜಯೇಂದ್ರ ಜೊತೆಯಲ್ಲಿ ಆರೋಪಿ ಭರತ್ ಶೆಟ್ಟಿ (ಎಡ ಬದಿ)

ಬಿಎಸ್‌ವೈ, ವಿಜಯೇಂದ್ರ ಜೊತೆ ನಂಟು

'ಬಂಧಿತ ಭರತ್ ಶೆಟ್ಟಿ, ಬಿಜೆಪಿ ಮುಖಂಡರ ಜೊತೆಯೂ ಒಡನಾಟ ಹೊಂದಿದ್ದನೆಂದು ಗೊತ್ತಾಗಿದೆ. ಈ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಮಗ ವಿಜಯೇಂದ್ರ ಜೊತೆಯಲ್ಲಿ ಭರತ್ ಶೆಟ್ಟಿ ಕೆಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ. ಅದರ ಫೋಟೊಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಲಭ್ಯವಾಗಿದ್ದು, ಪರಿಶೀಲಿಸಲಾಗುತ್ತಿದೆ' ಎಂದೂ ತಿಳಿಸಿವೆ.

'ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ದೂರು'

'ಕೋಡಿಹಳ್ಳಿ ಚಂದ್ರಶೇಖರ್ ಒಬ್ಬ ವಂಚಕ ಎಂಬುದು ಮಾಧ್ಯಮದಲ್ಲಿ ಪ್ರಸಾರವಾದ ಸುದ್ದಿಯಿಂದ ತಿಳಿಯಿತು. ಈ ಬಗ್ಗೆ ತನಿಖೆ ನಡೆಸುವಂತೆ ಪೊಲೀಸರಿಗೆ ದೂರು ನೀಡಲು ತೀರ್ಮಾನಿಸಲಾಗಿದೆ' ಎಂದು ರಾಷ್ಟ್ರೀಯ ರೈತ ಮುಖಂಡ ಯುದ್ಧವೀರ್ ಸಿಂಗ್ ಹೇಳಿದರು.

ನಗರದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೆವೆನ್ ಸ್ಟಾರ್ ಹಾಗೂ ಐಷಾರಾಮಿ ಹೋಟೆಲ್‌ನಲ್ಲೇ ಚಂದ್ರಶೇಖರ್ ಹೆಚ್ಚು ತಂಗುತ್ತಿದ್ದರು. ಅವರ ಮೇಲೆ ನಮಗೂ ಅನುಮಾನವಿತ್ತು' ಎಂದರು.

'ಚಂದ್ರಶೇಖರ್ ಕೃತ್ಯದಲ್ಲಿ ಇತರ ಮುಖಂಡರ ಹೆಸರು ಸೇರಿಸುವುದು ಸರಿಯಲ್ಲ. ಪುರಾವೆ ಇಲ್ಲದ ಈ ರೀತಿ ಮಾಡುವವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ' ಎಂದೂ ತಿಳಿಸಿದರು.

'ಬಿಜೆಪಿ ಷಡ್ಯಂತ್ರ'

ರಾಕೇಶ್ ಟಿಕಾಯತ್ ಮೇಲೆ ನಡೆದಿರುವ ದಾಳಿಯ ಹಿಂದೆ ಬಿಜೆಪಿ ಕೈವಾಡವಿದೆ. ಕೃತ್ಯ ಎಸಗಿದ್ದ ಆರೋಪಿಗಳೇ, 'ಜೈ ಮೋದಿ' ಎಂಬ ಘೋಷಣೆ ಕೂಗಿ ಬಿಜೆಪಿ ಬಗ್ಗೆ ಸುಳಿವು ನೀಡಿದ್ದಾರೆ. ದಾಳಿ ಹಿಂದಿರುವ ಎಲ್ಲರನ್ನೂ ಪತ್ತೆ ಮಾಡಿ ಬಂಧಿಸಬೇಕು

ಚುಕ್ಕಿ ನಂಜುಂಡಸ್ವಾಮಿ ರೈತ ನಾಯಕಿ

'ಪ್ರಜಾಪ್ರಭುತ್ವದ ವಿನಾಶ'

ದೇಶದಲ್ಲಿ ಪತ್ರಿಕಾಗೋಷ್ಠಿಯಲ್ಲೂ ಮಾತನಾಡಲು ಆಗದ ಸ್ಥಿತಿ ನಿರ್ಮಾಣವಾಗಿದ್ದು, ಪ್ರಜಾಪ್ರಭುತ್ವದ ವಿನಾಶವಾಗುತ್ತಿದೆ. ದಾಳಿಕೋರರು ಗೂಂಡಾ ವರ್ತನೆ ತೋರಿ, ಪ್ರಜಾಪ್ರಭುತ್ವದ ಕೊಲೆ ಮಾಡಿದ್ದಾರೆ. 'ಮೋದಿ ಜಿಂದಾಬಾದ್' ಎಂಬುದಾಗಿ ಆರೋಪಿಗಳೇ ಘೋಷಣೆ ಕೂಗಿದ್ದು, ಸರ್ಕಾರವೇ ಕುಮ್ಮಕ್ಕು ನೀಡಿರುವ ಅನುಮಾನವಿದೆ. ನಿಷ್ಪಕ್ಷಪಾತ ಹಾಗೂ ಪ್ರಮಾಣಿಕ ತನಿಖೆ ನಡೆಸಿ, ಷಡ್ಯಂತ್ರದ ಹಿಂದಿರುವ ಶಕ್ತಿಗಳನ್ನು ಹೊರಗೆ ತರಬೇಕು

ಯುದ್ಧವೀರ್ ಸಿಂಗ್, ರೈತ ಮುಖಂಡ

'ಕನ್ನಡ ನಾಡಿಗೆ ಮಾಡಿದ ಅಪಮಾನ'

ಈ ದಾಳಿ, ಕನ್ನಡ ನಾಡಿಗೆ ಮಾಡಿರುವ ಅಪಮಾನ. ಇಂಥ ಹೀನ ಕೃತ್ಯ ಎಸಗಿರುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

ಬಡಗಲಪುರ ನಾಗೇಂದ್ರ, ರೈತ ಮುಖಂಡ

ರಾಜ್ಯದಾದ್ಯಂತ ಇಂದು ಕಪ್ಪು ದಿನಾಚರಣೆ

ಬೆಂಗಳೂರು: ರೈತ ಮುಖಂಡ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ಮಾಡಿ, ಮಸಿ ಎರಚಿರುವ ಘಟನೆಯನ್ನು ಖಂಡಿಸಿ ರಾಜ್ಯದಾದ್ಯಂತ ಮೇ 31ರಂದು ಕಪ್ಪು ದಿನ ಆಚರಿಸಲು ರೈತ ಸಂಘಟನೆ ಮುಖಂಡರು ಕರೆ ನೀಡಿದ್ದಾರೆ.

'ಟಿಕಾಯತ್ ಮೇಲಾದ ದಾಳಿ, ಇಡೀ ರೈತ ಸಮುದಾಯ ಮೇಲಾದ ದಾಳಿ ಆಗಿದೆ. ಇದನ್ನು ಖಂಡಿಸಿ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು. ಕಪ್ಪು ಪಟ್ಟಿ ಧರಿಸಿ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಹಲವು ಸಂಘಟನೆಗಳು ಪ್ರತಿಭಟನೆಗೆ ಬೆಂಬಲ ನೀಡುತ್ತಿವೆ' ಎಂದು ರೈತ ಮುಖಂಡರಾದ ಕೆ.ಟಿ. ಗಂಗಾಧರ, ಬಡಗಲಪುರ ನಾಗೇಂದ್ರ, ಜೆ.ಸಿ. ಬಯ್ಯಾರೆಡ್ಡಿ ತಿಳಿಸಿದ್ದಾರೆ.

ಅಮಾನವೀಯ ಘಟನೆ: ಆರಗ

ಬೆಂಗಳೂರು: ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಿರುವುದನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಖಂಡಿಸಿದ್ದು, ಹಲ್ಲೆ ನಡೆಸಿದವರು ಯಾವುದೇ ಸಂಘಟನೆ, ಪಕ್ಷಕ್ಕೆ ಸೇರಿದವರಾದರೂ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ತಿಳಿಸಿದರು.

'ಪೊಲೀಸರು ಮೂವರನ್ನು ವಶಕ್ಕೆ ಪಡೆದು, ತನಿಖೆ ನಡೆಸುತ್ತಿದ್ದಾರೆ. ಇದೊಂದು ಅಮಾನವೀಯ ಘಟನೆ. ಯಾವುದೇ ರಾಜಕೀಯ ಪಕ್ಷಗಳು ಇಂತಹ ಘಟನೆಗಳಿಗೆ ಕುಮ್ಮಕ್ಕು ನೀಡುವುದಿಲ್ಲ' ಎಂದರು.

'ಪಠ್ಯಪುಸ್ತಕ ವಿವಾದ ಮರೆಮಾಚಲು ಈ ಪ್ರಕರಣ ಸೃಷ್ಟಿಸಲಾಗಿದೆ' ಎಂಬ ಡಿ.ಕೆ.ಶಿವಕುಮಾರ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಇನ್ನೊಂದು ವರ್ಷದಲ್ಲಿ ವಿಧಾನಸಭೆ ಚುನಾವಣೆ ಬರುತ್ತಿದೆ. ಆದ್ದರಿಂದ ಕಾಂಗ್ರೆಸ್ ಇಲ್ಲ ಸಲ್ಲದ ಆರೋಪ ಮಾಡುತ್ತಿದೆ.' ಎಂದರು.



ಪ್ರಕರಣಕ್ಕೆ ಎಎಪಿ ಸರ್ಕಾರದ ಅಸಮರ್ಥತೆಯೇ ಕಾರಣ– ಸಿಧು ತಂದೆ ಆರೋಪ

ಮೂಸೆವಾಲಾ ಹತ್ಯೆ: ನ್ಯಾಯಾಂಗ ತನಿಖೆಗೆ



ಸಿಧು ಮೂಸೆವಾಲಾ

ಚಂಡೀಗಡ(ಪಿಟಿಐ): 'ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣದ ತನಿಖೆಗೆ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಲಾಗುವುದು' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಸೋಮವಾರ ಪ್ರಕಟಿಸಿದ್ದಾರೆ.

ಮೂಸೆವಾಲಾ ಅವರ ತಂದೆ ಬಲ್ ಕೌರ್ ಸಿಂಗ್ ಅವರು, 'ತಮ್ಮ ಮಗನ ಹತ್ಯೆಯ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು. ಸಿಬಿಐ ಮತ್ತು ಎನ್‌ಐಎ ಕೂಡ ತನಿಖೆಯಲ್ಲಿ ಭಾಗಿಯಾಗಬೇಕು' ಎಂದು ಮಾನ್ ಅವರಿಗೆ ಪತ್ರ ಬರೆದಿದ್ದರು. ಇದಾದ ಬಳಿಕ ಮಾನ್ ನ್ಯಾಯಾಂಗ ತನಿಖೆಗೆ ವಹಿಸುವ ನಿರ್ಧಾರ ಪ್ರಕಟಿಸಿದರು.

'ನನ್ನ ಮಗನ ಭದ್ರತೆ ಪರಿಶೀಲಿಸಿದ ಮತ್ತು ಭದ್ರತಾ ವ್ಯವಸ್ಥೆ ಹಿಂಪಡೆದ ಅಧಿಕಾರಿಗಳ ಕ್ರಮವನ್ನು ಪರಿಶೀಲಿಸಬೇಕು. ನನ್ನ ಮಗ ಎಲ್ಲಿದ್ದಾನೆ ಮತ್ತು ಅವನು ಯಾವಾಗ ಹಿಂತಿರುಗುತ್ತಾನೆ ಎಂದು ಸಿಧು ಅವರ ತಾಯಿ ಕೇಳುತ್ತಿದ್ದಾರೆ. ನಾನು ಏನು ಉತ್ತರ ನೀಡಲಿ?' ನನಗೆ ನ್ಯಾಯ ಸಿಗುತ್ತದೆ ಎಂದು ಭಾವಿಸುತ್ತೇನೆ. ನಮ್ಮ ಕುಟುಂಬದವರು ಸಿಧುವಿನ ಶವದ ಮರಣೋತ್ತರ ಪರೀಕ್ಷೆಗೆ ಒಪ್ಪುತ್ತಿಲ್ಲ' ಎಂದೂ ಬಲ್‌ಕೌರ್ ಸಿಂಗ್ ಪತ್ರದಲ್ಲಿ ಬರೆದಿದ್ದಾರೆ.

ಮೂಸೆವಾಲಾ ಹತ್ಯೆಯ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮಾನ್ ಅವರು, 'ಪಂಜಾಬ್ ಸರ್ಕಾರವು ನ್ಯಾಯಾಂಗ ತನಿಖೆಗೆ ಆಯೋಗ ರಚಿಸಿದೆ. ಎನ್‌ಐಎ ಸೇರಿ ಕೇಂದ್ರದ ಯಾವುದೇ ತನಿಖಾ ಸಂಸ್ಥೆಗೆ ಸಂಪೂರ್ಣ ಸಹಕಾರ ನೀಡಲಿದೆ' ಎಂದು ಅವರು ತಿಳಿಸಿದ್ದಾರೆ



ಸಿಧು ಮೂಸೆವಾಲಾ ಅವರ ಹತ್ಯೆ ಖಂಡಿಸಿ ದೆಹಲಿಯಲ್ಲಿ ಸೋಮವಾರ ನಡೆದ ಪ್ರತಿಭಟನೆ ವೇಳೆ ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್ ಅವರು ಪೊಲೀಸರು ಇರಿಸಿದ್ದ ಬ್ಯಾರಿಕೇಡ್ ಮೇಲೆ ಹತ್ತಿದರು —ಪಿಟಿಐ ಚಿತ್ರ

'ಗ್ಯಾಂಗ್‌ಸ್ಟರ್ ಎಂದಿಲ್ಲ'

ಚಂಡೀಗಡ: 'ಸಿಧು ಮೂಸೆವಾಲಾ ಅವರನ್ನು ಎಂದಿಗೂ ಗ್ಯಾಂಗ್‌ಸ್ಟರ್ ಎಂದು ಕರೆದಿಲ್ಲ. ಅವರಿಗೆ ಗ್ಯಾಂಗ್‌ಸ್ಟರ್‌ಗಳ ಜೊತೆಗೆ ಸಂಬಂಧವಿದೆ ಎಂದೂ ಹೇಳಿಲ್ಲ' ಎಂಬುದಾಗಿ ಪಂಜಾಬ್ ಡಿಜಿಪಿ ವಿ.ಕೆ. ಭಾವರಾ ಸೋಮವಾರ ಸ್ಪಷ್ಟಪಡಿಸಿದ್ದಾರೆ. ಮೂಸೆವಾಲಾ ಅವರ ಬಗ್ಗೆ ಅಪಾರ ಗೌರವವಿದೆ. ಅವರು ಪಂಜಾಬ್‌ನ ಪ್ರಸಿದ್ಧ ಕಲಾವಿದ ಮತ್ತು 'ಸಾಂಸ್ಕೃತಿಕ ರಾಯಭಾರಿ'ಯಾಗಿದ್ದರು ಎಂದೂ ಭಾವರಾ ಹೇಳಿದ್ದಾರೆ.

ಸಿಧು ಮೂಸೆವಾಲಾ ಹತ್ಯೆ ಪ್ರಕರಣಕ್ಕೆ ಗ್ಯಾಂಗ್‌ವಾರ್ ಜೊತೆ ಸಂಬಂಧ ಕಲ್ಪಿಸಿರುವ ಡಿಜಿಪಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿ ಮೂಸೆವಾಲಾ ತಂದೆ ಬಲ್‌ಕೌರ್ ಸಿಂಗ್ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು.

ಐವರು ಆರೋಪಿಗಳ ಬಂಧನ

ಡೆಹ್ರಾಡೂನ್: ಸಿಧು ಮೂಸೆವಾಲಾ ಹತ್ಯೆಗೆ ಸಂಬಂಧಿಸಿ ಪಂಜಾಬ್ ಪೊಲೀಸರು ಸೋಮವಾರ ಐವರನ್ನು ಡೆಹ್ರಾಡೂನ್‌ನ ಶಿಮ್ಲಾ ಬೈಪಾಸ್‌ನಲ್ಲಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳನ್ನು ಪೊಲೀಸರು ವಿಚಾರಣೆಗಾಗಿ ಪಂಜಾಬ್‌ಗೆ ಕರೆದೊಯ್ದಿದ್ದಾರೆ. ಬಂಧಿತರು ಉತ್ತರಾಖಂಡದ ಸಿಖ್ಖರ ದೇಗುಲ ಹೇಮಕುಂಡ್ ಸಾಹಿಬ್ ನಿಂದ ಹಿಂತಿರುಗುತ್ತಿದ್ದರು.

ತಂದೆಯ ಎದುರಲ್ಲೇ ಮಗನ ಹತ್ಯೆ

ಮಗ ಭದ್ರತಾ ಸಿಬ್ಬಂದಿ ಜೊತೆಗೆ ತೆರಳದ ವಿಚಾರ ಅರಿತು ಅವರ ತಂದೆ ಬಲ್‌ಕೌರ್ ಸಿಂಗ್ ಅವರು ಭದ್ರತಾ ಸಿಬ್ಬಂದಿ ಜೊತೆ ಮಗನನ್ನು ಹಿಂಬಾಲಿಸಿದ್ದರು ಮತ್ತು ಮಗ ಗುಂಡೇಟಿಗೆ ಬಲಿಯಾಗುವುದನ್ನು ಕಣ್ಣಾರೆ ಕಂಡಿದ್ದರು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಕೊರೊಲ್ಲಾ ಕಾರು ಮತ್ತು ಬೊಲೆರೊ ವಾಹನದಲ್ಲಿ ಹಿಂಬಾಲಿಸಿದ್ದ ದುಷ್ಕರ್ಮಿಗಳು ಮಗನ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದೂ ಬಲ್‌ಕೌರ್ ಸಿಂಗ್ ತಿಳಿಸಿದ್ದಾರೆ. ಸಿಧು ಮೇಲೆ 30 ಸುತ್ತು ಗುಂಡು ಹಾರಿಸಿರುವ ಅಂಶ ಎಫ್‌ಐಆರ್‌ನಲ್ಲಿದೆ.

ವಿವಿಧೆಡೆ ಪ್ರತಿಭಟನೆ

ನವದೆಹಲಿ: ಸಿಧು ಮೂಸೆವಾಲಾ ಹತ್ಯೆಗೆ ಆಮ್ ಆದ್ಮಿ ಪಕ್ಷವೇ (ಎಎಪಿ) ಹೊಣೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸದ ಬಳಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ದೆಹಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯನ್ನು ಕೇಜ್ರಿವಾಲ್ ಅವರ ನಿವಾಸಕ್ಕಿಂತ ಸ್ವಲ್ಪ ದೂರದಲ್ಲಿ ಪೊಲೀಸರು ತಡೆದರು.

'ಮೂಸೆವಾಲಾ ಅವರಿಗೆ ಬೆದರಿಕೆ ಇದ್ದರೂ, ಭದ್ರತೆ ಹಿಂಪಡೆದಿರುವುದಕ್ಕೆ ಕೇಜ್ರಿವಾಲ್ ಉತ್ತರಿಸಬೇಕು' ಅನಿಲ್ ಕುಮಾರ್ ಒತ್ತಾಯಿಸಿದರು.

ಜಮ್ಮುವಿನಲ್ಲಿ ಪ್ರತಿಭಟನೆ: ಈ ಹತ್ಯೆ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ರಾಜೀನಾಮೆ ನೀಡಬೇಕು ಎಂದೂ ಆಗ್ರಹಿಸಿದ್ದಾರೆ.

ಸರ್ಕಾರ ವಜಾಕ್ಕೆ ಆಗ್ರಹ: ಪಂಜಾಬ್ ರಾಜ್ಯಪಾಲ ಬನ್ವಾರಿ ಲಾಲ್ ಪುರೋಹಿತ್ ಅವರನ್ನು ಭೇಟಿಯಾದ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ನಿಯೋಗವು, ಎಎಪಿ ಸರ್ಕಾರ ವಜಾಗೊಳಿಸುವಂತೆ ಆಗ್ರಹಿಸಿದೆ.

ಗೊಂದಲದಲ್ಲಿ ಜೆಡಿಎಸ್; 3ನೇ ಅಭ್ಯರ್ಥಿ ಅಂತಿಮಗೊಳಿಸಿದ ಬಿಜೆಪಿ

ಕಾಂಗ್ರೆಸ್: 2ನೇ ಅಭ್ಯರ್ಥಿ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಲು ದಿಢೀರ್ ನಿರ್ಧಾರ ಕೈಗೊಂಡಿರುವ ಕಾಂಗ್ರೆಸ್, ಪಕ್ಷದ ನಾಯಕ ಕೆ. ರೆಹಮಾನ್ ಖಾನ್ ಅವರ ಮಗ ಮನ್ಸೂರ್ ಅಲಿ ಖಾನ್ ಅವರಿಗೆ ಟಿಕೆಟ್ ನೀಡಿದೆ. ಪಕ್ಷದ ಮೊದಲನೇ ಅಭ್ಯರ್ಥಿ ಜೈರಾಂ ರಮೇಶ್ ಅವರೊಂದಿಗೆ ಖಾನ್ ಕೂಡ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಒಂದು ಸ್ಥಾನ ಪಡೆಯಲು 45 ಶಾಸಕರ ಬೆಂಬಲ ಅಗತ್ಯವಿದೆ. ವಿಧಾನ ಸಭೆಯಲ್ಲಿ ಮೂರೂ ಪಕ್ಷಗಳ ಬಲಾಬಲದ ಆಧಾರದಲ್ಲಿ ಬಿಜೆಪಿ ಎರಡು ಮತ್ತು ಕಾಂಗ್ರೆಸ್ ಒಂದು ಸ್ಥಾನವನ್ನು ನಿರಾಯಾಸವಾಗಿ ಗೆಲ್ಲಬಹುದು. ಜೆಡಿಎಸ್ ಪಕ್ಷಕ್ಕೆ ಒಂದು ಸ್ಥಾನ ಗೆಲ್ಲುವಷ್ಟು ಮತಗಳಿಲ್ಲ. ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸಲು ಜೆಡಿಎಸ್ ಸಿದ್ಧತೆ ನಡೆಸುತ್ತಿದೆ. ಈ ಮಧ್ಯೆಯೇ ಕಾಂಗ್ರೆಸ್ ಎರಡನೇ ಅಭ್ಯರ್ಥಿ ಕಣಕ್ಕಿಳಿಸುವ ಮೂಲಕ ಹೊಸ ದಾಳ ಉರುಳಿಸಿದೆ.

ಇಕ್ಕಟ್ಟಿಗೆ ಸಿಲುಕಿಸಲು ತಂತ್ರ: ಜೆಡಿಎಸ್ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವುದಕ್ಕಾಗಿಯೇ ಕಾಂಗ್ರೆಸ್ ತನ್ನ ಎರಡನೇ ಅಭ್ಯರ್ಥಿಯನ್ನಾಗಿ ಅಲ್ಪಸಂಖ್ಯಾತರನ್ನು ಕಣಕ್ಕಿಳಿಸಿದೆ. ಜೆಡಿಎಸ್ ಮನ್ಸೂರ್ ಅಲಿ ಖಾನ್ ಅವರಿಗೆ ಬೆಂಬಲ ನೀಡದಿದ್ದರೆ ಆ ಪಕ್ಷ ಅಲ್ಪಸಂಖ್ಯಾತರ ವಿರೋಧಿ ಎಂಬ ಸಂದೇಶ ರವಾನಿಸಿದಂತಾಗುತ್ತದೆ ಎಂಬ ಲೆಕ್ಕಾಚಾರ ಕಾಂಗ್ರೆಸ್ ನಾಯಕರಲ್ಲಿದೆ.

ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಕಸರತ್ತು ನಡೆಸುತ್ತಿರುವ ಕುಪೇಂದ್ರ ರೆಡ್ಡಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರನ್ನು ಭೇಟಿಮಾಡಿ ಕಾಂಗ್ರೆಸ್‌ನ ಹೆಚ್ಚುವರಿ ಮತಗಳನ್ನು ತಮಗೆ ನೀಡುವಂತೆ ಮನವಿ ಮಾಡಿದ್ದರು. ಆದರೆ, ಸಿದ್ದರಾಮಯ್ಯ ಅವರನ್ನು ಭೇಟಿಮಾಡಿ ಬೆಂಬಲ ಕೋರಲಿಲ್ಲ. ಇದರಿಂದ ಸಿಟ್ಟಿಗೆದ್ದ ಸಿದ್ದರಾಮಯ್ಯ ಪಕ್ಷದಿಂದಲೇ ಎರಡನೇ ಅಭ್ಯರ್ಥಿ ಕಣಕ್ಕಿಳಿಸುವ ತಂತ್ರ ಹೂಡಿದರು ಎಂಬ ಮಾತೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಕುಪೇಂದ್ರ ರೆಡ್ಡಿಯೇ ಅಭ್ಯರ್ಥಿ: ಕುಪೇಂದ್ರ ರೆಡ್ಡಿ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ನಿರ್ಧಾರವನ್ನು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಕೈಗೊಂಡಿದ್ದಾರೆ. ಸೋಮವಾರ ಸಂಜೆ ಕೆಲ ಪ್ರಮುಖರ ಜತೆ ಚರ್ಚೆ ನಡೆಸಿದ ಅವರು, ಮಂಗಳವಾರ ನಾಮಪತ್ರ ಸಲ್ಲಿಸುವಂತೆ ರೆಡ್ಡಿ ಅವರಿಗೆ ಸೂಚಿಸಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಿದೇಶ ಪ್ರವಾಸದಲ್ಲಿದ್ದಾರೆ. ಅವರು ಪ್ರವಾಸಕ್ಕೆ ತೆರಳುವ ಮುನ್ನವೇ ಅಭ್ಯರ್ಥಿ ಕುರಿತು ಚರ್ಚಿಸಲಾಗಿತ್ತು. ಬಿಜೆಪಿಯ ಬೆಂಬಲ ಪಡೆದು ರೆಡ್ಡಿ ಅವರನ್ನು ರಾಜ್ಯಸಭೆಗೆ ಆಯ್ಕೆಮಾಡುವ ಯೋಚನೆ ಜೆಡಿಎಸ್ ವರಿಷ್ಠರಲ್ಲಿದೆ' ಎಂದು ಮೂಲಗಳು ಹೇಳಿವೆ.

'ಆತ್ಮಸಾಕ್ಷಿಯ ಮತ ಕೇಳುತ್ತೇವೆ'

ಬೆಂಗಳೂರು: 'ಒಬ್ಬ ಸಜ್ಜನ ಯುವಕನನ್ನು ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಎರಡನೇ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದೇವೆ. ಆತ್ಮಸಾಕ್ಷಿಯ ಅನುಸಾರ ಮತ ಚಲಾಯಿಸುವಂತೆ ಎಲ್ಲ ಶಾಸಕರಿಗೂ ಮನವಿ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷದ ನಾಯಕರು ಮತ್ತು ದೆಹಲಿಯ ವರಿಷ್ಠರು ಕೈಗೊಳ್ಳುವ ನಿರ್ಧಾರವನ್ನು ಪಾಲಿಸುವುದು ನಮ್ಮ ಕರ್ತವ್ಯ. ಆ ಪ್ರಕಾರವೇ ಮನ್ಸೂರ್ ಅಲಿ ಖಾನ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದ್ದೇವೆ' ಎಂದು ಹೇಳಿದರು.

'ಎರಡನೇ ಅಭ್ಯರ್ಥಿ ಗೆಲುವಿಗೆ ಮತಗಳ ಕೊರತೆ ಇದೆ. ಆದರೆ, ನಮ್ಮದೂ ಕೆಲವು ಲೆಕ್ಕಾಚಾರ ಇದೆ. ಹಿಂದಿನ ಚುನಾವಣೆಯಲ್ಲಿ ನಾವು ಗೌರವದ ಕಾರಣಕ್ಕಾಗಿ ಅಭ್ಯರ್ಥಿಯನ್ನು ಕಣಕ್ಕಿಳಿಸಿರಲಿಲ್ಲ. ನಾವು ಈ ಬಾರಿ ಬೆಂಬಲ ಕೇಳುವ ವಿಚಾರದಲ್ಲಿ ಏನನ್ನೂ ಹೇಳುವುದಿಲ್ಲ' ಎಂದರು.

ನಿರ್ಮಲಾ, ಜಗ್ಗೇಶ್, ಲಹರ್ ಇಂದು ನಾಮಪತ್ರ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಚಿತ್ರನಟ ಜಗ್ಗೇಶ್ ಮತ್ತು ಲಹರ್ ಸಿಂಗ್ ಸಿರೋಯ ರಾಜ್ಯಸಭೆ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳಾಗಿ ಮಂಗಳವಾರ ನಾಮಪತ್ರ ಸಲ್ಲಿಸುವರು.

ಮೂರನೇ ಅಭ್ಯರ್ಥಿಯಾಗಿ ಲಹರ್ ಸಿಂಗ್ ಸಿರೋಯ ಅವರನ್ನು ಸೋಮವಾರ ರಾತ್ರಿ ಬಿಜೆಪಿ ಘೋಷಿಸಿದೆ. ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು.

ಸರ್ಕಾರಕ್ಕೆ 8 ವರ್ಷ: ಮೋದಿ ಸಂತಸ

'ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಭಾರತ'

ನವದೆಹಲಿ(ಪಿಟಿಐ): 'ಕೋವಿಡ್ ಸಾಂಕ್ರಾಮಿಕದ ಋಣಾತ್ಮಕ ಪ್ರಭಾವದಿಂದ ಹೊರಬಂದು, ಭಾರತವು ವಿಶ್ವದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ರಾಷ್ಟ್ರಗಳಲ್ಲಿ ಒಂದಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.

ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ವಿದ್ಯಾರ್ಥಿವೇತನ ಮತ್ತು ಆರೋಗ್ಯ ಕಾರ್ಡ್‌ನ ಪಾಸ್‌ಬುಕ್ ಬಿಡುಗಡೆ ಮಾಡಿ ಮಾತನಾಡಿದ ಅವರು, '2014ಕ್ಕೂ ಮುನ್ನ ಇದ್ದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಭಯೋತ್ಪಾದನಾ ಸಂಘಟನೆಗಳ ವ್ಯಾಪಕ ಹರಡುವಿಕೆ, ಪ್ರಾದೇಶಿಕ ತಾರತಮ್ಯದಂತಹ ವಿಷ ವರ್ತುಲದಿಂದ ಇಂದು ದೇಶವು ಹೊರಬರುತ್ತಿದೆ. ನಮ್ಮ ಸರ್ಕಾರದ ಎಂಟು ವರ್ಷಗಳ ಅವಧಿಯನ್ನು ಬಡವರ ಕಲ್ಯಾಣಕ್ಕಾಗಿಯೇ ಮೀಸಲಿಡಲಾಗಿದೆ' ಎಂದರು.

'ನಮ್ಮ ಸರ್ಕಾರ 8 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ದೇಶದ ಆತ್ಮವಿಶ್ವಾಸ, ಆತ್ಮಸ್ಥೈರ್ಯವು ಅಭೂತಪೂರ್ವವಾಗಿದೆ. ಹೊಸ ಭರವಸೆ ಮತ್ತು ನಂಬಿಕೆಯಿಂದ ಜಗತ್ತು ನಮ್ಮತ್ತ ನೋಡುತ್ತಿದೆ' ಎಂದು ಸಂತಸ ವ್ಯಕ್ತಪಡಿಸಿದರು.

4 ಸಾವಿರ ಮಕ್ಕಳಿಗೆ ವಿದ್ಯಾರ್ಥಿ ವೇತನ

ನವದೆಹಲಿ: ಕೋವಿಡ್–19 ಸಮಯದಲ್ಲಿ ಅನಾಥರಾಗಿದ್ದ ಸುಮಾರು 4 ಸಾವಿರ ಮಕ್ಕಳು ಪಿಎಂ ಕೇರ್ಸ್‌ನ ವಿದ್ಯಾರ್ಥಿವೇತನ ಯೋಜನೆಯಡಿ ಪ್ರಯೋಜನ ಪಡೆದಿದ್ದಾರೆ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಸೋಮವಾರ ತಿಳಿಸಿದೆ.

ಈ ಯೋಜನೆಯಡಿ, ಪ್ರತಿ ಮಗುವಿಗೆ ವಾರ್ಷಿಕ ₹20 ಸಾವಿರ ವಿದ್ಯಾರ್ಥಿವೇತನ ನೀಡಲಾಗುವುದು. 1ರಿಂದ 12ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರೆಗೆ ಮಕ್ಕಳ ಖಾತೆಗೆ ನೇರ ವರ್ಗಾವಣೆಯ ಮೂಲಕ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತದೆ. 23 ವರ್ಷ ತುಂಬಿದ ನಂತರದವರಿಗೆ ₹ 10 ಲಕ್ಷ, ಆರೋಗ್ಯ ವಿಮೆ ಸೌಲಭ್ಯ ನೀಡಲಾಗುವುದು.

ಸ್ಪೈಸ್ ಜೆಟ್‌ಗೆ ₹10 ಲಕ್ಷ ದಂಡ ವಿಧಿಸಿದ ಡಿಜಿಸಿಎ

ನವದೆಹಲಿ (ಪಿಟಿಐ): ಬೋಯಿಂಗ್ 737 ಮ್ಯಾಕ್ಸ್ ವಿಮಾನದ ಪೈಲಟ್‌ಗಳಿಗೆ ವಿಮಾನ ಸುರಕ್ಷತೆಗೆ ವಿರುದ್ಧವಾಗಿ ದೋಷಪೂರಿತ ಸಿಮ್ಯುಲೇಟರ್‌ನಲ್ಲಿ ತರಬೇತಿ ನೀಡಿದ್ದ ತಪ್ಪಿಗಾಗಿ ಸ್ಪೈಸ್ ಜೆಟ್‌ಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ₹10 ಲಕ್ಷ ದಂಡ ವಿಧಿಸಿದೆ ಎಂದು ಸೋಮವಾರ ಮೂಲಗಳು ತಿಳಿಸಿವೆ.

ಸಿಮ್ಯುಲೇಟರ್‌ನಲ್ಲಿ ಸ್ಪೈಸ್ ಜೆಟ್‌ನ ಪೈಲಟ್‌ಗಳು ತರಬೇತಿ ಪಡೆಯುತ್ತಿರುವುದು ಪತ್ತೆಯಾದ ನಂತರ ಕಳೆದ ತಿಂಗಳು ಮ್ಯಾಕ್ಸ್ ವಿಮಾನ ಚಾಲನೆ ಮಾಡದಂತೆ ಸ್ಪೈಸ್ ಜೆಟ್‌ನ 90 ಪೈಲಟ್‌ಗಳು ಮತ್ತು ಸಹ ಪೈಲಟ್‌ಗಳಿಗೆ ಕಳೆದ ತಿಂಗಳು ಡಿಜಿಸಿಎ ನಿರ್ಬಂಧ ಹೇರಿತ್ತು.

'ವಿಮಾನವು ವಾಯು ಮಾರ್ಗದಲ್ಲಿ ಸ್ಥಗಿತಗೊಂಡಾಗ, ಪೈಲಟ್‌ಗಳ ತರಬೇತಿಯಲ್ಲಿ ದೋಷವಿರುವುದು ಪತ್ತೆಯಾಯಿತು. ಈ ಸಂಬಂಧ ಏಪ್ರಿಲ್‌ನಲ್ಲಿ ಷೋಕಾಸ್ ನೋಟಿಸ್ ನೀಡಲಾಗಿತ್ತು. ವಿಮಾನಯಾನ ಸಂಸ್ಥೆಯ ಪ್ರತಿಕ್ರಿಯೆಯು ತೃಪ್ತಿಕರವಾಗಿಲ್ಲದ ಕಾರಣಕ್ಕೆ ಡಿಜಿಸಿಎ, ಪೈಲಟ್‌ಗಳಿಗೆ ನಿರ್ಬಂಧ ಹೇರಿ, ಸಂಸ್ಥೆಗೆ ದಂಡ ವಿಧಿಸಿದೆ' ಎಂದು ಮೂಲಗಳು ತಿಳಿಸಿವೆ.

ಮೃತಪಟ್ಟವರಲ್ಲಿ ಒಂದೇ ಕುಟುಂಬಕ್ಕೆ ಸೇರಿದ ನಾಲ್ವರು ಭಾರತೀಯರು

ತಾರಾ ಏರ್ ವಿಮಾನ ಪತನ: 21 ಶವ ಪತ್ತೆ

ಕಠ್ಮಂಡು, ಪೋಖರಾ (ಎಎಫ್‌ಪಿ/ಪಿಟಿಐ): ನೇಪಾಳದ ಮಸ್ತ್ಯಾಂಗ್ ಜಿಲ್ಲೆಯ ಪರ್ವತದಲ್ಲಿ ಭಾನುವಾರ ಬೆಳಿಗ್ಗೆ ಪತನಗೊಂಡ ವಿಮಾನದ ಅವಶೇಷಗಳ ಬಳಿ 21 ಶವಗಳನ್ನು ರಕ್ಷಣಾ ಸಿಬ್ಬಂದಿ ಸೋಮವಾರ ಹೊರತೆಗೆದಿದ್ದಾರೆ. ಘಟನಾ ಸ್ಥಳ ದುರ್ಗಮ ಪ್ರದೇಶದಿಂದ ಕೂಡಿದ್ದು, ಇನ್ನೊಬ್ಬ ಪ್ರಯಾಣಿಕರ ಪತ್ತೆಗೆ ಶೋಧ ನಡೆಯುತ್ತಿದೆ.

ನಾಲ್ವರು ಭಾರತೀಯರು, ಇಬ್ಬರು ಜರ್ಮನಿಯವರು ಮತ್ತು 13 ನೇಪಾಳಿಗರು ಹಾಗೂ ಮೂವರು ಸಿಬ್ಬಂದಿ ಸೇರಿ 22 ಮಂದಿ ಈ ವಿಮಾನದಲ್ಲಿದ್ದರು. ಕೆನಡಾದ ಡಿ ಹ್ಯಾವಿಲ್ಯಾಂಡ್ ನಿರ್ಮಿತ, ತಾರಾ ಏರ್‌ನ 9ಎನ್-ಎಇಟಿ ವಿಮಾನವು ಪೋಖರಾ ನಗರದಿಂದ ನೇಪಾಳದ ಪ್ರಸಿದ್ಧ ಚಾರಣ ತಾಣ ಜೋಮ್ಸಮ್‌ಗೆ ಹಾರುತ್ತಿತ್ತು. ಟೇಕಾಫ್ ಆದ ಸ್ವಲ್ಪ ಸಮಯದಲ್ಲೇ ಥಾಸಾಂಗ್ ಪಟ್ಟಣ ಬಳಿಯ ಲಲಿಂಗ್ಸಾಗೋಲಾ ಎಂಬಲ್ಲಿ ವಾಯು ಸಂಚಾರ ನಿಯಂತ್ರಕದ (ಎಟಿಆರ್) ಸಂಪರ್ಕ ಕಳೆದುಕೊಂಡಿತ್ತು.



ನೇಪಾಳದ ಥಾಸಾಂಗ್ ಪುರಸಭೆಯ ಸನೋಸ್‌ವೇರ್ ಪ್ರದೇಶದ 14,500 ಅಡಿ ಎತ್ತರದಲ್ಲಿ ತಾರಾ ಏರ್ ವಿಮಾನ ಅಪಘಾತಕ್ಕೀಡಾಗಿ, ಅವಶೇಷಗಳು ಪರ್ವತದ ಮೇಲೆ ಛಿದ್ರವಾಗಿ ಬಿದ್ದಿರುವುದನ್ನು ಸೋಮವಾರ ಸೇನಾ ಸಿಬ್ಬಂದಿ ಪತ್ತೆ ಹಚ್ಚಿದರು — ಎಪಿ/ಪಿಟಿಐ ಚಿತ್ರ

ಮೃತರಲ್ಲಿ ನೇಪಾಳ ಮೂಲದ ಕಂಪ್ಯೂಟರ್ ಎಂಜಿನಿಯರ್ ತಮ್ಮ ಪತ್ನಿ ಮತ್ತು ಇಬ್ಬರು ಪುತ್ರಿಯರೊಂದಿಗೆ ಆ ದಿನವಷ್ಟೇ ಅಮೆರಿಕದಿಂದ ವಾಪಸಾಗಿದ್ದರು.

'ಪ್ರತಿಕೂಲ ಹವಾಮಾನದಿಂದಾಗಿ ಭಾನುವಾರ ಘಟನಾ ಸ್ಥಳ ಪತ್ತೆ ಸಾಧ್ಯವಾಗಿರಲಿಲ್ಲ. ಸೋಮವಾರ ಮತ್ತೆ ಶೋಧ ಆರಂಭಿಸಿದ ರಕ್ಷಣಾ ತಂಡ, ಘಟನಾ ಸ್ಥಳ ಗುರುತಿಸಿತು' ಎಂದು ನೇಪಾಳ ಸೇನಾ ವಕ್ತಾರ ನಾರಾಯಣ್ ಸಿಲ್ವಾಲ್ ಅವರು ತಿಳಿಸಿದ್ದಾರೆ.

'ಪ್ರತಿಕೂಲ ಹವಾಮಾನದಿಂದಾಗಿ ವಿಮಾನವು ಎಡಕ್ಕೆ ತಿರುಗುವ ಬದಲು ಬಲಕ್ಕೆ ತಿರುಗಿ ಪರ್ವತಗಳಿಗೆ ಅಪ್ಪಳಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ಸಿಎಎನ್ ಮಹಾನಿರ್ದೇಶಕ ಪ್ರದೀಪ್ ಅಧಿಕಾರಿ ಸೋಮವಾರ ಸಂಸತ್ತಿನ ಅಂತರರಾಷ್ಟ್ರೀಯ ಸಮಿತಿಯ ಸಭೆಯಲ್ಲಿ ತಿಳಿಸಿದ್ದಾರೆ.

ವಿಚ್ಛೇದಿತ ದಂಪತಿ, ಪುತ್ರ, ಪುತ್ರಿ ಸಾವು

ಠಾಣೆ (ಪಿಟಿಐ): ವಿಚ್ಛೇದನ ಪಡೆದಿದ್ದರೂ ಮಕ್ಕಳೊಂದಿಗೆ ಒಟ್ಟಿಗೆ ಪ್ರವಾಸ ತೆರಳಿದ್ದ ಮಹಾರಾಷ್ಟ್ರದ ಠಾಣೆ ಮೂಲದ ದಂಪತಿ ನೇಪಾಳದಲ್ಲಿ ನಡೆದ ವಿಮಾನ ಅವಘಡದಲ್ಲಿ ಮೃತಪಟ್ಟಿದ್ದಾರೆ.

ಒಡಿಶಾದಲ್ಲಿ ಕಂಪನಿ ನಡೆಸುತ್ತಿರುವ ಅಶೋಕ್ ತ್ರಿಪಾಠಿ (54) ಮತ್ತು ಮುಂಬೈನಲ್ಲಿ ಉದ್ಯೋಗಿಯಾಗಿರುವ ವೈಭವಿ ತ್ರಿಪಾಠಿ (51) ಪರಸ್ಪರ ದೂರವಾಗಿದ್ದರು.

ವಿಚ್ಛೇದಿತ ವ್ಯಕ್ತಿಗೆ ಪ್ರತಿ ವರ್ಷ 10 ದಿನ ಕುಟುಂಬದೊಂದಿಗೆ ಸಮಯ ಕಳೆಯಲು ನ್ಯಾಯಾಲಯ ಅನುಮತಿ ನೀಡಿತ್ತು. ಅದರಿಂದಾಗಿ ತಮ್ಮ 15 ವರ್ಷದ ಪುತ್ರಿ ಮತ್ತು 22 ವರ್ಷದ ಪುತ್ರನ ಜತೆ ರಜೆ ಕಳೆಯಲು ಈ ದಂಪತಿ ಪ್ರವಾಸಿ ತಾಣಕ್ಕೆ ವಿಮಾನದಲ್ಲಿ ಹೋಗುತ್ತಿದ್ದರು. ಮಾರ್ಗಮಧ್ಯೆ ವಿಮಾನ ಪತನಗೊಂಡು ನಾಲ್ವರೂ ಮೃತಪಟ್ಟಿದ್ದಾರೆ. ಇದನ್ನು ನೇಪಾಳದಲ್ಲಿನ ಪೊಲೀಸ್ ಅಧಿಕಾರಿ ಉತ್ತಮ್ ಸೋನಾವಾನೆ ಖಚಿತಪಡಿಸಿದ್ದಾರೆ.

ಸದ್ಯ ಕುಟುಂಬದಲ್ಲಿ ವೈಭವಿ ಅವರ 80 ವರ್ಷದ ತಾಯಿ ಒಬ್ಬರೇ ಉಳಿದಿದ್ದಾರೆ. ಅವರ ಆರೋಗ್ಯ ತೀವ್ರ ಹದಗೆಟ್ಟಿರುವ ಕಾರಣ ದುರಂತದ ಬಗ್ಗೆ ಸಂಬಂಧಿಕರು ಅವರಿಗೆ ಯಾವುದೇ ಮಾಹಿತಿ ನೀಡಿಲ್ಲ.

ಷೇರುಪೇಟೆ ವಹಿವಾಟು

▲ 1041

ಹಿಂದಿನ ಅಂತ್ಯ	54,884
ಇಂದಿನ ಅಂತ್ಯ	55,925

(ಗ್ರಾಫ್: 56000, 55500, 55000, 54500; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,352
ಇಂದಿನ ಅಂತ್ಯ	16,661
▲	309
ದಿನದ ಗರಿಷ್ಠ	16,695

ವಿನಿಮಯ ದರ

$ ಡಾಲರ್	77.54
£ ಪೌಂಡ್	97.94
€ ಯುರೊ	83.33
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹495
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹497

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1615)
ಸೋಯಾ (ರಿಫೈನ್ಡ್)	₹1525 (1540)
ಸೂರ್ಯಕಾಂತಿ (ರಿಫೈನ್ಡ್)	₹1830 (1840)
ಪಾಮೋಲಿನ್	₹1500 (1520)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹395-605
ದ್ವಿತಳಿ (ಬಿ.ವಿ)	₹412-816

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹159

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1000
ಮಧ್ಯಮ	₹600-800
ಸಣ್ಣ	₹300-500

ಮುಂಬೈ ಧಾರಣೆ

ಶೇಂಗಾ

30-5-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1625)
ಒಂದು ವಾರದ ಡೆಲಿವರಿ	1635 (1620)
ಸೋಯಾ ಕಚ್ಚಾ	1490 (1500)
ಪಾಮ್ ವಾರದ ಡೆಲಿವರಿ	1498 (1518)
ಸೂರ್ಯಕಾಂತಿ ಎಣ್ಣೆ ಕಚ್ಚಾ	1760 (1780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,100 (50,900)

ಬೆಳ್ಳಿ ಕೆ.ಜಿ 62,100 (62,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	470
ಅಡಿಕೆ	
ಮಂಗಳೂರು	
ಕೋಕ	2000-25000
ಹೊಸತು	40000-45000
ಹಳತು	51000-54500
ಕುಮಟ	
ಚಿಪ್ಪು	26019-30399
ಕೋಕ	18679-28609
ಫ್ಯಾಕ್ಟರಿ	10169-199296
ಹಳೆಚಾಲಿ	45099-48699
ಹೊಸಚಾಲಿ	35019-38399
ಸಿದ್ದಾಪುರ	
ಬಿಳಿಗೋಟು	24699-31412
ಚಾಲಿ	34889-38409
ಕೋಕ	20899-30100
ಕೆಂಪುಗೋಟು	28689-31889
ರಾಶಿ	44109-48599
ತಟ್ಟಿಬೆಟ್ಟೆ	37289-43219
ಶಿರಸಿ	
ಬೆಟ್ಟೆ	38999-44999
ಬಿಳಿಗೋಟು	21709-32811
ಚಾಲಿ	31299-39319
ರಾಶಿ	38809-49569
ಯಲ್ಲಾಪುರ	
ಬಿಳಿಗೋಟು	26899-32299
ಚಾಲಿ	35814-38556
ಕೋಕ	18212-29612
ಕೆಂಪುಗೋಟು	28019-34999
ರಾಶಿ	47671-54500
ತಟ್ಟಿಬೆಟ್ಟೆ	38509-46040
ಶಿವಮೊಗ್ಗ	
ಬೆಟ್ಟೆ	49619-53640
ಗೊರಬಲು	17000-37699
ರಾಶಿ	43669-50299
ಸರಕು	58400-80600
ಯಲ್ಲಾಪುರ	
ಬಿಳಿಗೋಟು	12690-30266
ಚಾಲಿ	31989-38786
ಕೋಕ	13869-36199
ಕೆಂಪುಗೋಟು	20690-36509
ರಾಶಿ	42009-49999
ಸಿಪ್ಪೆಗೋಟು	6899-21462

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16300	16000	229.45 ಸೆಂಟ್ಸ್
ಎಸಿ	8960	8600	8675	
ಆರ್‌ಪಿ	9600	9900	10000	ಲಂಡನ್
ಆರ್‌ಸಿ	4700	4400	4475	2097ಡಾಲರ್ಸ್

ಎಲ್‌ಐಸಿಯಿಂದ 'ಬಿಮಾ ರತ್ನ' ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಮೇ 27ರಿಂದ ಜಾರಿಗೆ ಬರುವಂತೆ 'ಬಿಮಾ ರತ್ನ' ಎನ್ನುವ ಹೊಸ ಜೀವ ವಿಮಾ ಯೋಜನೆಯನ್ನು ಆರಂಭಿಸಿದೆ.

ಖಾತರಿ ಸೇರ್ಪಡೆಗಳೊಂದಿಗೆ ಇದು ಸೀಮಿತ ಪ್ರೀಮಿಯಂ ಪಾವತಿಸುವ, ಮನಿ ಬ್ಯಾಕ್ ಪ್ಲಾನ್ ಆಗಿದೆ ಎಂದು ಕಂಪನಿ ಹೇಳಿದೆ.

15, 20 ಮತ್ತು 25 ವರ್ಷಗಳ ಅವಧಿಗೆ ಈ ಯೋಜನೆ ಲಭ್ಯವಿದೆ. ಕನಿಷ್ಠ ವಿಮಾ ಮೊತ್ತ ₹ 5 ಲಕ್ಷ ಇದೆ. ಇದಕ್ಕೆ ಗರಿಷ್ಠ ಮಿತಿ ಇಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಾನಂದ ಘಟಕ: ಟಾಟಾ, ಫೋರ್ಡ್ ಒಪ್ಪಂದ

ನವದೆಹಲಿ (ಪಿಟಿಐ): ಗುಜರಾತ್‌ನ ಸಾನಂದದಲ್ಲಿ ಇರುವ ಫೋರ್ಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಎಫ್‌ಐಪಿಎಲ್) ಘಟಕವನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ತನ್ನ ಅಂಗಸಂಸ್ಥೆ ಮತ್ತು ಫೋರ್ಡ್ ಕಂಪನಿಯು ಗುಜರಾತ್ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿವೆ ಎಂದು ಟಾಟಾ ಮೋಟರ್ಸ್ ಸೋಮವಾರ ತಿಳಿಸಿದೆ.

ಟಾಟಾ ಮೋಟರ್ಸ್‌ನ ಅಂಗಸಂಸ್ಥೆ ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ (ಟಿಪಿಇಎಂಎಲ್) ಮತ್ತು ಎಫ್‌ಐಪಿಎಲ್ ಕಂಪನಿಗಳು ಗುಜರಾತ್ ಸರ್ಕಾರದ ಜೊತೆ ಒಪ್ಪಂದಕ್ಕೆ ಸಹಿ ಹಾಕಿವೆ. ತಯಾರಿಕಾ ಘಟಕದ ಜೊತೆ ಜಾಗ, ಕಟ್ಟಡಗಳು, ಯಂತ್ರಗಳು ಮತ್ತು ಸಲಕರಣೆಗಳೂ ಸ್ವಾಧೀನ ಒಪ್ಪಂದದಲ್ಲಿ ಸೇರಿಕೊಂಡಿವೆ ಎಂದು ಟಾಟಾ ಮೋಟರ್ಸ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಘಟಕದ ವಾಹನ ತಯಾರಿಕೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಸಿಬ್ಬಂದಿ ಸಹ ಟಾಟಾ ಕಂಪನಿಗೆ ವರ್ಗಾವಣೆ ಆಗಲಿದ್ದಾರೆ.

'ರಾಜ್ಯದಲ್ಲಿ ಹೆಚ್ಚಿನ ಉದ್ಯೋಗ ಮತ್ತು ವಹಿವಾಟು ಅವಕಾಶಗಳನ್ನು ಸೃಷ್ಟಿಸಲು ಈ ಒಪ್ಪಂದದಿಂದಾಗಿ ಕಂಪನಿಗೆ ಸಾಧ್ಯವಾಗಲಿದೆ' ಎಂದು ಟಿಪಿಇಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

'ಪ್ರಯಾಣಿಕ ವಾಹನ ಮತ್ತು ವಿದ್ಯುತ್ ಚಾಲಿತ ವಾಹನಗಳ ತಯಾರಿಕಾ ಸಾಮರ್ಥ್ಯ ವೃದ್ಧಿಗೆ ಹೆಚ್ಚಿನ ಅನುಕೂಲ ಆಗಲಿದೆ' ಎಂದು ಅವರು ಹೇಳಿದ್ದಾರೆ.

'ಇದರಿಂದಾಗಿ ಅಂತರರಾಷ್ಟ್ರೀಯ ಹೂಡಿಕೆ ಸಮುದಾಯದ ವಿಶ್ವಾಸ ವೃದ್ಧಿಸಲಿದೆ. ದೇಶದ ಮುಂಚೂಣಿ ಹೂಡಿಕೆ ತಾಣವಾಗಿ ಗುಜರಾತ್‌ನ ಸ್ಥಾನವನ್ನು ಇನ್ನಷ್ಟು ಬಲಪಡಿಸಲಿದ್ದು, ಆತ್ಮನಿರ್ಭರ ಭಾರತಕ್ಕೆ ಶಕ್ತಿ ತುಂಬಲಿದೆ' ಎಂದು ಗುಜರಾತ್‌ನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಕುಮಾರ್ ಗುಪ್ತಾ ಹೇಳಿದ್ದಾರೆ.

ಬರಲಿದೆ ಮಹೀಂದ್ರ 'ಎಕ್ಸ್‌ಯುವಿ 300'ನ ಎಲೆಕ್ಟ್ರಿಕ್ ಆವೃತ್ತಿ

ಮುಂಬೈ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು 2023ರ ಮೊದಲ ತ್ರೈಮಾಸಿಕದಲ್ಲಿ 'ಎಕ್ಸ್‌ಯುವಿ 300'ನ ಎಲೆಕ್ಟ್ರಿಕ್ (ಇ.ವಿ) ಆವೃತ್ತಿಯನ್ನು ಬಿಡುಗಡೆ ಮಾಡುವ ಆಲೋಚನೆ ಹೊಂದಿದೆ.

ಈ ಕುರಿತು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ರಾಜೇಶ್ ಜೆಜುರಿಕರ್ ಅವರು ಮಾಧ್ಯಮಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದ್ದಾರೆ.

ವಿದ್ಯುತ್ ಚಾಲಿತ ವಾಹನ ವಹಿವಾಟಿನ ಕುರಿತ ಯೋಜನೆ 'ಬಾರ್ನ್ ಎಲೆಕ್ಟ್ರಿಕ್ ವಿಷನ್'ಅನ್ನು ಆಗಸ್ಟ್ 15ರಂದು ಬಿಡುಗಡೆ ಮಾಡುವುದಾಗಿ ಅವರು ಹೇಳಿದ್ದಾರೆ.

ಮಾಡ್ಯುಲರ್ ಎಲೆಕ್ಟ್ರಿಕ್ ಡ್ರೈವ್ ಮ್ಯಾಟ್ರಿಕ್ಸ್ (ಎಂಇಬಿ) ಬಿಡಿಭಾಗಗಳನ್ನು ತನ್ನ ಎಲೆಕ್ಟ್ರಿಕ್ ಕಾರುಗಳಲ್ಲಿ ಬಳಸುವ ಸಲುವಾಗಿ ಕಂಪನಿಯು ಈಚೆಗಷ್ಟೇ ಫೋಕ್ಸ್‌ವ್ಯಾಗನ್ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

ಎಕ್ಸ್‌ಯುವಿ 300ನ ಎಲೆಕ್ಟ್ರಿಕ್ ಆವೃತ್ತಿ ಎಂದು ಕರೆದರೂ ಇದು 4.2 ಮೀಟರ್ ಉದ್ದ ಇರಲಿದೆ ಎಂದು ಅವರು ಹೇಳಿದ್ದಾರೆ.

ಕ್ರಿಪ್ಟೊ ಕುರಿತ ಸಮಾಲೋಚನಾ ಪತ್ರ ಸಿದ್ಧ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿಗಳಿಗೆ ಸಂಬಂಧಿಸಿದ ಸಮಾಲೋಚನಾ ಪತ್ರವು ಸಿದ್ಧವಾಗಿದ್ದು ಅದನ್ನು ಶೀಘ್ರದಲ್ಲಿಯೇ ಸಲ್ಲಿಸಲಾಗುತ್ತದೆ ಎಂದು ಕೇಂದ್ರ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ಹೇಳಿದ್ದಾರೆ.

ಸಮಾಲೋಚನಾ ಪತ್ರ ಸಿದ್ಧಪಡಿಸಲು ವ್ಯಾಪಕವಾಗಿ ಚರ್ಚೆ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ. ಕ್ರಿಪ್ಟೊಕರೆನ್ಸಿಗಳು ಸೃಷ್ಟಿಸಿರುವ ಸವಾಲನ್ನು ಎದುರಿಸಲು ಜಾಗತಿಕ ಮಟ್ಟದಲ್ಲಿ ಕೆಲಸ ಆಗಬೇಕು ಎಂದೂ ಅವರು ತಿಳಿಸಿದ್ದಾರೆ.

ನಕಲಿ ನೋಟುಗಳ ಸಂಖ್ಯೆ ಏರಿಕೆ

6.9% 2021-22ರಲ್ಲಿ ಆರ್‌ಬಿಐನಲ್ಲಿ ಪತ್ತೆಯಾದ ನಕಲಿ ನೋಟುಗಳ ಪ್ರಮಾಣ

93.1% ಇತರ ಬ್ಯಾಂಕ್‌ಗಳಲ್ಲಿ ಪತ್ತೆಯಾದ ನಕಲಿ ನೋಟುಗಳ ಪ್ರಮಾಣ

16.4% ₹ 10 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಏರಿಕೆ

16.5% ₹ 20 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಏರಿಕೆ

11.7% ₹ 200 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಏರಿಕೆ

101.9% ಹೊಸ ವಿನ್ಯಾಸದ ₹ 500 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಏರಿಕೆ

54.6% ₹ 2000 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಏರಿಕೆ

28.7% ₹ 50 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಇಳಿಕೆ

16.7% ₹ 100 ಮುಖಬೆಲೆಯ ನಕಲಿ ನೋಟು ಪತ್ತೆಯಲ್ಲಿ ಆದ ಇಳಿಕೆ

79,669 2021-22ರಲ್ಲಿ ಪತ್ತೆಯಾದ ₹ 500 ಮುಖಬೆಲೆಯ ನಕಲಿ ನೋಟುಗಳ ಸಂಖ್ಯೆ

39,453 2020-21ರಲ್ಲಿ ಪತ್ತೆಯಾದ ₹ 500ರ ನಕಲಿ ನೋಟುಗಳ ಸಂಖ್ಯೆ

13,604 2021-22ರಲ್ಲಿ ಪತ್ತೆಯಾದ ₹ 2000ದ ನಕಲಿ ನೋಟುಗಳ ಸಂಖ್ಯೆ

8,798 2020-21ರಲ್ಲಿ ಪತ್ತೆಯಾದ ₹ 2000ದ ನಕಲಿ ನೋಟುಗಳ ಸಂಖ್ಯೆ

ಆಧಾರ: ಆರ್‌ಬಿಐ ವಾರ್ಷಿಕ ವರದಿ ಪ್ರಜಾವಾಣಿ ಗ್ರಾಫಿಕ್ಸ್

4 ವಾರಗಳ ಗರಿಷ್ಠ ಮಟ್ಟಕ್ಕೆ ವಹಿವಾಟು

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಮತ್ತು ಟಿಸಿಎಸ್ ಕಂಪನಿಗಳ ಷೇರುಗಳ ಉತ್ತಮ ಗಳಿಕೆಯಿಂದ ಸತತ ಮೂರನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,041 ಅಂಶ ಹೆಚ್ಚಾಗಿ ನಾಲ್ಕು ವಾರಗಳ ಗರಿಷ್ಠ ಮಟ್ಟವಾದ 55,925 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 309 ಅಂಶ ಹೆಚ್ಚಾಗಿ 16,661 ಅಂಶಗಳಿಗೆ ಏರಿಕೆ ಕಂಡಿತು.

ಹಣದುಬ್ಬರದ ಕುರಿತ ಕಳವಳವು ಅಮೆರಿಕದಲ್ಲಿ ತುಸು ತಗ್ಗಿರುವ ಕಾರಣ ಅಲ್ಲಿನ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಇದರ ಜೊತೆಗೆ ಚೀನಾದಲ್ಲಿ ಲಾಕ್‌ಡೌನ್ ನಿರ್ಬಂಧ ಸಡಿಲ ಮಾಡಿರುವುದು ಸಹ ಏಷ್ಯಾದ ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.43ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 119.9 ಡಾಲರ್‌ಗಳಿಗೆ ತಲುಪಿತು.

ಪದಾರ್ಪಣೆ ಆವೃತ್ತಿಯಲ್ಲೇ ಗುಜರಾತ್ ತಂಡವನ್ನು ಯಶಸ್ಸಿನ ಹಾದಿಯಲ್ಲಿ ನಡೆಸಿದ ಹಾರ್ದಿಕ್

ಐಪಿಎಲ್ ಆಯ್ತು; ಈಗ ವಿಶ್ವಕಪ್‌ನತ್ತ ಚಿತ್ತ

ನವದೆಹಲಿ (ರಾಯಿಟರ್ಸ್/ಎಎಫ್‌ಪಿ/ಪಿಟಿಐ): ಪದಾರ್ಪಣೆ ಆವೃತ್ತಿಯಲ್ಲೇ ಗುಜರಾತ್ ಟೈಟನ್ಸ್ ತಂಡವನ್ನು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟಕ್ಕೇರಿಸಿದ್ದಾರೆ ಹಾರ್ದಿಕ್ ಪಾಂಡ್ಯ. ಈ ಯಶಸ್ಸಿನ ಬೆನ್ನಲ್ಲೇ ಅವರು ಟ್ವೆಂಟಿ20 ವಿಶ್ವಕಪ್ ಟೂರ್ನಿ ಯಲ್ಲಿ ಭಾರತದ ಪರವಾಗಿ ಆಡಿ ಪ್ರಶಸ್ತಿಗೆಲ್ಲುವಬಯಕೆವ್ಯಕ್ತಪಡಿಸಿದ್ದಾರೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಒಂದು ಲಕ್ಷಕ್ಕೂ ಅಧಿಕ ಪ್ರೇಕ್ಷಕರ ನಡುವೆ ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಗುಜರಾತ್ ಟೈಟನ್ಸ್ 7 ವಿಕೆಟ್‌ಗಳಿಂದ ಮಣಿಸಿತ್ತು.

ಮೊದಲ ಆವೃತ್ತಿಯ ಚಾಂಪಿಯನ್ ರಾಜಸ್ಥಾನ ತಂಡವನ್ನು ತವರಿನ ಅಂಗಣದಲ್ಲಿ ಮಣಿಸಿದ ಗುಜರಾತ್ ತಂಡಕ್ಕಾಗಿ ಹಾರ್ದಿಕ್ ಮೂರು ವಿಕೆಟ್ ಉರುಳಿಸಿದ್ದರು. ಬ್ಯಾಟಿಂಗ್‌ನಲ್ಲೂ ಮಿಂಚಿ 34 ರನ್ ಕಲೆ ಹಾಕಿದ್ದರು. ಟೂರ್ನಿಯಲ್ಲಿ ಅತ್ಯಧಿಕ ರನ್ ಗಳಿಸಿರುವ ಜೋಸ್ ಬಟ್ಲರ್ ವಿಕೆಟ್ ಹಾರ್ದಿಕ್ ಪಾಲಾಗಿತ್ತು. ಬೆನ್ನುನೋವಿನಿಂದ ಅವರು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ ಎಂಬುದನ್ನು ಈ ಪಂದ್ಯದದಲ್ಲಿ ತೋರಿದ ಸಾಮರ್ಥ್ಯ ಸಾಬೀತು ಮಾಡಿದೆ. ಹಿಂದಿನ ಎರಡು ಆವೃತ್ತಿಗಳಲ್ಲಿ ಬ್ಯಾಟರ್ ಆಗಿ ಆಡಿದ್ದ ಅವರು ಈ ಬಾರಿ ಆಲ್‌ರೌಂಡ್ ಆಟದ ಮೂಲಕ ಲಯಕ್ಕೆ ಮರಳಿದ್ದಾರೆ. ಪಂದ್ಯದ ನಂತರ ಮಾತುಕತೆಯ ನಡುವೆ ನಿಮ್ಮ ಮುಂದಿನ ಗುರಿಯೇನು ಎಂದು ಕೇಳಿದಾಗ 'ಭಾರತ ತಂಡ ದಲ್ಲಿದ್ದು ವಿಶ್ವಕಪ್ ಗೆಲ್ಲುವ ಬಯಕೆ ಇದೆ. ನನ್ನ ಸಂಪೂರ್ಣ ಸಾಮರ್ಥ್ಯ ತೋರಿ ದೇಶಕ್ಕಾಗಿ ಆಡಲು ಸಜ್ಜಾಗಿದ್ದೇನೆ' ಎಂದರು.

ಹಾರ್ದಿಕ್, ಭಾರತ ತಂಡದ ಭವಿಷ್ಯದ ನಾಯಕ?: ಗುಜರಾತ್ ಐಪಿಎಲ್ ಪ್ರಶಸ್ತಿ ಗೆಲ್ಲಿಸಿಕೊಟ್ಟ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಭಾರತ ತಂಡದ ಭವಿಷ್ಯದ ನಾಯಕನನ್ನಾಗಿಸುವ ಭರವಸೆ ಮೂಡಿದೆ. ಪಂದ್ಯದ ನಂತರ ವೀಕ್ಷಕ ವಿವರಣೆಕಾರರು ಹಾರ್ದಿಕ್ ಅವರಿಗೆ ರಾಷ್ಟ್ರೀಯ ತಂಡದ ನಾಯಕನಾಗುವ ಅರ್ಹತೆ ಇದೆ ಎಂದು ಶ್ಲಾಘಿಸಿದ್ದರು.

'ನಾಯಕತ್ವ ಗುಣ ಇರುವವರು ಸಹಜವಾಗಿ ರಾಷ್ಟ್ರೀಯ ಮಟ್ಟದಲ್ಲಿ ತಂಡಗಳನ್ನು ಮುನ್ನಡೆಸುವ ಅರ್ಹತೆ ಗಳಿಸುತ್ತಾರೆ. ಹಾರ್ದಿಕ್ ಪಾಂಡ್ಯ ಅವರು ಅಂಥ ಗುಣ ಇರುವ ಆಟಗಾರ' ಎಂದು ಮಾಜಿ ಕ್ರಿಕೆಟಿಗ ಮತ್ತು ವೀಕ್ಷಕ ವಿವರಣೆಕಾರ ಸುನಿಲ್ ಗಾವಸ್ಕರ್ ಹೇಳಿದರು.

ತೆರೆದ ಬಸ್‌ನಲ್ಲಿ ಮೆರವಣಿಗೆ: ಪ್ರಶಸ್ತಿ ಗೆದ್ದ ಗುಜರಾತ್ ಟೈಟನ್ಸ್ ತಂಡದ ಆಟಗಾರರನ್ನು ಅಹಮದಾಬಾದ್ ನಗರದಲ್ಲಿ ಸೋಮವಾರ ತೆರೆದ ಬಸ್‌ನಲ್ಲಿ ಮೆರವಣಿಗೆಯಲ್ಲಿ ಕರೆದು-ಕೊಂಡುಹೋಗಲಾಯಿತು. ಈ ವೇಳೆ ಸಾವಿರಾರು ಜನರು ಸೇರಿದ್ದರು.

ಕ್ಯೂರೇಟರ್‌ಗಳಿಗೆ ₹ 1.25 ಕೋಟಿ ಬಹುಮಾನ

ಮುಂಬೈ (ಪಿಟಿಐ): ಐಪಿಎಲ್ ಪಂದ್ಯಗಳು ನಡೆದ ಕ್ರೀಡಾಂಗಣಗಳ ಕ್ಯೂರೇಟರ್ ಮತ್ತು ಸಿಬ್ಬಂದಿಯನ್ನು ತೆರೆಮರೆಯ ಹೀರೊಗಳು ಎಂದು ಬಣ್ಣಿಸಿರುವ ಬಿಸಿಸಿಐ ಅವರಿಗೆ ₹ 1.25 ಕೋಟಿ ಮೊತ್ತದ ಬಹುಮಾನ ಘೋಷಿಸಿದೆ.

'ಟೂರ್ನಿಯಲ್ಲಿ ಸ್ಪರ್ಧಾತ್ಮಕ ಪಂದ್ಯಗಳು ನಡೆಯಲು ಕಾರಣರಾದ ಕ್ಯೂರೇಟರ್ ಮತ್ತು ಸಿಬ್ಬಂದಿಗೆ ಅಭಿನಂದನೆ ಸಲ್ಲಲೇಬೇಕು' ಎಂದು ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಫೈನಲ್ ನಡೆದ ಅಹಮದಾಬಾದ್ ಕ್ರೀಡಾಂಗಣ ಸೇರಿದಂತೆ ಪಂದ್ಯಗಳು ನಡೆದ ಅಂಗಣಗಳಲ್ಲಿ ಒಟ್ಟು 130 ಸಿಬ್ಬಂದಿಕಾರ್ಯನಿರ್ವಹಿಸಿದ್ದಾರೆ.



ಪ್ರಶಸ್ತಿ ಗೆದ್ದ ಗುಜರಾತ್ ಟೈಟನ್ಸ್ ತಂಡದ ಆಟಗಾರರನ್ನು ಅಹಮದಾಬಾದ್ ನಗರದಲ್ಲಿ ಸೋಮವಾರ ತೆರೆದ ಬಸ್‌ನಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡುಹೋಗಲಾಯಿತು– ಪಿಟಿಐ ಚಿತ್ರ

ಫಿಕ್ಸಿಂಗ್ ಅನುಮಾನ ವ್ಯಕ್ತಪಡಿಸಿದ ನೆಟ್ಟಿಗರು

ಅಹಮದಾಬಾದ್‌ನಲ್ಲಿ ನಡೆದ ಫೈನಲ್ ಪಂದ್ಯವು ಫಿಕ್ಸ್ ಆಗಿತ್ತು ಎಂದು ನೆಟ್ಟಿಗರು ಅನುಮಾನ ವ್ಯಕ್ತಪಡಿಸಿದ್ದು ಪಂದ್ಯ ಮುಗಿದ ಕೆಲವೇ ಕ್ಷಣಗಳಲ್ಲಿ ಸಾಮಾಜಿಕ ತಾಣಗಳಲ್ಲಿ ಆಕ್ರೋಶದ ಪೋಸ್ಟ್‌ಗಳನ್ನು ಹಾಕಲು ಶುರು ಮಾಡಿದ್ದು ಸೋಮವಾರವಿಡೀ ಟ್ರೆಂಡ್ ಆಗಿತ್ತು.

ಗುಜರಾತ್‌ನಲ್ಲಿ ಪಂದ್ಯ ನಡೆದಿದ್ದು ಆ ರಾಜ್ಯದ ಹೆಸರಿನ ತಂಡವೇ ಚಾಂಪಿಯನ್ ಆಗಿದೆ ಇದರ ಹಿಂದೆ ಗೃಹ ಸಚಿವ ಅಮಿತ್ ಶಾ ಮತ್ತು ಅವರ ಪುತ್ರ, ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರ ಕೈವಾಡವಿದೆ ಎಂಬ ಸಂದೇಹ ವ್ಯಕ್ತಪಡಿಸುವ ಸಂದೇಶಗಳು ಟ್ವಿಟರ್‌ನಲ್ಲಿ ಹರಿದಾಡುತ್ತಿವೆ.

ಅಮಿತ್ ಶಾ ವಿಜಯದ ಸಂಕೇತ ತೋರಿಸುವ ಮತ್ತು ಜಯ್ ಶಾ ಕುಣಿದಾಡುವ ಚಿತ್ರಗಳನ್ನು ಪೋಸ್ಟ್ ಮಾಡಿರುವ ನೆಟ್ಟಿಗರು ಲೀಗ್‌ವೊಂದರ ಗೆಲುವಿನಲ್ಲಿ ಇವರು ವೈಯಕ್ತಿಕವಾಗಿ ಸಂಭ್ರಮಿಸುವಂಥ ಹಿತಾಸಕ್ತಿ ಏನಿದೆ ಎಂದು ಪ್ರಶ್ನಿಸಿದ್ದಾರೆ.

'ಅಮಿತ್ ಶಾ ಗೃಹ ಸಚಿವ, ಜಯ್ ಶಾ ಬಿಸಿಸಿಐ ಕಾರ್ಯದರ್ಶಿ. ಗುಜರಾತ್ ತಂಡ ಆಡಿದ್ದು ಅಹಮದಾಬಾದ್‌ನಲ್ಲಿ. ಪರಿಸ್ಥಿತಿ ಹೀಗಿರುವಾಗ ಆ ತಂಡವಲ್ಲದೆ ಬೇರೆ ಯಾವ ತಂಡ ಗೆಲ್ಲಲು ಸಾಧ್ಯ' ಎಂದು ಒಬ್ಬರು ಕೇಳಿದ್ದಾರೆ.

ಜಯ್ ಶಾ ಮತ್ತು ಗುಜರಾತ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮಾತುಕತೆಯಲ್ಲಿ ತೊಡಗಿರುವ ಚಿತ್ರವನ್ನು ಹಾಕಿ, 'ಫಿಕ್ಸಿಂಗ್ ಬಗ್ಗೆ ಪಂದ್ಯೋತ್ತರದ ಚರ್ಚೆ' ಎಂದು ಮತ್ತೊಬ್ಬರು ಕಾಲೆಳೆದಿದ್ದಾರೆ. ಅಮಿತ್ ಶಾ ವಿಜಯದ ಸಂಕೇತ ತೋರಿಸುವ ಚಿತ್ರ ಹಾಕಿರುವ ಇನ್ನೊಬ್ಬರು ಪಂದ್ಯಕ್ಕೆ ತಿರುವು ಕೊಟ್ಟವರು ಎಂದು ಬರೆದಿದ್ದಾರೆ.

ಫೈನಲ್ ಮೇಲೆ ಭಾರತದ ಕಣ್ಣು

ಏಷ್ಯಾಕಪ್ ಹಾಕಿ: ಇಂದು ದಕ್ಷಿಣ ಕೊರಿಯಾ ಸವಾಲು

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಏಷ್ಯಾಕಪ್ ಟೂರ್ನಿಯ ಫೈನಲ್ ಮೇಲೆ ಕಣ್ಣಿಟ್ಟಿರುವ ಹಾಲಿ ಚಾಂಪಿಯನ್ ಭಾರತ ತಂಡವು ಟೂರ್ನಿಯ ರೌಂಡ್ ರಾಬಿನ್ ಅಂತಿಮ ಲೀಗ್ ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಕೊರಿಯಾ ಸವಾಲು ಎದುರಿಸಲಿದೆ.

ಸೋಮವಾರ ನಡೆದ ಸೂಪರ್ 4ರ ಹಂತದ ಎರಡನೇ ಪಂದ್ಯದಲ್ಲಿ ಬೀರೇಂದ್ರ ಲಾಕ್ರಾ ನಾಯಕತ್ವದ ಭಾರತ, ಮಲೇಷ್ಯಾ ಎದುರು 3–3 ಡ್ರಾ ಸಾಧಿಸಿತ್ತು. ಈ ಹಣಾಹಣಿಯಲ್ಲಿ ಜಯಿಸಿದ್ದರೆ ತಂಡದ ಫೈನಲ್ ಪ್ರವೇಶ ಖಚಿತವಾಗುತ್ತಿತ್ತು.

ಶನಿವಾರ ಜಪಾನ್ ತಂಡಕ್ಕೆ ಭಾರತ ಸೋಲುಣಿಸಿತ್ತು. ಸದ್ಯದ ಸೂಪರ್ 4 ಪಟ್ಟಿಯ ಪ್ರಕಾರ ದಕ್ಷಿಣ ಕೊರಿಯಾ ಮೊದಲ ಸ್ಥಾನದಲ್ಲಿದೆ. ಈ ತಂಡಕ್ಕಿಂತ ಒಂದು ಗೋಲು ಕಡಿಮೆ ದಾಖಲಿಸಿರುವ ಭಾರತ ಎರಡನೇ ಸ್ಥಾನದಲ್ಲಿದೆ.

ಎರಡು ಸೋಲು ಕಂಡಿರುವ ಜಪಾನ್ ಬಹುತೇಕ ಸ್ಪರ್ಧೆಯಿಂದ ಹೊರಬಿದ್ದಿದೆ.

ಕೊರಿಯಾ ತಂಡವು ಸೂಪರ್ 4 ಹಂತದ ಮೊದಲ ಪಂದ್ಯದಲ್ಲಿ 2–2ರಿಂದ ಮಲೇಷ್ಯಾದೊಂದಿಗೆ ಡ್ರಾ ಸಾಧಿಸಿತ್ತು. ಇನ್ನೊಂದು ಹಣಾಹಣಿಯಲ್ಲಿ 3–1ರಿಂದ ಜಪಾನ್ ತಂಡಕ್ಕೆ ಸೋಲುಣಿಸಿತ್ತು.

ಭಾರತ ತಂಡದ ಫಾರ್ವರ್ಡ್ ವಿಭಾಗದಲ್ಲಿರುವ ಉತ್ತಮ್ ಸಿಂಗ್, ಕನ್ನಡಿಗ ಎಸ್.ವಿ.ಸುನೀಲ್ ಮತ್ತು ಪವನ್ ರಾಜಭರ್ ಉತ್ತಮ ಸಾಮರ್ಥ್ಯ ತೋರುತ್ತಿದ್ದಾರೆ. ಎದುರಾಳಿಗೆ ಅನವಶ್ಯಕ ಪೆನಾಲ್ಟಿ ಕಾರ್ನರ್ ನೀಡುವುದನ್ನು ತಂಡವು ತಪ್ಪಿಸಬೇಕಿದೆ.

ರ‍್ಯಾಂಕಿಂಗ್: ನಾಲ್ಕಕ್ಕಿಳಿದ ಪುರುಷರ ತಂಡ; ಆರಕ್ಕೇರಿದ ಮಹಿಳೆಯರು

ನವದೆಹಲಿ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಎಫ್‌ಐಎಚ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕಿಳಿದಿದೆ. ಮಹಿಳಾ ತಂಡವು ಆರನೇ ಸ್ಥಾನಕ್ಕಿಳಿದಿದೆ. ಸೋಮವಾರ ಪ್ರಕಟವಾಗಿರುವ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಮತ್ತು ನೆದರ್ಲೆಂಡ್ಸ್ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಅಗ್ರಸ್ಥಾನ ಗಳಿಸಿವೆ. ಭಾರತ ಪುರುಷರ ತಂಡವು ಒಂದು ಸ್ಥಾನ ಕುಸಿತ ಕಂಡಿದ್ದರೆ, ಮಹಿಳಾ ತಂಡವು ಒಂದು ಸ್ಥಾನ ಬಡ್ತಿ ಪಡೆದಿದೆ.

ಸೂಪರ್ 4 ಹಂತದ ಇಂದಿನ ಪಂದ್ಯಗಳು

ಜಪಾನ್– ಮಲೇಷ್ಯಾ
ಆರಂಭ : ಮಧ್ಯಾಹ್ನ 2.30
ಭಾರತ– ದಕ್ಷಿಣ ಕೊರಿಯಾ
ಆರಂಭ: ಸಂಜೆ 5 ಗಂಟೆ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಶೂಟಿಂಗ್: ಆದರ್ಶ, ಹರ್ಷಿತಾಗೆ ಚಿನ್ನ

ಹುಬ್ಬಳ್ಳಿ: ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಆದರ್ಶ ಮಲವಾಡ ಅವರು ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯಲ್ಲಿ ಸೋಮವಾರ ಆರಂಭಗೊಂಡ ಅಖಿಲ ಭಾರತ ಮುಕ್ತ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ 10 ಮೀಟರ್ ಓಪನ್ ಸೈಟ್ ರೈಫಲ್ ಸ್ಪರ್ಧೆಯಲ್ಲಿ ಬಂಗಾರದ ಪದಕ ಗೆದ್ದುಕೊಂಡರು.

ಅದೇ ಅಕಾಡೆಮಿಯ ಶಿವಕುಮಾರ ಎನ್ ಬೆಳ್ಳಿ ಹಾಗೂ ಮಹಾರಾಷ್ಟ್ರದ ವಿಷನ್ ಶೂಟಿಂಗ್ ಅಕಾಡೆಮಿಯ ನೀರಜ್ ಪಾಟೀಲ್ ಕಂಚಿನ ಪದಕ ಗೆದ್ದರು.

ಮಹಿಳೆಯರ 10 ಮೀ ಓಪನ್ ಸೈಟ್ ರೈಫಲ್ ಸ್ಪರ್ಧೆಯಲ್ಲಿ ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಹರ್ಷಿತಾ ಎ ಅವರು ಚಿನ್ನ ಮತ್ತು ಪ್ರಜ್ಞಾ ಬಿ.ಆರ್ ಅವರು ಬೆಳ್ಳಿ ಗೆದ್ದುಕೊಂಡರು. ಮೈಸೂರು ಜಿಲ್ಲಾ ಶೂಟಿಂಗ್ ಅಕಾಡೆಮಿಯ ನೇಹಾ ಎಚ್. ಕಂಚು ಗೆದ್ದರು.

ವೆರೋನಿಕಾ, ರೂಡ್ ಕ್ವಾರ್ಟರ್ ಫೈನಲ್‌ಗೆ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಮ್ಯಾಡಿಸನ್ ಕೀಸ್, ಹ್ಯೂಬರ್ಟ್‌ಗೆ ನಿರಾಸೆ

ಪ್ಯಾರಿಸ್ (ಎಎಫ್‌ಪಿ): ನಾರ್ವೆಯ ಕ್ಯಾಸ್ಪರ್ ರೂಡ್ ಮತ್ತು ರಷ್ಯಾದ ವೆರೋನಿಕಾ ಕುದೆರ್‌ಮೆತೋವ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್ ಹಂತಕ್ಕೆ ಲಗ್ಗೆ ಇರಿಸಿದರು. ಕ್ಯಾಸ್ಪರ್ ಈ ಟೂರ್ನಿಯಲ್ಲಿ ಎಂಟರ ಘಟ್ಟ ಪ್ರವೇಶಿಸಿದ ದೇಶದ ಮೊದಲ ಆಟಗಾರ ಕೂಡ ಆಗಿದ್ದಾರೆ.

ಸೋಮವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಕ್ಯಾಸ್ಪರ್, ಪೋಲೆಂಡ್‌ನ ಹ್ಯೂಬರ್ಟ್ ಹರ್ಕಕ್ಸ್ ವಿರುದ್ಧ 6-2, 6-3, 3-6, 6-3ರಲ್ಲಿ ಜಯ ಗಳಿಸಿದರು. 23 ವರ್ಷದ ಕ್ಯಾಸ್ಪರ್ ಮೊದಲ ಎರಡು ಸೆಟ್‌ಗಳಲ್ಲಿ ಸುಲಭ ಜಯ ಸಾಧಿಸಿದ್ದರು. ಆದರೆ ಮೂರನೇ ಸೆಟ್‌ನಲ್ಲಿ ಎದುರಾಳಿ ಆಟಗಾರ ತಿರುಗೇಟು ನೀಡಿದರು. ಪಟ್ಟು ಬಿಡದ ಕ್ಯಾಸ್ಪರ್ ನಾಲ್ಕನೇ ಸೆಟ್‌ನಲ್ಲಿ ಪುಟಿದೆದ್ದು ಗೆಲುವು ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದ 16ರ ಘಟ್ಟದ ಹಣಾಹಣಿಯಲ್ಲಿ ವೆರೋನಿಕಾ 1-6, 6-3, 6-1ರಲ್ಲಿ ಅಮೆರಿಕದ ಮ್ಯಾಡಿಸನ್ ಕೀ ಅವರನ್ನು ಮಣಿಸಿದರು.


ಪಂದ್ಯ ಗೆದ್ದು ಸಂಭ್ರಮಿಸಿದ ವೆರೋನಿಕಾ ಕುದೆರ್‌ಮೆತೋವ –ಎಎಫ್‌ಪಿ ಚಿತ್ರ

2018ರ ಟೂರ್ನಿಯಲ್ಲಿ ಸೆಮಿಫೈನಲ್ ಮತ್ತು ಮುಂದಿನ ವರ್ಷ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಮ್ಯಾಡಿಸನ್ ಮೊದಲ ಸೆಟ್‌ನಲ್ಲಿ ಏಕಪಕ್ಷೀಯ ಜಯ ಸಾಧಿಸಿದ್ದರು. ಆದರೆ ಮುಂದಿನ ಎರಡು ಸೆಟ್‌ಗಳಲ್ಲಿ ಕುದೆರ್‌ಮೆತೋವಾ ಅವರ ಆಕ್ರಮಣಕಾರಿ ಆಟಕ್ಕೆ ಬೆದರಿ ಲಯ ಕಳೆದುಕೊಂಡರು.

ಮತ್ತೊಂದು ಪಂದ್ಯದಲ್ಲಿ ರಷ್ಯಾದ ದಾರ್ಯ ಕಸತ್ಕಿನ ಇಟಲಿಯ ಕಮಿಲಾ ಜಾರ್ಜಿ ವಿರುದ್ಧ 6-2, 6-2ರಲ್ಲಿ ಜಯ ಗಳಿಸಿದರು.

ಸಿಟ್ಸಿಪಾಸ್‌ಗೆ ಆಘಾತ: ವಿಶ್ವ ರ‍್ಯಾಂಕಿಂಗ್‌ನಲ್ಲಿ 4ನೇ ಸ್ಥಾನದಲ್ಲಿರುವ ಸ್ಟೆಫನೋಸ್ ಸಿಟ್ಸಿಪಾಸ್ ಅವರಿಗೆ ಡೆನ್ಮಾರ್ಕ್‌ನ 40ನೇ ರ‍್ಯಾಂಕಿನ ಹೋಲ್ಗರ್ ರೂನೆ ಆಘಾತ ನೀಡಿದರು. ರೂನೆ 7–5, 3–6, 6–3, 6–4ರಿಂದ ಜಯ ಸಾಧಿಸಿದರು.

ನಡಾಲ್ ಅಸಮಾಧಾನ

ಸ್ಪೇನ್‌ನ ರಫೆಲ್ ನಡಾಲ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ನಡುವೆ ಮಂಗಳವಾರ ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯ ಕುತೂಹಲಕ್ಕೆ ಕಾರಣವಾಗಿದೆ. ಆದರೆ ಈ ಪಂದ್ಯವನ್ನು ರಾತ್ರಿ ಅವಧಿಯಲ್ಲಿ ನಡೆಸುವ ನಿರ್ಧಾರಕ್ಕೆ ನಡಾಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಫ್ರೆಂಚ್ ಓಪನ್ ಟೂರ್ನಿಯಲ್ಲಿ ಕಳೆದ ಬಾರಿ ರಾತ್ರಿ ಅವಧಿಯನ್ನು ಆರಂಭಿಸಲಾಗಿತ್ತು. ಪಂದ್ಯಗಳು ಸ್ಥಳೀಯ ಕಾಲಮಾನ 9 ಗಂಟೆಗೆ ಆರಂಭವಾಗುತ್ತವೆ.

ಕ್ವಾರ್ಟರ್ ಫೈನಲ್ ಪಂದ್ಯವನ್ನು ಈ ಅವಧಿಯಲ್ಲಿ ನಡೆಸುವುದನ್ನು ವಿರೋಧಿಸಿರುವ ನಡಾಲ್ 'ಆವೆಮಣ್ಣಿನಲ್ಲಿ ನಾನು ರಾತ್ರಿ ಅವಧಿಯಲ್ಲಿ ಆಡಲು ಇಚ್ಛಿಸುವುದಿಲ್ಲ. ಇದು ಅತ್ಯಂತ ಕಠಿಣ ಸವಾಲಾಗಿದ್ದು ಪಂದ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದರು.

ಪ್ರಫುಲ್‌ಗೆ ನಾಯಕತ್ವ

ಬೆಂಗಳೂರು: ಪ್ರಫುಲ್ ಕುಮಾರ್ ವೈ. ವಿ. ಅವರು ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದಲ್ಲಿ ಕರ್ನಾಟಕದ 18 ವರ್ಷದೊಳಗಿನವರ ಫುಟ್‌ಬಾಲ್ ತಂಡದಲ್ಲಿ ನಾಯಕತ್ವ ವಹಿಸಲಿದ್ದಾರೆ.

ರಾಜ್ಯ 18 ಮಂದಿಯ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ. ಹರಿಯಾಣದ ಪಂಚಕುಲಾದಲ್ಲಿ ಜೂನ್ 4ರಿಂದ 13ರವರೆಗೆ ಖೇಲೊ ಇಂಡಿಯಾ ಕ್ರೀಡಾಕೂಟ ನಿಗದಿಯಾಗಿದೆ.

ತಂಡ ಇಂತಿದೆ: ಪ್ರಫುಲ್ ಕುಮಾರ್ ವೈ. ವಿ. (ನಾಯಕ), ಸುಜಯ್ ಎಸ್., ಹರ್ಷಿತ್ ಗೌಡ, ಸುಮನ್ ಎಸ್. ದೇವ್, ಯುಕೇಶ್ ಡಿ, ಹರ್ಷಿತ್ ಸಿ.ಎಸ್, ಹಿಮದೀಪ್ ಗೌಡ, ಮದನ್ ಟಿ.ಎಂ, ಮ್ಯಾಕರ್ಟನ್ ಲೂಯಿಸ್ ನಿಕ್ಸನ್, ಅಲನ್ ಸಂಜಯ್ ಕ್ಸೇವಿಯರ್, ಪರಿಶುದ್ಧ, ಎಸ್.ಎ. ಅಭಿರಾಮ್, ಜಸಿರ್ ಸೈಯದ್ ಖಾಜಿ, ಅಜಯ್ ಕದಂ, ಆಶಿಶ್ ಬೆಕ್‌ಹ್ಯಾಮ್, ಶರತ್ ರಾಜಕುಮಾರ್, ವಿಶಾಲ್ ಆರ್, ಅಮೋಘ ಗಚ್ಚಿ. ಕೋಚ್‌ಗಳು: ಶಿವ ಗಜೇಂದ್ರನ್, ಚಂದ್ರಶೇಖರ್ ರಾವ್.


ಶಿವರ್ ಮತ್ತು ಬ್ರಂಟ್ ಮದುವೆ ಸಂಭ್ರಮ –ಇಂಗ್ಲೆಂಡ್ ಕ್ರಿಕೆಟ್ ಟ್ವಿಟರ್ ಚಿತ್ರ

ಶೀವರ್–ಬ್ರಂಟ್ ವಿವಾಹ

ಲಂಡನ್ (ಪಿಟಿಐ): ಇಂಗ್ಲೆಂಡ್ ಮಹಿಳಾ ಕ್ರಿಕೆಟ್ ತಂಡದ ನತಾಲಿ ಶೀವರ್ ಮತ್ತು ಕ್ಯಾಥರಿನ್ ಬ್ರಂಟ್ ಭಾನುವಾರ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಈ ಜೋಡಿಯನ್ನು ಅಭಿನಂದಿಸಿ ಸಾಮಾಜಿಕ ತಾಣಗಳಲ್ಲಿ ಇಂಗ್ಲೆಂಡ್ ಕ್ರಿಕೆಟ್ ಪೋಸ್ಟ್ ಹಾಕಿದೆ.

2017ರಲ್ಲಿ ಮಹಿಳೆಯರ ಏಕದಿನ ವಿಶ್ವಕಪ್ ಟೂರ್ನಿಯ ಚಾಂಪಿಯನ್ ಆದ ಇಂಗ್ಲೆಂಡ್ ತಂಡದಲ್ಲಿ ಇವರಿಬ್ಬರೂ ಆಡಿದ್ದರು. ಫೈನಲ್‌ನಲ್ಲಿ ಇಂಗ್ಲೆಂಡ್ ತಂಡ ಭಾರತ ಮಹಿಳಾ ತಂಡವನ್ನು ಮಣಿಸಿತ್ತು. ಈ ವರ್ಷದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಇಂಗ್ಲೆಂಡ್ ರನ್ನರ್ ಅಪ್ ಆಗಿತ್ತು. ಆ ಟೂರ್ನಿಯಲ್ಲೂ ಇವರಿಬ್ಬರು ಆಡಿದ್ದರು. ಬ್ರಂಟ್ ಜೊತೆ ನಿಶ್ಚಿತಾರ್ಥ ಆಗಿರುವುದಾಗಿ ನಥಾಲಿ 2019ರಲ್ಲಿ ಘೋಷಿಸಿದ್ದರು. ಕೋವಿಡ್‌ನಿಂದಾಗಿ ಮದುವೆಯನ್ನು ಮುಂದೂಡಲಾಗಿತ್ತು.

'ವಾರಾಂತ್ಯದಲ್ಲಿ ವಿವಾಹವಾದ ಕ್ಯಾಥರಿನ್ ಬ್ರಂಟ್ ಮತ್ತು ನತಾಲಿ ಶೀವರ್ ಅವರಿಗೆ ನಮ್ಮ ಹೃದಯಸ್ಪರ್ಶಿ ಅಭಿನಂದನೆ' ಎಂದು ಇಂಗ್ಲೆಂಡ್ ಕ್ರಿಕೆಟ್ ಟ್ವೀಟ್ ಮಾಡಿದೆ. ನಾಯಕಿ ಹೀದರ್ ನೈಟ್, ಡ್ಯಾನಿಯಲಿ ವ್ಯಾಟ್, ಇಸಾ ಗುಹಾ ಮತ್ತು ಜೆನಿ ಗನ್ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಚೆಸ್: ಮುಕುಂದ್, ಸುದೀಕ್ಷಗೆ ಪ್ರಶಸ್ತಿ

ಬೆಂಗಳೂರು: ಮುಕುಂದ್ ಕೃಷ್ಣನ್ ಮಲ್ಲೋಲನ್ ಮತ್ತು ಸುದೀಕ್ಷ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಯೋಜಿಸಿದ್ದ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ಕೊನೆಗೊಂಡ ಟೂರ್ನಿಯ 16 ವರ್ಷದೊಳಗಿನವರ ವಿಭಾಗದಲ್ಲಿ ಮುಕುಂದ್ ಐದರಲ್ಲಿ ಐದೂ ಪಂದ್ಯಗಳನ್ನು ಜಯಿಸಿದರು. ತರುಣ್ ಪ್ರವೀಣ್ 2ನೇ ಸ್ಥಾನ ಗಳಿಸಿದರು. 10 ವರ್ಷದೊಳಗಿನವರ ವಿಭಾಗದಲ್ಲಿ ಸುದೀಕ್ಷ ಕೂಡ ಐದು ಪಂದ್ಯ ಗೆದ್ದರು. ಪ್ರಣವ್ ಗೌಡ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಶ್ರೀಶಂಕರ್‌ಗೆ ಚಿನ್ನ


ಶ್ರೀಶಂಕರ್

ನವದೆಹಲಿ (ಪಿಟಿಐ): ಒಲಿಂಪಿಯನ್ ಅಥ್ಲೀಟ್, ಭಾರತದ ಮುರಳಿ ಶ್ರೀಶಂಕರ್ ಅವರು ಈ ಋತುವಿನಲ್ಲಿ ಎರಡನೇ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಗ್ರೀಸ್‌ನ ಚಾನಿಯಾದಲ್ಲಿ ನಡೆದ ಕೂಟದ ಲಾಂಗ್‌ಜಂಪ್‌ನಲ್ಲಿ ಅವರು ಅಗ್ರಸ್ಥಾನ ಗಳಿಸಿದರು.

ಶ್ರೀಶಂಕರ್ 7.95 ಮೀ. ಜಂಪ್ ಮಾಡಿದರು. ಫ್ರಾನ್ಸ್‌ನ ಜೂಲ್ಸ್ ಪೊಮ್ಮರಿ (7.73 ಮಿ.) ಮತ್ತು ಇರ್ವನ್ ಕೊನಾಟೆ (7.71 ಮಿ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.

ಗ್ರೀಸ್‌ನ ಕಲಿಥೀಯಾದಲ್ಲಿ ಐದು ದಿನಗಳ ಹಿಂದೆ ನಡೆದ ಸ್ಪರ್ಧೆಯಲ್ಲಿ ಅವರು 8.31 ಮೀಟರ್ಸ್ ಸಾಧನೆಯೊಂದಿಗೆ ಮೊದಲಿಗರಾಗಿದ್ದರು.

ಈಜು ಕೂಟ: ಮಾನಾ ಮಿಂಚು

ನವದೆಹಲಿ (ಪಿಟಿಐ): ಒಲಿಂಪಿಯನ್ ಈಜುಪಟು ಭಾರತದ ಮಾನಾ ಪಟೇಲ್ ಅವರು ಫ್ರಾನ್ಸ್‌ನಲ್ಲಿ ನಡೆದ ಮೇರ್ ನಾಸ್ಟಮ್ ಕ್ಯಾನೆಟ್ ಲೆಗ್ ಈಜು ಕೂಟದ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ 'ಭಾರತದ ಶ್ರೇಷ್ಠ ಸಮಯ' ದಾಖಲಿಸಿದ್ದಾರೆ.

ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ 22 ವರ್ಷದ ಮಾನಾ, ಭಾನುವಾರ 1 ನಿಮಿಷ 3.69 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇದರೊಂದಿಗೆ ತಮ್ಮದೇ ಹೆಸರಿನಲ್ಲಿದ್ದ 'ಭಾರತದ ಶ್ರೇಷ್ಠ ಸಮಯ'ವನ್ನು ಉತ್ತಮಪಡಿಸಿಕೊಂಡರು. ಕಳೆದ ವರ್ಷ ಬೆಲ್‌ಗ್ರೇಡ್ ಕೂಟದಲ್ಲಿ ಅವರು 1 ನಿ. 3.77 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು. ಫ್ರಾನ್ಸ್ ಈಜು ಕೂಟದಲ್ಲಿ ಒಟ್ಟಾರೆ 15ನೆಯವರಾಗಿ ಗುರಿ ಮುಟ್ಟಿ ಬಿ ಫೈನಲ್‌ಗೆ ಅರ್ಹತೆ ಗಳಿಸಿದ್ದರು.

ಶೂಟಿಂಗ್: ಪದಕಗಳ ಸುತ್ತಿಗೆ ಭಾರತ ತಂಡಗಳು

ನವದೆಹಲಿ (ಪಿಟಿಐ): ಭಾರತದ ಮಹಿಳಾ ಮತ್ತು ಪುರುಷರ 10 ಮೀಟರ್ಸ್ ಏರ್ ರೈಫಲ್ ವಿಭಾಗದ ತಂಡಗಳು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಪದಕದ ಸುತ್ತಿಗೆ ಪ್ರವೇಶಿಸಿವೆ.

ಅಜರ್‌ಬೈಜಾನ್‌ನ ಬೈಕುನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಇಳವೆನ್ನಿಲಾ ವಾಳರಿವನ್, ರಮಿತಾ ಮತ್ತು ಶ್ರೇಯಾ ಅಗರವಾಲ್ ಅವರಿದ್ದ ಮಹಿಳಾ ತಂಡವು ಫೈನಲ್ ತಲುಪಿದ್ದು, ಮಂಗಳವಾರ ಡೆನ್ಮಾರ್ಕ್ ಎದುರು ಸೆಣಸಲಿದ್ದಾರೆ.

ಪುರುಷರ ವಿಭಾಗದಲ್ಲಿ ರುದ್ರಾಂಕ್ಷ್ ಬಾಳಾಸಾಹೇಬ್ ಪಾಟೀಲ್, ಧನುಷ್ ಶ್ರೀಕಾಂತ್ ಮತ್ತು ಪಾರ್ಥ್ ಮಖೀಜಾ ಕಂಚಿನ ಪದಕದ ಸುತ್ತಿಗೆ ಕಾಲಿಟ್ಟಿದ್ದಾರೆ.

ಡಿಸೆಂಬರ್‌ನಲ್ಲಿ ಭಾರತ–ಆಸ್ಟ್ರೇಲಿಯಾ ಮಹಿಳಾ ಟಿ20 ಸರಣಿ

ಮೆಲ್ಬರ್ನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ತವರಿನಲ್ಲಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಐದು ಪಂದ್ಯಗಳ ಟಿ20 ಸರಣಿಯನ್ನು ಡಿಸೆಂಬರ್‌ನಲ್ಲಿ ಆಡಲಿದೆ.

ಕ್ರಿಕೆಟ್ ಆಸ್ಟ್ರೇಲಿಯಾದ ವೇಳಾಪಟ್ಟಿಯಲ್ಲಿ ಈ ಕುರಿತು ಪ್ರಸ್ತಾಪಿಸಲಾಗಿದ್ದು, ದಿನಾಂಕ ಮತ್ತು ಪಂದ್ಯಗಳು ನಡೆಯುವ ಸ್ಥಳಗಳನ್ನು ಖಚಿತಪಡಿಸಿಲ್ಲ. ಭಾರತ ತಂಡವು ಮಾರ್ಚ್‌ನಲ್ಲಿ ನಡೆದ ಏಕದಿನ ವಿಶ್ವಕಪ್‌ನಲ್ಲಿ ಕೊನೆಯ ಪಂದ್ಯ ಆಡಿತ್ತು. ಬರ್ಮಿಂಗ್‌ಹ್ಯಾಮ್‌ನಲ್ಲಿ ಜುಲೈನಲ್ಲಿ ನಿಗದಿಯಾಗಿರುವ ಕಾಮನ್‌ವೆಲ್ತ್ ಗೇಮ್ಸ್, ಬಳಿಕ ಸೆಪ್ಟೆಂಬರ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಆ ತಂಡದ ಎದುರು ಸರಣಿಯಲ್ಲಿ ಭಾಗವಹಿಸಲಿದೆ.